



ಲೇಖಕರು: ಗುರಲಿಂಗಪ್ಪ ಬಸಪ್ಪ ಸಜ್ಜನ
ನಿವೃತ್ತ ಅಧ್ಯಾಪಕರು, ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ.
ನಿವೃತ್ತ ಪ್ರಾಚಾರ್ಯರು, ಜನಸೇವಾ ವಸತಿಸಹಿತ ಪದವಿಪೂರ್ವ ಮಹಾವಿದ್ಯಾಲಯ, ಚನ್ನೇನಹಳ್ಳಿ(ಬೆಂಗಳೂರ)
#1235, 4th cross, D block, AECS layout, Kundalahalli, Bangalore 560037
Mob: 7829674160, G mail: sajjan.guru@gmail.com




ನನ್ನ ತಂದೆ ದಿ ಬಸಪ್ಪ ಸಜ್ಜನ ಮಾಸ್ತರ, ಗಂಜೀಹಾಳ ಇವರ ಸ್ಮರಣಾರ್ಥ ಪ್ರಕಟಿತ

## ವಚನಾಮೃತ ಬಿಂದು 1
## ಗುರುವಿನ ಮಾರ್ಗದರ್ಶನ

12 ನೇಯ ಶತಮಾನದಲ್ಲಿ ಶರಣರು ರಚಿಸಿದ ವಚನಗಳೆಷ್ಟು?
ಎನ್ನುವ ವಿಚಾರ ಮನಕ್ಕೆ ಹೊಳೆದಾಗ ನೆನಪಾಗುವದು
ಶಿವಯೋಗಿ ಸಿದ್ದರಾಮೇಶ್ವರ ಅವರ ವಚನ

1612

**ಅಲ್ಲಯ್ಯಗಳ ವಚನ ಎರಡೆಂಬತ್ತು ಕೋಟಿ.**

**ಅಪ್ಪಯ್ಯಗಳ ವಚನ ನಾಲ್ಕು ಲಕ್ಷದ ಮೂವತ್ತಾರು ಸಾಸಿರ.**

**ಎಮ್ಮಯ್ಯಗಳ ವಚನ ವಚನಕ್ಕೊಂದು.**

**ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ.**

**ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾಸಿರ.**

**ಎಮ್ಮಕ್ಕ ನಾಗಾಯಿಯ ವಚನ ಮೂರುಲಕ್ಷದ ತೊಂಬತ್ತಾರು ಸಾಸಿರ.**

**ಮಡಿವಾಳಣ್ಣನ ವಚನ ಮೂರು ಕೋಟಿಮುನ್ನೂರು.**

**ಹಡಪದಯ್ಯಗಳ ವಚನ ಹನ್ನೊಂದು ಸಾಸಿರ.**

**ಮರುಳಸಿದ್ಧನ ವಚನ ಅರುವತ್ತೆಂಟು ಸಾಸಿರ.**

**ಇಂತಪ್ಪ ವಚನದ ರಚನೆಯ ಬಿಟ್ಟು, ಹುಡಿಮಣ್ಣ ಹೊಯ್ಯದೆ ಮಾಬನೆ,**

**ಕುತ್ಸಿ ಕಾವ್ಯಾಲಂಕಾರ ನೋಡುವರ ನೋಡಿ,**

**ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನಾ. /200**

(https://lingayatreligion.com/K/Vachanagalu/SiddharameshwaraVachana.htm)
(ನಾನು ಉಪಯೊಗಿಸಿರುವ ವಚನಗಳ ಮುಂದೆ ಇರುವ ಅಂಕಿಗಳು lingayatreligion.com ದಲ್ಲಿಯ ಸಂಖ್ಯೆಗಳು.)

ವಚನಗಳನ್ನು ನಮಗಾಗಿ ಹುಡುಕಿ ಶ್ರಮವಹಿಸಿ ಉಳಿಸಿಕೊಟ್ಟ ಮತ್ತು ಅವುಗಳ ಅರ್ಥ ಮನನ ಮಾಡಿಕೊಟ್ಟ ಮಹಾನುಭಾವರಿಗೆ ನನ್ನ ನಮನಗಳನ್ನು ಮೊದಲು ಅರ್ಪಿಸುತ್ತೇನೆ. ಈಗ ಲಭ್ಯವಾಗಿರುವ ವಚನಗಳ ಸಂಖ್ಯೆಯನ್ನು ಗಮನಿಸಿದರೆ ನಾವು ಕಳೆದುಕೊಂಡ ಅಗಾಧ ಅಮೂಲ್ಯವಾದ ವಚನ ಸಂಪತ್ತೆಷ್ಟು ಅನ್ನುವದನ್ನು ತಿಳಿದು ಮನಕ್ಕೆ ನೋವಾಗುತ್ತದೆ.
ಲಭ್ಯವಿರುವ ವಚನಗಳಲ್ಲಿ ನಾನು ಓದಿದ್ದು ಬೆರಳೆಣಿಕೆಯಷ್ಟು ವಚನಗಳನ್ನು ಮಾತ್ರ. ಆ ಕೆಲವು ವಚನಗಳನ್ನು ಅಧ್ಯಯನ ಮಾಡಿದಾಗ ಎಲ್ಲ ಶರಣರು "ಕೂಡಲಸಂಗಮದೇವ" ತತ್ವದ ವಿವರಣೆ ತಮ್ಮದೇ ಆದ ರೀತಿಯಲ್ಲಿ

ಮಾಡಿರುವದು ಕಾಣಸಿಗುತ್ತದೆ. ಅವರ ವಿಚಾರಗಳಲ್ಲಿ ಸಮನ್ವಯತೆ ಇದೆ. ಎಲ್ಲರೂ ತರ್ಕಭದ್ದವಾಗಿ ತಮ್ಮ ವಿಚಾರಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಿದ್ದಾರೆ. ಶರಣರು ವಚನಗಳಲ್ಲಿ ಪ್ರಸ್ತುತ ಪಡಿಸಿರುವ ತತ್ವಗಳನ್ನು ಅರಿಯುವ ಪ್ರಯತ್ನ ಇಂದಿನ ವಿಜ್ಞಾನಿಗಳು ಮಾಡುತ್ತಿದ್ದಾರೇನೋ ಅನಿಸುತ್ತಿದೆ.
ಶರಣರು ವ್ಯಕ್ತಮಾಡುವ ತತ್ವಗಳಲ್ಲಿ ಮತ್ತು ವಿಜ್ಞಾನಿಗಳು ಪ್ರಸ್ತುತ ಪಡಿಸಿದ ತತ್ವಗಳಲ್ಲಿರುವ ಸಮಾನತೆಗಳ ಅಧ್ಯಯನ ಮಾಡುವ ಪ್ರಯತ್ನ ಇಲ್ಲಿದೆ.
ನಾನಿಲ್ಲಿ ಒದಗಿಸಿರುವ ಎಲ್ಲ ಚಿತ್ರಗಳನ್ನು ಮತ್ತು ವಿಷಯ ವಿವರಗಳನ್ನು Google ದಿಂದ ಪಡೆದುಕೊಂಡಿರುವೆ. ನಾನಿಲ್ಲಿ ಉದಾಹರಿಸಿದ ವಚನಗಳನ್ನು
https://lingayatreligion.com/K/Vachanagalu/Vachanagalu.htm
ಮತ್ತು ಶರಣರ ಜೀವನ ಚರಿತೆಯನ್ನು
https://lingayatreligion.com/K/Sharanaru/Sharanaru.htm ದಿಂದ ಪಡೆದುಕೊಂಡಿರುವೆ. https://vachana.sanchaya.net/ ದಿಂದ ದೊರೆತ ಮಾಹಿತಿಗಳನ್ನು ಅಲ್ಲಲ್ಲಿ ಉಪಯೋಗಿಸಿರುವೆ. ನನ್ನ ಕೆಲವು ಲೇಖನಗಳನ್ನು vachanascience.com ದಲ್ಲಿ ಬರೆದಿರುವೆ.
ಗಣಿತ ವಿಧ್ಯಾರ್ಥಿಯಾದ ನನಗೆ ವಚನ ಸಾಹಿತ್ಯದ ಆಳ ಅಗಲ ಗೊತ್ತಿಲ್ಲದ ಕಾರಣ ನಾನು Google ನಲ್ಲಿ ಸಿಕ್ಕ ಮಾಹಿತಿಗಳನ್ನು ಸರಿ ಎಂದು ನಂಬಿ ಅಲ್ಲಿದ್ದಂತೆಯೇ ಉಪಯೋಗಿಸಿರುವೆ. ಅದರಲ್ಲಿ ತಪ್ಪುಗಳು ನುಸುಳಿದ್ದರೆ ದಯಮಾಡಿ ತಿಳಿಸಿ ತಿದ್ದಿಕೊಳ್ಳುವೆ. ಕೆಲವೊಂದು ಸಲ source ಹೇಳಿಲ್ಲ ಕ್ಷಮಿಸಿ. ಆ ಲೇಖನಗಳನ್ನು ಬರೆದ ಆ ಎಲ್ಲ ಲೇಖಕರಿಗೆ ಧನ್ಯವಾದಗಳು. ಅನಿವಾರ್ಯವಾಗಿ ಅಲ್ಲಲ್ಲಿ ಇಂಗ್ಲೀಷ ವಿವರಣೆ ಉಪಯೋಗಿಸಿರುವೆ ಅದು ನನಗೆ ಭಾಷಾಂತರ ಮಾಡುವ ಪರಿಣಿತಿ ಇಲ್ಲದ್ದರಿಂದಾದ ಪ್ರಮಾದ.
ಆ ಎಲ್ಲ ವಿವರಗಳನ್ನು ಶರಣರು ಸರಳವಾದ ಸುಂದರವಾದ ವಚನಗಳಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ವಿವರಿಸಿದ್ದು ಅವರ ಪ್ರತಿಭೆಗೆ ಸಾಕ್ಷಿ.
ನಾನು ಅಲ್ಲಲ್ಲಿ ವಚನಗಳನ್ನು ಉದಾಹರಿಸಿರುವೆ ಅವು ನನ್ನ ವಿಚಾರಗಳಿಗೆ ಪೂರಕವಾಗಿವೆ. ಒಮ್ಮೊಮ್ಮೆ ಅವು ಅಪ್ರಸ್ತುತ ಎನಿಸಿದರೂ ಅವುಗಳಲ್ಲಿರುವ ಭಾವ ನನಗೆ ಮಾರ್ಗದರ್ಶನ ಮಾಡಿದೆ. ಹೆಚ್ಚು ಸಾಲುಗಳಿರುವ ವಚನಗಳ ಭಾಗವನ್ನಷ್ಟೇ ಕೆಲವು ಕಡೆ ಅನಿವಾರ್ಯವಾಗಿ ಉಪಯೋಗಿಸಿರುವೆ.
ಕೆಳಗಿನ ಎರಡು ಘಟನೆಗಳು ನನಗೆ ಮಾರ್ಗದರ್ಶನ ಮಾಡುತ್ತವೆ.
**ಘಟನೆ 1.** (1978, ಕಲಬುರಗಿ)
ನನ್ನ ಮಗನನ್ನ ಕರೆದುಕೊಂಡು ಶರಣಬಸವೇಶ್ವರ ಜಾತ್ರೆಗೆ ಹೋಗಿದ್ದೆ.
ಸ್ವಲ್ಪ ಸಮಯದ ನಂತರ ನನ್ನ ಮಗ ಕಾಣಿಸಲಿಲ್ಲ.
ಅಲ್ಲೇ ಸಮೀಪದಲ್ಲಿ ಕಂಡ ಒಬ್ಬ ಪೊಲೀಸನೊಡನೆ ನಡೆದ ಸಂವಾದ ಗಮನಿಸಿ ಎಲ್ಲರೂ ನನ್ನನ್ನು ಕರೆಯುವದು "ಗುರಣ್ಣ" ಎಂದು
**ಗುರಣ್ಣ :** ನನ್ನ ಮಗ ಕಳೆದುಹೋಗಿದ್ದಾನೆ ದಯಮಾಡಿ ಹುಡುಕಿಕೊಡಿ.

**ಪೊಲೀಸ್**: ನಿಮ್ಮ ಮಗನ ಚಹರೆ ವಿವರಿಸಿ.
**ಗುರಣ್ಣ** : ಅವ ದಪ್ಪ, ಎತ್ತರ, ಮತ್ತು ನಸುಕೆಂಪ ಅದಾನ. ಕೆಂಪ ಅಂಗಿ ಮತ್ತು ಕರಿ ಪ್ಯಾಂಟ ಹಾಕೊಂಡಾನ.
**ಪೋಲಿಸ್:** ಅವನಿಗೆ ವಯಸ್ಸೆಷ್ಟು?
**ಗುರಣ್ಣ :** ಎರಡುವರೆ ವರ್ಷ
ಅವನು ನಗತೊಡಗಿದ.
**ಗುರಣ್ಣ:** ಏಕೆ ಏನಾಯಿತು.
**ಪೋಲಿಸ್:** ನಿಮ್ಮ ಮಗ ನಿಮ್ಮ ಹೆಗಲ ಮೇಲೆ ಆರಾಮಾಗಿ ಕುಂತಾನ  ಸುಮ್ಮನೆ ಎಲ್ಲಾ ಕಡೆ ಹುಡುಕಾಕ ಹತ್ತೀರಿ.




ಮಗ ಸಿಕ್ಕ ಸಂತೋಷ ನನಗಾಯಿತು. ಹುಡುಕಿಕೊಟ್ಟ ಸಮಾಧಾನ ಪೋಲಿಸನಿಗಾಯಿತು. ಗುಂಡಕಲ್ಲಿನಂತೆ ಸುಮ್ಮನೆ ಹೆಗಲ ಮೇಲೆ ಕುಳಿತ ಮಗನ ಮೇಲೆ ಸಿಟ್ಟು ಬಂತು. ಏನು ಮಾಡುವದು ಅವನಿರುವದೇ ಹಾಗೆ.
ನನ್ನ ಮಗನನ್ನು ಹುಡುಕಿಕೊಟ್ಟ ಪೋಲಿಸನಿಗೆ ಧನ್ಯವಾದ ಹೇಳಿ ಮನೆಗೆ ಮರಳಿದೆ.
ಮೇಲೆ ವಿವರಿಸಿದಂತಹ ಒಂದು ಪ್ರಕರಣ 12 ನೇಯ ಶತಮಾನದಲ್ಲಿ ಬಸವಕಲ್ಯಾಣದಲ್ಲಿ ನಡೆಯಿತು.
**ಘಟನೆ 2.** (12 ನೇಯ ಶತಮಾನ, ಕಲ್ಯಾಣ)
ಶರಣ ಗುಪ್ತ ಮಂಚಣ್ಣ ಒಂದು ದಿನ ಒಬ್ಬ ಶರಣನನ್ನು ಭೆಟ್ಟಿಯಾಗಿ
**"ನನ್ನ ರಾಮನಾಥನನ್ನು ಹುಡುಕಿಕೊಡು"** ಎಂದ.
ಶರಣ ನಿನ್ನ ರಾಮನಾಥ ಹೇಗಿದ್ದಾನೆ ವಿವರಿಸು ಎಂದ. ಗುಪ್ತ ಮಂಚಣ್ಣ ಕಣ್ಮುಚ್ಚಿ ರಾಮನಾಥನನ್ನು ನೆನೆದುಕೊಂಡು ಅವನ ಚಹರೆ ವಿವರಿಸಿದ

**“ಮರುಳನ ಊಟದಂತೆ, ಮಯೂರನ ನಿದ್ರೆಯಂತೆ, ಮಾರ್ತಾಂಡನ ಕಿರಣದಂತೆ,**

**ಸ್ಫಟಿಕದ ಘಟದಂತೆ, ಕಟಕದಲ್ಲಿ ತೋರುವ ಅಸಿಯ ರಸೆಯಂತೆ, ಹೊದ್ದಿಯೂ ಹೊದ್ದದಂತೆ,**

**ಇದ್ದೂ ಇಲ್ಲದಂತೆ, ಕಂಡೂ ಕಾಣದಂತೆ ಕೇಳಿಯೂ ಕೇಳದಂತೆ ಇಪ್ಪ"**

ಸ್ವಲ್ಪ ಯೋಚಿಸಿ ಶರಣ ಹೇಳಿದ **"ಕಣ್ಣು ತೆಗೆ ನಿನ್ನ ರಾಮನಾಥ ಸಿಕ್ಕ"** ಎಂದ. ಶರಣ ಮಂಚಣ್ಣನವರಿಗೆ ತುಂಬಾ ಸಂತೋಷವಾಯಿತು ಕಣ್ಣು ತೆರೆದು "ತೋರಿಸು ಬೇಗ ತೋರಿಸು" ಎಂದರು ಕಾತರದಿಂದ.
ಶರಣ ಮಂಚಣ್ಣನವರನ್ನು ಮುಟ್ಟಿ ಹೇಳಿದ

**"ಅವನು ನಿನ್ನೊಳಗುಂಟು, ನೀನು ಅವನೊಳಗುಂಟು".**

ಮಂಚಣ್ಣನವರಿಗೆ ತುಂಬಾ ಸಂತೋಷವಾಯಿತು
**"ಸುಳಿವ ಜಂಗಮಮೂರ್ತಿಯ ಕಂಡು ನಮೋ ನಮೋ ಎಂಬೆ ನಾರಾಯಣಪ್ರಿಯ ರಾಮನಾಥಾ"**

ಎನ್ನುತ್ತಾ ಮುಂದೆ ಸಾಗಿದರು.

### ಹಡಪದ ಲಿಂಗಮ್ಮತಾಯಿ ವಚನ:

**ಕಂಗಳ ಮುಂದಣ ಬೆಳಗ ಕಾಣದೆ, ಕಂಡಕಂಡವರ ಹಿಂದೆ ಹರಿದು,**

**ಇನ್ನು ಬೇರೆ ಕಂಡೆನೆಂಬ ಭಂಗಿತರ ನೋಡಾ ?**

**ತನ್ನಲ್ಲಿ ತಾ ಸುಯಿದಾನಿಯಾಗಿ ನೋಡಲರಿಯದೆ, ಬಿsನ್ನಗಣ್ಣಿಲಿ ನೋಡಿಹೆನೆಂದು**

**ತಮ್ಮ ಮರೆದು ಇನ್ನುಂಟೆಂದು ಅರಸುವ ಅಣ್ಣಗಳಿರಾ, ನೀವು ಕೇಳಿರೆ.**

**ಮನವು ಮಹದಲ್ಲಿ ನಿಂದುದೆ ಲಿಂಗ ಕರಣಂಗಳರತುದೆ ಕಂಗಳ ಮುಂದಣ ಬೆಳಗು.**

**ಇದನರಿಯದೆ, ಮುಂದೆ ಘನವುಂಟೆಂದು ತೊಳಲಿ ಬಳಲಿ ಅರಸಿಹೆನೆಂದು**

**ಅರೆಮರುಳಾಗಿ ಹೋದರಯ್ಯಾ ನಿಮ್ಮ ನೆಲೆಯನರಿಯದೆ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ./29**

ಇವೆರಡು ಘಟನೆಗಳಿಂದ ಅರಿವಾದ ವಿಚಾರಗಳು.

1. ನನ್ನ ಹೊರಗಿನ ವಿಷಯಗಳನ್ನು ನಾನು ಅರಿಯುವದು ಬಹಳ ಸುಲಭ.
2. ನನ್ನ ಒಳಗಿರುವ ವಸ್ತುವನ್ನರಿಯಲು ಒಬ್ಬ ವ್ಯಕ್ತಿ ಅಥವಾ ಸಾಧನದ ಅಥವಾ ತತ್ವದ ಅವಶ್ಯಕತೆ ಇದೆ. ಅರಿವನ್ನು ಮೂಡಿಸುವ ವ್ಯಕ್ತಿಗೆ, ತತ್ವಕ್ಕೆ ಅಥವಾ ಸಾಧನಕ್ಕೆ "ಗುರು" ಎಂದು ಕರೆದು ಗುರುವಿನ ಬಗ್ಗೆ ಶರಣರು ತಮ್ಮ ವಚನಗಳಲ್ಲಿ ವಿವರವಾಗಿ ವಿವರಿಸಿದ್ದಾರೆ ಮತ್ತು ತುಂಬಾ ಮಹತ್ವದ ಸ್ಥಾನ ನೀಡಿದ್ದಾರೆ.
3. ಕೂಡಲಸ0ಗಮದೇವನ ಅರಿಯಲು ಗುರುವನ್ನು ಹುಡುಕಬೇಕು ಮತ್ತು ಅವನ ಕರುಣೆಯಾಗಬೇಕು.

"ಗುರು" ಪದವನ್ನು 159 ವಚನಕಾರರು 5789 ವಚನಗಳಲ್ಲಿ 10152 ಕಡೆಗಳಲ್ಲಿ ಉಪಯೋಗಿಸಿದ್ದಾರೆ. ಇಲ್ಲಿ ಕೆಲವು ವಚನಗಳನ್ನು ಉದಾಹರಿಸಿರುವೆ

**1.** ಚಂದಿಮರಸ ವಚನ:

ಗುರು ಹೇಳಿದುದನೆರಡಿಲ್ಲದೆ ನಂಬಿ ಶಿರದಲ್ಲಿ ಮನವಿರಿಸಿ ಪೆರತೇನುವ ನೆಮ್ಮದೆ

ನಿಂದಲ್ಲಿ ನೀನೆ ಸಿಮ್ಮಲಿಗೆಯ ಚೆನ್ನರಾಮಾ! / 47

2. ಚಂದಿಮರಸ ವಚನ:

**ಅರಿವುದೊಂದೆ ಎರಡಾಗಬಲ್ಲುದೊಂದೆ,**

**ಬೇರೆ ತೋರಬಲ್ಲುದದೊಂದೆ, ತನ್ನ ಮರೆಯಬಲ್ಲುದದೊಂದೆ,**

**ತಾನಲ್ಲದನ್ಯವಿಲ್ಲೆಂದರಿದ ಅರಿವು ನೀನೆ, ಸಿಮ್ಮಲಿಗೆಯ ಚೆನ್ನರಾಮಾ. / 5**

3. ಗಜೇಶ ಮಸಣಯ್ಯ

**ಅಹುದಹುದು, ಲಿಂಗವಿಲ್ಲದೆ ಶಿಷ್ಯನನರಿಯಬಲ್ಲ ಗುರು, ಲಿಂಗವಿಲ್ಲದೆ ಗುರುವನರಿಯಬಲ್ಲ**

**ಶಿಷ್ಯ. ಗುರುವನರಿಯಬಲ್ಲ ಶಿಷ್ಯ, ಶಿಷ್ಯನನರಿಯಬಲ್ಲ ಗುರು,**

**ಇವರಿಬ್ಬರ ಭೇದವ ನೀನೆ ಬಲ್ಲೆ ಗಜೇಶ್ವರಾ. / ೨**

**ಈಗ ನಾವು "ಕೂಡಲಸಂಗಮದೇವ" ನನ್ನು ಹುಡುಕಲು ಯಾರನ್ನು ಕೇಳುವದು?**

ಇಂದು ಭೌತ ವಿಜ್ಞಾನ, ಜೀವಶಾಸ್ತ್ರ ವಿಜ್ಞಾನ, ರಸಾಯನಶಾಸ್ತ್ರ ವಿಜ್ಞಾನ, ತರ್ಕಶಾಸ್ತ್ರ, ತತ್ವಶಾಸ್ತ್ರ, .... ಇತ್ಯಾದಿ ಎಲ್ಲ ವಿಷಯಗಳು ಅಘಾಧವಾಗಿ ಬೆಳೆದಿದ್ದು, ಒಬ್ಬನೇ ವ್ಯಕ್ತಿ ಎಲ್ಲ ವಿಷಯಗಳ ಪರಿಣಿತಿಯನ್ನು ಹೊಂದುವದು ಅಸಾಧ್ಯ. ಅದಕ್ಕಾಗಿಯೇ ಪರಿಣಿತರ ತಂಡ ರಚಿಸಿ ಅಧ್ಯಯನ ಮಾಡುವ ಪದ್ದತಿ ರೂಢಿಯಲ್ಲಿದೆ.

ಹನ್ನೆರಡನೇಯ ಶತಮಾನದಲ್ಲಿ ಕಲ್ಯಾಣದಲ್ಲಿ ದೇಶದ ವಿವಿಧ ಭಾಗದಿಂದ ಬಂದ ಲಕ್ಷಾಂತರ ಶರಣರೆಲ್ಲ ಸೇರಿ **"ಅನುಭವ ಮಂಟಪ"** ದಲ್ಲಿ ಅಧ್ಯಯನ ಮಾಡಿದ್ದು ಈ ವಿಚಾರ ವಿನಿಮಯ ಪದ್ದತಿಗೆ ಬುನಾದಿ.

ಸಧ್ಯಕ್ಕೆ ಜಿನೇವಾ ನಗರದಲ್ಲಿರುವ **CERN** (The European Organization for Nuclear Research, Established in 1954 ) ಪ್ರಯೋಗಾಲಯದಲ್ಲಿ **110** ದೇಶಗಳ **18000** ವಿಜ್ಞಾನಿಗಳ ತಂಡ "ದೇವಕಣ" ದ ಅಧ್ಯಯನ ನಡೆಸಿದೆ.







**ನನ್ನ ಕಲ್ಪನೆ :**

ನಮಗೆ ಗುರುವಾಗಿ ಮಾರ್ಗದರ್ಶನ ಮಾಡಬಲ್ಲ ಅನೇಕ ವಿಷಯಗಳಲ್ಲಿ ಪರಿಣಿತರಿರುವ ಒಂದು ತಂಡವಿದೆ ಎಂದು ಭಾವಿಸಿ, ಆ ತಂಡಕ್ಕೆ **"ಅರುಣ"** ಎಂದು ಕರೆದಿರುವೆ. ಅವನೊಡನೆ ನಡೆದ ಸಂವಾದ ಇಲ್ಲಿದೆ.

(ಅರುಣ ಸೂರ್ಯನ ಸಾರಥಿ, ಬೆಳಕು ತರುವವ, ನಾನು ಜ್ಞಾನ ಸಾರಥಿ "ಗುರು" ಎಂಬರ್ಥದಲ್ಲಿ ಉಪಯೋಗಿಸಿರುವೆ)

**ಗುರಣ್ಣ:** "ಕೂಡಲ ಸಂಗಮದೇವ" ನನ್ನ ನಿಮಗೆ ಹುಡುಕಿಕೊಡಲಾಗುತ್ತ?

**ಅರುಣ :** ಅವನ ಕುರುಹು ತಿಳಿಸಿದರೆ ಹುಡುಕಿ ಕೊಡಲು ಪ್ರಯತ್ನ ಮಾಡುವೆ.

**ಗುರಣ್ಣ :** ಗುಪ್ತ ಮಂಚಣ್ಣವಚನ:

> **ಮರುಳನ ಊಟದಂತೆ, ಮಯೂರನ ನಿದ್ರೆಯಂತೆ, ಮಾರ್ತಾಂಡನ ಕಿರಣದಂತೆ, ಸ್ಫಟಿಕದ ಘಟದಂತೆ, ಕಟಕದಲ್ಲಿ ತೋರುವ ಅಸಿಯ ರಸೆಯಂತೆ, ಹೊದ್ದಿಯೂ ಹೊದ್ದದಂತೆ, ಇದ್ದೂ ಇಲ್ಲದಂತೆ, ಕಂಡೂ ಕಾಣದಂತೆ ಕೇಳಿಯೂ ಕೇಳದಂತೆ ಇಪ್ಪ------/81**

ಈ ವಚನದಲ್ಲಿ ಕೂಡಲಸಂಗಮದೇವನ ಕುರುಹನ್ನು ಕಾಣಬಹುದು.

**ಅರುಣ :** "ಇದ್ದೂ ಇಲ್ಲದಂತೆ, ಕಂಡೂ ಕಾಣದಂತೆ ಮತ್ತು ಕೇಳಿಯೂ ಕೇಳದಂತೆ" ಇರುವ ಅನೇಕ ತತ್ವಗಳ ವಿಜ್ಞಾನದಲ್ಲಿವೆ. ಅದಕ್ಕಾಗಿ ನೀವು ಇನ್ನಷ್ಟು ನಿಖರವಾದ ಗುರುತು ಹೇಳಬೇಕು.
**ಗುರಣ್ಣ :** ಶಿವಯೋಗಿ ಷಣ್ಮುಖಸ್ವಾಮಿ ವಚನ

> **ಎನ್ನ ಕರಸ್ಥಲದಲ್ಲಿ ಲಿಂಗಮೂರ್ತಿಯಾಗಿ ನೆಲೆಗೊಂಡನಯ್ಯ ಶ್ರೀಗುರುದೇವನು.**
> **ಎನ್ನ ಜಿಹ್ವಾಸ್ಥಲದಲ್ಲಿ ಮಂತ್ರಮೂರ್ತಿಯಾಗಿ ನೆಲೆಗೊಂಡನಯ್ಯ ಶ್ರೀಗುರುದೇವನು.**
> **ಎನ್ನ ಮನಸ್ಥಲದಲ್ಲಿ ಸ್ವಾನುಭಾವಜ್ಞಾನಮೂರ್ತಿಯಾಗಿ ನೆಲೆಗೊಂಡನಯ್ಯ**
> **ಶ್ರೀಗುರುದೇವನು ಅಖಂಡೇಶ್ವರಾ.** / 127

ಈ ವಚನದಲ್ಲಿ ಶಿವಯೋಗಿ ಷಣ್ಮುಖಸ್ವಾಮಿ ಅವರು

(1) ನಿರಂಜನದ ಕುರುಹು
(2) ಅರುಹಿನ ಕಳೆ
(3) ಮಹಾಜ್ಞಾನದ ಬೆಳಗು

ಎಂಬ ಮೂರು ತತ್ವಗಳನ್ನು ಉಪಯೋಗಿಸಿ ಕೂಡಲಸಂಗಮದೇವನನ್ನು ವರ್ಣಿಸಿದ್ದಾರೆ
**ಅರುಣ:** ಇನ್ನೊಂದು ವಚನ ಹೇಳಿ ವಿವರಿಸಿ ನನಗಿನ್ನಿಷ್ಟು ವಿವರ ಸಿಗಬಹುದು..
**ಗುರಣ್ಣ:** ತೋಂಟದ ಶಿದ್ಧಲಿಂಗೇಶ್ವರ ಶಿವಯೋಗಿಗಳ ವಚನ

> **ನಿಃಕಲ ಶಿವತತ್ವದಲ್ಲಿ ಜ್ಞಾನಚಿತ್ತು ಉದಯವಾಯಿತ್ತು.**
> **ಆ ಚಿತ್ತಿನಿಂದ ಆಕಾರ ಉಕಾರ ಮಕಾರಗಳೆಂಬ ಅಕ್ಷರತ್ರಯಂಗಳಾದವು.**
> **ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ.**
> **ಇಂತೀ ತ್ರಿವಿಧಕಕ್ಕೆ ತಾಯಿ ಚಿತ್ತು.**
> **ಇಂತೀ ನಾಲ್ಕು ಒಂದಾದಲ್ಲಿ ಓಂಕಾರವೆಂಬ ಪ್ರಣವದುತ್ಪತ್ತಿಯಾಯಿತ್ತು.**
> **ಆ ಓಂಕಾರವೆಂಬ ಪ್ರಣವವೇ, ಅಖಂಡ ಪರಿಪೂರ್ಣ ಗೋಳಕಾಕಾರ**
> **ತೇಜೋಮೂರ್ತಿಯಪ್ಪಮಹಾಲಿಂಗನೋಡಾ,**
> ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. / 398

**ಅರುಣ:** ಸರಿ. ನೀವು ಉದಾಹರಿಸಿದ ವಚನ ಸಾಕಷ್ಟು ವಿವರಗಳನ್ನು ಸಾದರಪಡಿಸುತ್ತಿದೆ. ಇಲ್ಲಿ ಉಪಯೋಗಿಸಿರುವ **"ತ್ರಿತತ್ವ"** ಅರ್ಥಮಾಡಿಕೊಡಲು ನಾನೊಂದು ಉದಾಹರಣೆ ಕೊಡುವೆ.
ಕೆಳಗಿನ ವಿವರಣೆ ಗಮನಿಸಿ ನಿಮಗೆ ಬೇರೆ ವಚನಗಳು ನೆನಪಿಗೆ ಬರಬಹುದು.

1. **ವಸ್ತು:**

ಈಗ ನಿಮ್ಮ ಟೇಬಲ ಮೇಲೆ ಒಂದೇ ಅಳತೆಯ ಎರಡು ಕಬ್ಬಿಣದ ತುಂಡುಗಳಿವೆ ಎಂದು ಕಲ್ಪಿಸಿಕೊಳ್ಳಿ. ಎರಡೂ ಕೈಯಲ್ಲಿ ಒಂದೊಂದು ತುಂಡು ಹಿಡಿದು ನೋಡಿ. ಎರಡಕ್ಕೂ ಒಂದೇ ಆಕಾರವಿದೆ, ಒಂದೇ ತೂಕವಿದೆ ನಿಮಗೆ ಯಾವ ವ್ಯತ್ಯಾಸವೂ ಕಾಣಿಸುವದಿಲ್ಲ. ಎರಡೂ ಸಾಕಾರ ವಸ್ತುಗಳು. ಇವೆರಡೂ ಕಬ್ಬಿಣದ ಅಣುಗಳಿಂದ ಮಾಡಲ್ಪಟ್ಟಿರುವ ವಸ್ತುಗಳು.

**2. ಶಕ್ತಿ:**

ಈಗ ಎರಡೂ ತುಂಡುಗಳನ್ನು ನಿಮ್ಮ ಟೇಬಲ್ಲಿನ ಮೇಲಿರುವ ಟಾಚಣಿ (ಗುಂಡುಪಿನ್ನಿರುವ) ಡಬ್ಬಿಯಲ್ಲಿಟ್ಟು ಮೇಲೆ ತೆಗೆಯಿರಿ. ನಿಮಗೊಂದು ಅಚ್ಚರಿ ಕಾಯ್ದಿದೆ. ಒಂದು ಕಬ್ಬಿಣದ ತುಂಡಿನ ತುದಿಗೆ ಪಿನ್ನುಗಳು ಹಿಡಿಯಲ್ಪಟ್ಟಿದ್ದರೆ, ಇನ್ನೊಂದು ಕಬ್ಬಿಣದ ತುಂಡಿನ ತುದಿಗೆ ಯಾವ ಪಿನ್ನುಗಳು ಹತ್ತಿಲ್ಲ.

ಯಾಕೆ ಹೀಗೆ?

ಪಿನ್ನು ಹತ್ತಿದ ಕಬ್ಬಿಣದ ತುಂಡಿನಲ್ಲಿ ಯಾವುದೋ ಅವ್ಯಕ್ತವಾದ ಕಬ್ಬಿಣ ಸೆಳೆದುಕೊಳ್ಳುವ ಶಕ್ತಿ ಇದೆ.

ಈ ಅವ್ಯಕ್ತ ಶಕ್ತಿಗೆ ಕಾಂತೀಯ ಶಕ್ತಿ **(Magnetic force)** ಎನ್ನುತ್ತಾರೆ. ಕಾಂತ ಶಕ್ತಿಯಿರುವ ಕಬ್ಬಿಣದ ಪಟ್ಟಿಗೆ ಕಾಂತ ಪಟ್ಟಿ **(Bar magnet)** ಎನ್ನುತ್ತಾರೆ. ಅದನ್ನು ಗುರುತಿಸಲು ಬಣ್ಣ ಹಚ್ಚುತ್ತಾರೆ.

ಆ ಕಾಂತಶಕ್ತಿ ನಿರಾಕಾರ. ಅದು ನಮಗೆ ಕಾಣುವದಿಲ್ಲ, ಆಕಾರವಿಲ್ಲ, ತೂಕವಿಲ್ಲ ಆದರೆ ಅದು ಮಾಡುವ ಕೆಲಸವನ್ನು ನೋಡಿ ಅದು ಇದೆಯೋ ಇಲ್ಲವೇ ಎನ್ನುವದನ್ನು ನಿರ್ಧರಿಸಬಹುದು.

**ಇದ್ದೂ ಇಲ್ಲದಂತೆ, ಕಂಡೂ ಕಾಣದಂತೆ ಇಪ್ಪ ಭಾಗದ ವಿವರ ಇಲ್ಲಿದೆ.**

ನಿಮ್ಮ ಕೈಯಲ್ಲಿಯ ಪಿನ್ನನ್ನು ಅದರ ಸಮೀಪಕ್ಕೆ ತಂದಾಗ ಅದು ಜಗ್ಗುತ್ತದೆ ಎಂಬ ಅನುಭವ ನಿಮಗಾಗುತ್ತೆ.

ಅಂದರೆ ನಿಮ್ಮ ಅನುಭವದ ಆಧಾರದಿಂದ ಮತ್ತು ಅದು ಮಾಡುವ ಕೆಲಸದಿಂದ ಅದು ಇದೆ ಎಂಬುದು ನಿಮಗೆ ಗೊತ್ತಾಗುತ್ತದೆ.



**Magnetic force, attraction or repulsion that arises between electrically charged particles because of their motion. It is the basic force responsible for such effects as the action of electric motors and the attraction of magnets for iron.**

**3. ಕ್ಷೇತ್ರ:**

ಕಾಂತಪಟ್ಟಿ ಒಂದು ಬಿಳಿಹಾಳೆಯ ಕೆಳಗೆ (ಮಧ್ಯದಲ್ಲಿ ) ಇಟ್ಟು ಅದರ ಮೇಲೆ ಕಬ್ಬಿಣದ ಪುಡಿ ಹಾಕಿಬಿಡಿ. ನಿಮಗೊಂದು ಆಶ್ಚರ್ಯ ಕಾದಿದೆ ಆ ಕಬ್ಬಿಣದ ಪುಡಿಯ ಕಣಗಳು ಚಲಿಸಲು ಪ್ರಾರಂಭಿಸಿ ತುಸು ಹೊತ್ತಲ್ಲಿ ಅಲ್ಲೊಂದು ಕಬ್ಬಿಣ ಪುಡಿಗಳಿಂದಾದ ಚಿತ್ರ ಕಾಣುತ್ತದೆ. ಒಂದು ತುದಿಯಿಂದ ಇನ್ನೊಂದು ತುದಿಗೆ ನಿರ್ಧಿಷ್ಟ ಪಥದಲ್ಲಿ ಸಾಗುವ ರೇಖೆಗಳು ಅಲ್ಲಿವೆ. ಇದಕ್ಕೆ ಅಲ್ಲಿ ಕಾಂತಕ್ಷೇತ್ರವಿದೆ ಎನ್ನುತ್ತೇವೆ



Reveal a magnetic field's shape and study the interaction between the magnetic poles using iron filings

ವಸ್ತು, ಶಕ್ತಿ ಮತ್ತು ಕ್ಷೇತ್ರವನ್ನು ವಿವರಿಸುವ ಚಿತ್ರ ಇಲ್ಲಿದೆ.



**A magnetic field is a vector field that describes the magnetic influence of electric charges in relative motion and magnetized materials. A charge that is moving parallel to a current of other charges experiences a force perpendicular to its own velocity.**

ಒಟ್ಟಾರೆಯಾಗಿ "ಕಾಂತಪಟ್ಟಿ" **(1)** ವಸ್ತು **(2)** ಶಕ್ತಿ ಮತ್ತು **(3)** ಕ್ಷೇತ್ರ "**ತ್ರಿತತ್ವ**" ಗಳ ಸಂಗಮ

**ಗುರಣ್ಣ:** ಅರೇ "ಸಂಗಮ" ಎನ್ನುವ ಶಬ್ದ ಅರ್ಥವಾಯಿತಲ್ಲ!



ಅಲ್ಲಮಪ್ರಭು ವಚನ:

**ಅರಿವು ಅರಿವು ಎನುತಿಪ್ಪಿರಿ, ಅರಿವು ಸಾಮಾನ್ಯವೆ ?**

**ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು.**

**ಮುಂದಣ ಹೆಜ್ಜೆಯಳಿದಲ್ಲದೆ, ಒಂದು ಪಾದ ನೆಲೆಗೊಳ್ಳದು.**

**ನೆಲನ ಬಿಟ್ಟು ಆಕಾಶದಲ್ಲಿ ನಿಂದು ಮುಗಿಲೊಳಗೆ ಮಿಂಚಿದಲ್ಲದೆ ತಾನಾಗಬಾರದು. -**

**ಗುಹೇಶ್ವರನೆಂಬುದು ಬರಿದೆ ಬಹುದೆ ಹೇಳಿರೆ ?** / 220.

**ಗುರಣ್ಣ:** ನೀವು ಹೇಳಿದ "ತ್ರಿತತ್ವ"ದ ವಿವರಣೆ ನಮಗೆ ದಾರಿತೋರಿಸಬಹುದು ಎನಿಸುತ್ತದೆ.

"ಕೂಡಲಸಂಗಮದೇವನು" ಈ ಮೂರು ತತ್ವಗಳ ಸಂಗಮವಾಗಿರಬಹುದೇನೋ?

**ಅರುಣ :** ಹಾಗಾದರೆ ನಾವು ಮೂರುತತ್ವಗಳಾದ

**(1)** ವಸ್ತು **(2)** ಶಕ್ತಿ ಮತ್ತು **(3)** ಕ್ಷೇತ್ರ ಗಳ ಬಗ್ಗೆ ವಿವರವಾಗಿ ಅರಿಯೋಣ.

## ವಚನಾಮೃತ ಬಿಂದು 2
## ಕೂಡಲಸಂಗಮದೇವನನ್ನು ಅರಿಯಲು ಬೇಕಾದ ಮೊದಲ ತತ್ವ:
# ವಸ್ತು

**ಗುರಣ್ಣ:**

**ಅಕ್ಕಮಹಾದೇವಿಯವರ ವಚನ**

ಈಳೆ ನಿಂಬೆ ಮಾವು ಮಾದಲಕೆ ಹುಳಿನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ ಸಿಹಿನೀರನೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವು ಒಂದೆ.
ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿಬೇರಾಗಿಹ ಹಾಗೆ,
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿ ಬೇರೆ./78

**"ಇಂತೀ ಜಲವು ಒಂದೆ ನೆಲನು ಒಂದೆ ಆಕಾಶವು ಒಂದೆ."** ಎನ್ನುವ ವಚನ ಭಾಗದಲ್ಲಿ ಅಕ್ಕಮಹಾದೇವಿಯವರು ವಿಶ್ವ ಒಂದೇ ತೆರನಾದ ವಸ್ತುವಿನಿಂದಾಗಿದೆ ಎಂದು ಹೇಳಿದ್ದಾರೆ.
ಅಣ್ಣ ಬಸವಣ್ಣನವರು ತಮ್ಮ ಈ ವಚನದಲ್ಲಿ ಈ ಮಾತನ್ನು ಸಮರ್ಥಿಸುತ್ತಾರೆ




**"ನಾದ ಬಿಂದು ಕಳಾತೀತ ಆದಿಯಾಧಾರ ನೀನೆ ಅಯ್ಯ"** ಎಂಬ ವಚನ ಭಾಗದಲ್ಲಿ ಈ ವಿಶ್ವದಲ್ಲಿರುವ ಎಲ್ಲ ವಸ್ತುಗಳು ಮೂರು ಗುಣಗಳುಳ್ಳ ಒಂದೇ (ತತ್ವ) ದ್ರವ್ಯದಿಂದಾಗಿದೆ ಎಂದು ಹೇಳಿ ಅಕ್ಕನ ಮಾತನ್ನು ಸಮರ್ಥಿಸಿದ್ದಾರೆ.




ತಾತ್ವಿಕವಾಗಿ "ನಾದ, ಬಿಂದು, ಕಳಾತೀತ" ಶಬ್ದಗಳ ಅರ್ಥವನ್ನು ಅನೇಕ ಶರಣರು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ.

**ಅರುಣ:** ನಾವಿಲ್ಲಿ ಅವುಗಳ ವೈಜ್ಞಾನಿಕ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುವಾ.

**ಗುರಣ್ಣ :** ಜಗತ್ತಿನಲ್ಲಿರುವ ವಿವಿಧ ವಸ್ತುಗಳ ರಚನೆಯ ರಹಸ್ಯ ಕಂಡಿಹಿಡಿಯಲು ಮಾನವ ಮಾಡಿದ ದೊಡ್ಡಾಟ ಅರಿಯುವ ಪ್ರಯತ್ನ ಮಾಡಬೇಕಾಗಿದೆ.

**ಗಂಗಾ**: ಅಲ್ರಿ "ಕೂಡಲಸಂಗಮದೇವ" ನ ಬಗ್ಗೆ ಹೇಳಾಕ ಅಂತ ಶುರುಮಾಡಿ ಏನೇನೋ ಹೇಳಾಕ ಹೊಂಟೀರಲ್ಲ. ಊಟಕಿಂತಾ ಉಪ್ಪಿನಕಾಯಿ ಜಾಸ್ತಿಯಾಯ್ತು.

**ಗುರಣ್ಣ:** ನಿಜವಾಗಿಯೂ ಇದು ದೇವರ ದೊಡ್ಡಾಟ. ಜಗತ್ತಿನಲ್ಲಿರುವ ವಿವಿಧ ವಸ್ತುಗಳ ರಚನೆಯ ರಹಸ್ಯ ಕಂಡುಹಿಡಿಯಲು ಮಾನವ ಮಾಡಿದ ದೊಡ್ಡಾಟ.

**ಗಂಗಾ:** ಆಗಲಿ ಹೇಳಿ ಮಹಾಪ್ರಭು

**ಗುರಣ್ಣ:** ಮೊನ್ನೆ ಔಷಧ ಗುಳಗೀ ಎರಡು ಭಾಗ ಮಾಡಲು ಒಂದು ಡಬ್ಬಿ ತಂದಿದ್ದು ನೆನಪಾಯಿತೇನು?

**ಗಂಗಾ:** ಹೌದ್ರಿ, ಅದು ಸರಿಯಾಗಿ ಗುಳಗಿನ ಎರಡು ಭಾಗ ಮಾಡತ್ತೈತಿ

**ಗುರಣ್ಣ:** ವಸ್ತುವನ್ನು ಎರಡು ಭಾಗ ವಿಭಾಗಿಸುವಂತಹ ಒಂದು ಯಂತ್ರ ನಮ್ಮ ಹತ್ತಿರ ಇದೆ ಅಂತ ತಿಳ್ಕೋ. ಈಗ ಒಂದು ಕಬ್ಬಿಣದ ತುಂಡು ಭಾಗ ಮಾಡಿದರೆ ಏನಾಗುತ್ತ ?

**ಗಂಗಾ:** ಎರಡು ಕಬ್ಬಿಣದ ತುಂಡು ಸಿಗುತ್ತವೆ ಅಲ್ಲ.

**ಗುರಣ್ಣ :** ಅದರಗಿನ ಒಂದು ತುಂಡ ಮಶೀನದಾಗ ಹಾಕಿದರೆ ಏನಾಗತ್ತೈತಿ ?

**ಗಂಗಾ:** ಎರಡು ಕಬ್ಬಿಣದ ತುಂಡು ಸಿಗುತ್ತವೆ.

**ಗುರಣ್ಣ :** ಅದರಗಿನ ಒಂದು ತುಂಡ ಮಶೀನದಾಗ ಹಾಕಿದರೆ ಏನಾಗತ್ತೈತಿ ?

**ಗಂಗಾ:** ಎರಡು ಸಣ್ಣ ಸಣ್ಣ ಕಬ್ಬಿಣದ ತುಂಡು ಸಿಗುತ್ತವೆ. ನಿಮಗ ಕೆಲಸ ಇಲ್ಲ ಹಿಂಗ ತುಂಡ ಮಾಡಿಕೊಂತ ಕುಂಡ್ರಿ, ನನಗ ಅಡಗಿಮನ್ಯಾಗ ಕೆಲಸ ಒಟ್ಟೈತಿ, ಹೋಗತೀನಿ

**ಗುರಣ್ಣ :** ಸಿಟ್ಟಿಗೇಳಬ್ಯಾಡ ಹಿಂಗ ತುಂಡ ಮಾಡ್ತಾ ಮಾಡ್ತಾ ಹೋದ್ರ ಕೊನೆಗೆ ತುಂಡಮಾಡ್ಲಾಕ ಸಾಧ್ಯವಿಲ್ಲದಂತಹ ಒಂದು ಕಬ್ಬಿಣದ ಸಣ್ಣ ಕಣ ಸಿಗುತ್ತದೆ ಅದಕ್ಕ ಕಬ್ಬಿಣದ ಆ ಕಣಕ್ಕೆ "ಅಣು" ಅಂತಾರ

**ಗಂಗಾ:** ನನಗ ಗೊತ್ತಾತು ಬಿಡ್ರಿ . ಇದನ್ನ ಕಂಡು ಹಿಡಿದವಗ "ಕಣ ಅದ" ಅಂದರ "ಕಣಾದ" ಅಂತ ಕರೆದಿರಬೇಕು.

**ಗುರಣ್ಣ :** ಅಂತೂ ನೀನು ಸಂಶೋಧಕಿ ಆದಿ ನೋಡು. ಸಂಶೋಧನೆ ನಡೆಯೋದು ಹಿಂಗೇನೆ.

**ಅರುಣ:** "ಕಣ" ಶಬ್ದ ನೆನಪುಮಾಡಿಕೊಡುವದು ನಮ್ಮ ದೇಶದಲ್ಲಿ ಸುಮಾರು ಎರಡುವರೆ ಸಾವಿರ ವರ್ಷಗಳ ಹಿಂದೆ ಅಪೂರ್ವ ಸಂಶೋಧನೆ ಮಾಡಿ ಇಂದಿನ "ಭೌತ ವಿಜ್ಞಾನ" ಕ್ಕೆ ತಳಹದಿ ಹಾಕಿಕೊಟ್ಟ ಋಷಿ "ಕಣಾದ" (ಕಶ್ಯಪ).

**ಕಣಾದ:**

ಮೊದಲ ಬಾರಿಗೆ ನಿತ್ಯದ್ರುವ್ಯಗಳ ವಿಶ್ಲೇಷಣೆ ಮತ್ತು ಸಂಶ್ಲೇಷಣೆಗಳನ್ನು ವಿವರಿಸಿ ಮಹದ್ರೂಪದಿಂದ ಅಣುರೂಪಕ್ಕೆ, ಮತ್ತೆ ಅಣುರೂಪದಿಂದ ಮಹದ್ರೂಪಕ್ಕೆ ದ್ರುವ್ಯಗಳ ಸ್ಥಿತ್ಯಂತರವನ್ನು ಸಾಧಿಸಿ ತೋರಿದವನಿವನಾದ್ದರಿಂದ ಈತ ಅಣುಭಕ್ಷಕ. ಮನಸ್ಸು ಮತ್ತು ಆತ್ಮ ಈ ದ್ರುವ್ಯದ ಭಾಗವೆನ್ನುವ ಅವರ ವಿಚಾರ ನಿಜವಾಗಿಯೂ ಇಂದಿನ ವಿಜ್ಞಾನಿಗಳು ಪರಿಗಣಿಸಬೇಕಾಗಿದೆ.

ಅಣು ಮತು ಉಪಪಮಾಣುಗಳ ವಿವರ ಶರಣರಿಗೆ ಗೊತ್ತಿತ್ತು ಎನ್ನುವ ಮಾತನ್ನು ಶಿವಯೊಗಿ ಸಿದ್ದರಾಮೆಶ್ವರ ಅವರು ವಚನದಿಂದ ಗೊತ್ತಾಗುತ್ತದೆ.

ಆದರೆ ಈ ದ್ರುವ್ಯವನ್ನು ನಿಜ ವಿಶ್ವದಲ್ಲಿ ಕಂಡುಹಿಡಿಯುವದು ಹೇಗೆ ಎನ್ನುವದು ಎಲ್ಲರ ಮುಂದಿರುವ ಪ್ರಶ್ನೆ.

**ಗಂಗಾ:** ಈ ವಿಷಯದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯವೇನು?

**ಅರುಣ :** ಈ ವಿಷಯವಾಗಿ ಕಳೆದ ಮೂರು ನಾಲ್ಕು ಸಾವಿರ ವರ್ಷಗಳಿಂದ ಅಧ್ಯಯಯನ ನಡೆದಿದೆ. ಆ ವಿಷಯವಾಗಿ ಅಧ್ಯಯನ ಪ್ರಾರಂಭವಾದದ್ದು ನಮ್ಮ ದೇಶದಲ್ಲಿಯೇ.



ಕ್ರಿ ಪೂ ಮೂರನೆ ಶತಮಾನದಲ್ಲಿದ್ದ ಇವನು ಕನ್ನಡಿಗನು . ಇವನು ಅಣು, ಪರಮಾಣುಗಳ ರಚನೆಯ ಬಗ್ಗೆ ಅಭ್ಯಸಿಸಿ ಗ್ರಂಥಗಳನ್ನು ಲೇಖಿಸಿದನು ಈಗಿನ ಅಣು-ಸಿದ್ಧಾಂತಗಳನ್ನು ಆಗಲೇ ಬೋಧಿಸಿ "ವಿಷೇಷಿಕ ಸೂತ್ರ" ಎಂಬ ಗ್ರಂಥವನ್ನು ಬರೆದನು.




ತನ್ನ ಗ್ರಂಥದಲ್ಲಿ ಪರಮಾಣುವಿನ ಗಾತ್ರವು ಒಂದನೇ ಬಿಲಿಯನ್ ಮೀಟರ್ ಎಂದು ಉಲ್ಲೇಖಿಸಿದ್ದಾನೆ "ಕಣ" ಎಂದರೆ ಅಣು. "ಅದ" ಎಂದರೆ ಭಕ್ಷಿಸಿದವನು.. ಆದ್ದರಿಂದ ಕಣಾದನೆಂದರೆ ಅಣುಭಕ್ಷಕ ಎಂದು ವಿಮರ್ಶಕರು ಅರ್ಥ ಕಲ್ಪಿಸುವುದುಂಟು. ಕಣಾದ (ಕಶ್ಯಪ ಋಷಿ) ಎಲ್ಲ ದ್ರವ್ಯಗಳು "ಪರಮಾಣುಗಳಿಂದ" ರಚನೆಯಾಗಿವೆ ಎಂದು ಸಾಧಿಸಿ ತೋರಿಸಿದರು ಮತ್ತು **"Every object of creation is made of atoms which in turn connect with each other to form molecules"** ಆಚಾರ್ಯ ಕಣಾದರು ವಿವರಿಸಿದರು.

**ಅರುಣ :** ಅಂದಿನಿಂದ ಇಂದಿನವರೆಗೆ ಸಾವಿರಾರು ವಿಜ್ಞಾನಿಗಳ ಸತತ ಪ್ರಯತ್ನದ ಫಲವಾಗಿ "ಅಣು ವಿಜ್ಞಾನ" ದಲ್ಲಿಯ ತತ್ವಗಳನ್ನು ಅಧ್ಯಯನ ಮಾಡಿ ಅಣ್ಣಾ ಹೇಳಿದ ದ್ರವ್ಯದ ರಚನೆಯ ನಿಖರವಾದ ವಿವರ ಕೊಡುವ ಹಂತದಲ್ಲಿದ್ದಾರೆ. ಯವುದೇ ವಸ್ತು ತೆಗೆದುಕೊಂಡರೂ ಅದು ಕಣಗಳ ಸಮೂಹ ಎನ್ನುವದು ನಮಗೆಲ್ಲರಿಗೂ ಗೊತ್ತು.

**ಗುರಣ್ಣ:** ಶರಣರಿಗೂ ಅಣುವಿನ ವಿವರ ಗೊತ್ತಿತ್ತು ಎನ್ನುವದನ್ನು ಶಿವಯೋಗಿ ಸಿದ್ಧರಾಮೆಶ್ವರರ ಈ ವಚನ ತಿಳಿಸುತ್ತದೆ.

**ಅಣುವಿನೊಳಗೆ ಅಣುವಾಗಿಪ್ಪಿರಿ, ಎಲೆ ದೇವಾ, ನೀವು;**

**ಮನದೊಳಗೆ ಘನವಾಗಿಪ್ಪಿರಿ ಎಲೆ ದೇವಾ. ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?**

**ಎಂಬತ್ತು ನಾಲ್ಕು ಲಕ್ಷ ಶಿವಾಲಯಂಗಳ ಮಾಡಿ ನೀವು ಒಮ್ಮನದೊಳಗಿಪ್ಪುದ ಕಂಡು ನಾನು**

**ಮಾಡಿದೆನಲ್ಲದೆ, ಕಪಿಲಸಿದ್ಧಮಲ್ಲಯ್ಯಾ, ಎನಗೆ ಬೇರೆ ಸ್ವತಂತ್ರವಿಲ್ಲವೆಂದರಿವೆನು. / 72**




**ಅರುಣ :** ಗೋಚರವಾಗುವ ಮತ್ತು ಗೋಚರವಾಗದ ವಿಶ್ವದೆಲ್ಲೆಡೆ ಅಣುವಿನೊಳಗಿನ ಉಪಪರಮಾಣು ಹರಡಿಕೊಂಡಿದೆ

**" ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?"** ಎಂದು ವಿವರಿಸಿದ್ದಾರೆ. ಇಲ್ಲಿ ಶಿವಯೋಗಿ ಶಿದ್ದರಾಮೇಶ್ವರರು ತಮ್ಮ ಈ ವಚನದಲ್ಲಿ ಅಣುವಿನೊಳಗಿಪ್ಪ ಭಾಗವು ಇಡೀ ಜಗವೆಲ್ಲ ಆವರಿಸಿದೆ ಎಂದು ಹೇಳಿ . **ಇದನ್ನರಿತರೆ ದೇವನನ್ನು ಕಾಣಲು ಸಾಧ್ಯ ಎನ್ನುವ ಮಾತನ್ನು ಹೇಳಿದ್ದಾರೆ** ಈಗ ನಡೆಯುತ್ತಿರುವ ಸಂಶೋಧನೆಗಳೆಲ್ಲ ಈ ಮಾತನ್ನು ಸಮರ್ಥಿಸುತ್ತಿವೆ ಎನ್ನುವ ವಿವರ ಅರಿಯುವ ಪ್ರಯತ್ನ ಮಾಡುವಾ.

**ವಿಶ್ವ ಉಪಪರಮಾಣುಗಳ ಸಮೂಹ :**

ಸುಮಾರು ಎರಡುವರೆ ಸಾವಿರ ವರ್ಷದ ಮೊದಲು ಅಣುವಿನ ಬಗ್ಗೆ ಭಾರತೀಯ ವಿಜ್ಞಾನಿ **"ಕಣಾದ"** ಮತ್ತು ಅನೇಕ ಭಾರತೀಯ ತಜ್ಞರು ಕೆಲವು ವಿವರ ಪ್ರಕಟಿಸಿದ ನಂತರ ಕ್ರಿ ಶ **1850** ರ ವರೆಗೆ ಈ ವಿಷಯವಾಗಿ ಹೆಚ್ಚಿನ ಅಧ್ಯಯನ ನಡೆಯಲಿಲ್ಲ.

ಆನಂತರ ಆದ ಬೆಳವಣಿಗೆಗಳು ಅಪರಿಮಿತ. ಅಘಾದ ಪ್ರಮಾಣದಲ್ಲಿ ಯಾರೂ ಊಹಿಸಿದ ರೀತಿಯಲ್ಲಿ ಸಂಶೋಧನೆಗಳು ನಡೆದು ಜಗತ್ತಿಗೆ ಹೊಸ ದಾರಿ ದೊರೆಯಿತು. ಈ ವಿಷಯಗಳನ್ನು ಅರ್ಥಮಾಡಿಕೊಳ್ಳುವದು ಗಗನಕುಸುಮ. ಅದಕ್ಕಾಗಿ ನಾನು ಚಿತ್ರಗಳ ಮೂಲಕ ವಿಷಯ ವಿವರಿಸಲು ಪ್ರಯತ್ನಿಸುವೆ. (ಇದು ತುಂಬಾ ಸರಳ ವಿಧಾನ ವಿಷಯ ಅರ್ಥವಾಗದಿದ್ದರೂ ಭಾವ ಮತ್ತು ಸಾರಾಂಶ ಮನಕ್ಕೆ ಮುಟ್ಟುತ್ತದೆ. ಅಷ್ಟು ಸಾಕು. ಮಕ್ಕಳು ಸಿನಿಮಾ ನೋಡಿ ಅರ್ಥಮಾಡಿಕೊಳ್ಳುವ ಹಾಗೆ)

ಸಾವಿರಾರು ವರ್ಷಗಳ ಮೊದಲು ಭಾರತದ ವಿಜ್ಞಾನಿ **ಕಣಾದ** ಹಾಗೂ ಆಮೇಲೆ ಗ್ರೀಸ್ ದೇಶದ **ಡೆಮೋಕ್ರಿಟಿಸ್**,

**"ವಸ್ತುಗಳ ಅತಿ ಸಣ್ಣ ರೂಪವೆಂದರೆ ಪರಮಾಣು ಮತ್ತು ಪರಮಾಣುಗಳು ಅವಿಭಾಜ್ಯ"**

ಎಂದು ಪ್ರಸ್ತುತಪಡಿಸಿದರು.

<u>**ಜಾನ್ ಡಾಲ್ಟನ್‌ನ**</u> **(1766 –1844)** ಹತ್ತೊಂಬತ್ತನೇ ಶತಮಾನದ ಪ್ರಾರಂಭದ ವರ್ಷಗಳಲ್ಲಿ **(1803)** ಮಂಡಿಸಿದ ಪರಮಾಣುವಾದದ ಪ್ರಕಾರ

**"ಪ್ರತಿಯೊಂದು ಪದಾರ್ಥವೂ ಅತಿಸೂಕ್ಷ್ಮವಾದ ಮತ್ತು ಅಭೇದ್ಯವಾದ ಪರಮಾಣುಗಳೆಂಬ ಕಣಗಳಿಂದ ಆಗಿವೆ;**

**ಪ್ರತಿಯೊಂದು ಪದಾರ್ಥದ (ಅದು ರಾಸಾಯನಿಕ ಧಾತುವಾಗಿರಲಿ, ಸಂಯುಕ್ತವಾಗಿರಲಿ) ಪರಮಾಣುವೂ ಅದಕ್ಕೆ ವಿಶಿಷ್ಟವಾದ ಗಾತ್ರ, ತೂಕ, ಮುಂತಾದ ಗುಣಲಕ್ಷಣಗಳನ್ನು ಹೊಂದಿರುತ್ತದೆ".**

**John Dalton (1766 - 1844 C.E.)**

**His theory consisted of four basic ideas:**

1) **All matter is composed of atoms that are indivisible.**
2) **All atoms are identical in properties, such as size and mass.**
3) **Atoms are rearranged as a chemical reaction occurs.**
4) **Compounds are formed by combination of multiple atoms.**
5) **They cannot be created or destroyed**




**ಆನಂತರ J J Thomson, Rutherford, Neils Bohr, Schrodinger ಮೊದಲಾದ ಪರಿಣಿತರು ಅಣುವಿನ ರಚನೆಯನ್ನು ಅಧ್ಯಯನ ಮಾಡಿ ಅದರಲ್ಲಿ ಸುಧಾರಣೆ ಮಾಡಿ ಅಣುವಿನ ಮಾಡೆಲ್ (atomic model) ರೂಪಿಸಿದ್ದಾರೆ.**

ಆಧುನಿಕ ಅಣುವಿಜ್ಞಾನದ ಅಡಿಗಲ್ಲುಗಳನ್ನು ಹಾಕಿದವರ ಪಟ್ಟಿಯಲ್ಲಿ ಮೊದಲ ಹೆಸರು **ಜೋಸೆಫ್ ಜೋನ್ ಥಾಮ್ಸನ್** ಅವರದು.

ಡಾಲ್ಟನರು ಹತ್ತೊಂಬತ್ತನೇ ಶತಮಾನದ ಪ್ರಾರಂಭದ ವರ್ಷಗಳಲ್ಲಿ **(1803)** ಪರಮಾಣುಗಳು ಅವಿಭಾಜ್ಯ ಅಂದಿದ್ದರೆ, ಶತಮಾನದ ಕೊನೆಯ ವರ್ಷಗಳಲ್ಲಿ **ಆದರೆ (1897)** ರಲ್ಲಿ **ಜೋಸೆಫ್ ಜೋನ್ ಥಾಮ್ಸನ್** ಪರಮಾಣುಗಳು ಭಾಜ್ಯ

ಮಾಡಲು ಸಾಧ್ಯ ಅವು ಸಣ್ಣದಾದ ಕಣಗಳನ್ನು ಒಳಗೊಂಡಿದೆ ಎಂದು ಪ್ರತಿಪಾದಿಸಿದರು.

ಹನ್ನೆರಡನೆಯ ಶತಮಾನದಲ್ಲಿ ಶಿವಯೋಗಿ ಸಿದ್ಧಾರಾಮೇಶವರರು ತಮ್ಮ ವಚನದಲ್ಲಿ "ಅಣುವಿನೊಳಗೆ ಅಣುವಾಗಿಪ್ಪಿರಿ" ಎನ್ನುವ ವಚನಭಾಗದಲ್ಲಿ ಅಣು ಕಣಗಳ ಸಮೂಹ ಎನ್ನುವ ಮಾತನ್ನು ಪ್ರಸ್ತುತಪಡಿಸಿದ್ದರು.

**"ಪರಮಾಣುವಿನ ಒಳಗೆಯೂ ವಿಭಾಗ ಮಾಡಲು ಸಾಧ್ಯವಾಗುವ ಇನ್ನಷ್ಟು ಚಿಕ್ಕ ಚಿಕ್ಕ ಕಣಗಳಿವೆ"** ಎಂದು ಥಾಮ್ಸನ್ ತೋರಿಸಿಕೊಟ್ಟರು.

ಅವರು ಕಂಡುಕೊಂಡಂತಹ ಅಂತಹ ಮೊದಲ ಕಣಗಳೇ '**ಇಲೆಕ್ಟ್ರಾನ್**'ಗಳು.

ಅಣು ಒಳಗೆ ಅತೀ ಸಣ್ಣದಾದ ಉಪಪರಮಾಣು ಕಣಗಳಿವೆ ಎನ್ನುವ ವಿವರವನ್ನು ಸಂಶೋಧಿಸಿದರು

ಈ ಮಾತನ್ನೇ ಶಿವಯೋಗಿ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ 12 ನೇಯ ಶತಮಾನದಲ್ಲಿ ಹೇಳಿದ್ದು.




ಇದುವರೆಗೆ ಅಣು ವಿಭಜಿಸಲು ಸಾಧ್ಯವಿಲ್ಲ ಎನ್ನುವ ವಿಚಾರ ಎಲ್ಲರ ನಂಬಿಗೆಯಾಗಿತ್ತು. ಆದರೆ ಅಣುಗಳ ಒಳಗೆ ಅತೀ ಸಣ್ಣ ಗಾತ್ರದ ಕಣಗಳಿವೆ (ಉಪಪರಮಾಣು) ಎನ್ನುವದು ಗೊತ್ತಾಗಿ ಅವುಗಳ ಗುಣಧರ್ಮಗಳನ್ನು ಕಂಡುಹಿಡಿಯುವ ಸಂಶೋಧನೆಗಳು ಪ್ರಾರಂಭವಾದವು.




**ಗುರಣ್ಣ:** ಶರಣರಿಗೂ ಅಣುವಿನ ವಿವರ ಗೊತ್ತಿತ್ತು ಎನ್ನುವದನ್ನು ಈಗಾಗಲೇ ಅರಿತಿದ್ದೇವೆ. ಶಿವಯೋಗಿ ಸಿದ್ದರಾಮೇಶ್ವರರು ತಮ್ಮ ಈ ವಚನದಲ್ಲಿ ಅಣುವಿನೊಳಗೆ ಉಪಪರಮಾಣು ಹರಡಿಕೊಂಡಿದೆ ಎನ್ನುವದನ್ನು ಹೇಳಿದ್ದಾರೆ. ಶಿವಯೋಗಿ ಶಿದ್ದರಾಮೇಶ್ವರರು ತಮ್ಮ ಈ ವಚನದಲ್ಲಿ

**"ಎಲೆ ದೇವಾ ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?"**




ಎನ್ನುವ ಸಾಲಿನ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ.

**ಅರುಣ:** ಅಣುಗಳ ಸಂಶೋಧನೆ ಕಾಲಕ್ರಮೇಣ ಬಂದ ದಾರಿ ತೋರಿಸುವ ಕೆಲವು ವಿವರಗಳು:

**Timeline 0f subatomic particles**

**1802 Dalon's atomic theory**

**1897 Electron -- J J Thomson**

**1911 Positive nucleus -- Rutherford**

**1930 Neutrino -- Pauli**

**1932 Neutron -- James chadwick**

**1937 Muon -- J C Street and E C Stevenson**
**1962 Discovery of neutrino**
**1969 Quarks -- Friedman, Kendall**
**1976 The tau lepton -- SPEAR**
**1977 Proof of bottom quark**
**1983 W and Z bosons -- Carlo Rubbia**
**1995 The top quark -- Fermilab**
**2000 The tau Neutrino -- fermilab**
**2003 A five Quark state discovered**
**2013 Discovery of Higgs Boson**
**---------**









The Bohr model shows **the atom as a small, positively charged nucleus surrounded by orbiting electrons**. Bohr was the first to discover that electrons travel in separate orbits around the nucleus and that the number of electrons in the outer orbit determines the properties of an element.




**<u>ಕ್ವಾರ್ಕ್‌</u>ಗಳ ಆರು ಬಗೆ:**

**(1) ಅಪ್ (2) ಡೌನ್ (3)ಬಾಟಮ್**

**(4) ಟಾಪ್ (5) ಸ್ಟ್ರೇಂಜ್ ಮತ್ತು (6)ಚಾರ್ಮ್**

There are six types, known as *flavors*, ofquarks: up, down, charm, strange, top, and bottom

A quark is a type of elementary particle and a fundamental constituent of matter. Quarks combine to form composite particles called hadrons, the most stable of which are protons and neutrons, the components of atomic nuclei. All commonly observable matter is composed of up quarks, down quarks and electrons.







## ಪ್ರಾಥಮಿಕ ಉಪಪರಮಾಣು:






**ಕ್ವಾರ್ಕ್** ಗಳ ಆರು ಬಗೆ:

**ಲೆಪ್ಟಾನ್** ಗಳು ಆರು ಬಗೆ:

(1) ಅಪ್ (2) ಡೌನ್ (3)ಬಾಟಮ್
(4) ಟಾಪ್ (5) ಸ್ಟ್ರೇಂಜ್ ಮತ್ತು
(6)ಚಾರ್ಮ್




In particle physics, a lepton is an elementary particle of half-integer spin (spin 1/2) that does not undergo strong interactions. Two main classes of leptons exist, charged leptons (also known as the electron-like leptons), and neutral leptons (better known as neutrinos).

(1) ಎಲೆಕ್ಟ್ರಾನ್
(2) ಎಲೆಕ್ಟ್ರಾನ್ ನ್ಯುಟ್ರಿನೊ,
(3) ಮುವಾನ್,
(4) ಮುವಾನ್ ನ್ಯುಟ್ರಿನೊ,
(5) ತೌ ಮತ್ತು
(6) ತೌ ನ್ಯುಟ್ರಿನೊ.

ಗೇಜ್ ಬೊಸೊನ್ ಗಳು:
(1) ಗುರುತ್ವದ ಗ್ರಾವಿಟನ್
(2) ವಿದ್ಯುತ್ಕಾಂತತೆಯ ಫೊಟಾನ್,
(3) ಕ್ಷೀಣ ಬಲ (Weak force)ದ ಮೂರು W ಮತ್ತು Z ಬೊಸೊನ್‌ಗಳು,
(4) ದೃಢ ಬಲ (strong force)ದ ಎಂಟು ಗ್ಲುವಾನ್ ಗಳು

Particles with spins that come in half-integer multiples (e.g., ±1/2, ±3/2, ±5/2, etc.) are known as fermions; particles with spins in integer multiples (e.g., 0, ±1, ±2, etc.) are bosons.
There are no other types of particles, fundamental or composite, in the entire universe







ಕಣ <u>ಭೌತಶಾಸ್ತ್ರ</u> ಅಥವಾ <u>ರಸಾಯನಶಾಸ್ತ್ರ</u>ದಲ್ಲಿ <u>ಪರಮಾಣು</u>ವಿಗಿಂತ ಚಿಕ್ಕದಾದ ಕಣಗಳನ್ನು ಉಪಪರಮಾಣು ಕಣ ಎನ್ನುತ್ತಾರೆ.

ಇದರಲ್ಲಿ ಪ್ರಾಥಮಿಕ ಹಾಗೂ ಮಿಶ್ರ ಎಂಬ ಎರಡು ವಿಧದ ಕಣಗಳಿವೆ.

<u>ಕಣ ಭೌತಶಾಸ್ತ್ರ</u> ಮತ್ತು <u>ಪರಮಾಣು ಭೌತಶಾಸ್ತ್ರ</u> **(Nuclear Physics)** ಇವುಗಳ ಸ್ವರೂಪ ಮತ್ತು ಅವುಗಳ ಪರಸ್ಪರ ಸಂಬಂಧಗಳ ಅಧ್ಯಯನ ಮಾಡುತ್ತವೆ. (ಇವೆಲ್ಲಾ ನಮ್ಮಂತಹ ಸಮಾನ್ಯ ಓದುಗನಿಗೆ ಅರ್ಥವಾಗುವದಿಲ್ಲ. ಆದರೆ ವಚನ ಅರ್ಥಮಾಡಿಕೊಳ್ಳುವ ಉದ್ದೇಶ ಈಡೇರಬೇಕಾದರೆ ಇವೆಲ್ಲದರ ಅಲ್ಪ ಮಾಹಿತಿ ವಚನ ಸಾಹಿತ್ಯ ಓದುಗರಿಗೆ ಅವಶ್ಯವಾಗಬಹುದು.)

**ಮಿಶ್ರ ಉಪಪರಮಾಣುಗಳು:**

ಮಿಶ್ರ ಉಪಪರಮಾಣುಗಳು ಎರಡು ಅಥವಾ ಮೂರು ಪ್ರಾಥಮಿಕ ಉಪಪರಮಾಣುಗಳ ಬಂಧದಲ್ಲಿರುತ್ತವೆ.

ಉದಾಹರಣೆಗ ಒಂದು **<u>ಪ್ರೋಟಾನ್</u>** ಎರಡು ಅಪ್ ಮತ್ತು ಒಂದು ಡೌನ್ ಕ್ವಾರ್ಕ್ ಗಳಿಂದಾಗಿದೆ.

ಅಂತೆಯೇ ಒಂದು ಹೀಲಿಯಮ್- 4 ರ ಪರಮಾಣುವಿನಲ್ಲಿ ಎರಡು ಪ್ರೋಟಾನ್‌ಗಳು ಮತ್ತು ಎರಡು **<u>ನ್ಯೂಟ್ರಾನ್</u>** ಗಳಿರುತ್ತವೆ.

ಮಿಶ್ರ ಉಪಪರಮಾಣು ಕಣಗಳಲ್ಲಿ ಎಲ್ಲಾ **<u>ಹ್ಯಾಡ್ರನ್</u>** ಗಳು, <u>ಬಾರ್ಯಾನ್</u> ಗಳ ಗುಂಪು, ಮೆಸನ್‌ಗಳು ಸೇರಿರುತ್ತವೆ.






**“ನಾದ ಬಿಂದು ಕಳಾತೀತ ಆದಿಯಾಧಾರ ನೀನೆ ಅಯ್ಯ”**




**“SUPERSTRING THEORY”** ಇನ್ನೂ ಸಂಶೋಧನೆಯ ಹಂತದಲ್ಲಿದೆ ಆದರೂ ಕೆಲವು ವಿಚಾರಗಳು ಈ ವಚನಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯಕ. ಈ ಚಿತ್ರವೂ ಸಹ ನಾವು ಸಾಗಬೇಕಾದ ಹಾದಿಯನ್ನು ಹೇಳುತ್ತದೆ.




ಈ ಚಿತ್ರವು ನಾವು ಅರ್ಥಮಾಡಿಕೊಳ್ಳಬೇಕಾದ ಕಣಗಳೆಷ್ಟು ಸಣ್ಣವು ಎನ್ನುವ ಮತ್ತು ಕಾಲದ ವಿವರ ಕೊಡುತ್ತದೆ.

**ಸ್ಟ್ರಿಂಗ ಸಿದ್ಧಾಂತ** ವಿಶ್ವದಲ್ಲಿರುವ ಎಲ್ಲ ವಸ್ತುಗಳ ರಚನೆಯನ್ನು ವಿವರಿಸುವ ಹೊಸ ದಾರಿಯನ್ನು ತೋರಿಸಿದೆ.

೧೨ ನೆಯ ಶತಮಾನದಲ್ಲಿ ಶರಣರು ಸಾದರ ಪಡಿಸಿದ ವಸ್ತು ಮತ್ತು ಶಕ್ತಿ ಸಂಬಂಧ ತತ್ವಗಳಿಗೆ ಇಲ್ಲಿ ವಿವರಣೆ ಸಿಗುತ್ತದೆ.

ಈ **ಸಿದ್ಧಾಂತ** ದ ಪ್ರಕಾರ "ಸ್ಟ್ರಿಂಗ್" ಇದು ವಸ್ತುವಿನ ಭಾಗವಾಗಿದ್ದು ಇದು **ಅತಿ ಸಣ್ಣದಾದ, ಕಂಪಿಸುವ, ಹಲವು ಆಯಾಮಗಳ ಶಕ್ತಿಯ ಕಣ**.

ವಿಶ್ವ ನಿರ್ಮಾಣದ ಭಾಗಗಳಾಗಿರುವ ಉಪಅಣುಕಣಗಳು ಈ ಸ್ಟ್ರಿಂಗ್ ಕಂಪನದ ವಿವಿಧ ರೀತಿಯ ಮೇಲೆ ನಿರ್ಣಯಿಸಲ್ಪಡುತ್ತವೆ.

ಶರಣರು ತಮ್ಮ ವಚನಗಳಲ್ಲಿ ವಿಶ್ವ ರಚನೆಯಲ್ಲಿಯ ವಸ್ತುಗಳಿಗೆ ಮತ್ತು ಶಕ್ತಿ ನಡುವಿನ ಸಂಬಂಧದ ಬಗ್ಗೆ ಅನೇಕ ವಿವರಣೆ ಕೊಟ್ಟಿದ್ದಾರೆ.

ವಿಜ್ಞಾನಿಗಳು ವಸ್ತುಗಳಿಗೂ ಮತ್ತು 4 ವಿಧದ ಶಕ್ತಿಗಳಿಗೆ Gravity, Electromagnetism, Strong force, and Weak force ಇರುವ ಸಂಬಂಧಗಳ ಬಗ್ಗೆ ಸಂಶೋಧನೆ ಮಾಡುವಾಗ ಹೊರಹೊಮ್ಮಿದ ಹೊಸ ಸಿದ್ಧಾಂತವೇ "**ಸ್ಟ್ರಿಂಗ್ ಸಿದ್ಧಾಂತ** ".

ಇದು Quantum mechanics with Albert Einstein's general theory of relativity ಸಿದ್ಧಾಂತ ಗಳನ್ನೂ ಸಂಯೋಜಿಸುವ ಹೊಸ ದಾರಿಗೆ ಅನುವು ಮಾಡಿಕೊಟ್ಟಿತು.

**String theory proposes that small loops about 100 billion times smaller than proton are vibrating below the subatomic level and each mode of vibration represents a distinct resonance which correspond to a particular particle.**

**Superstring theory is an attempt to explain all of the particles and fundamental forces of nature in one theory by modelling them as vibrations of tiny super symmetric strings. Physics nothing but laws of harmony that you can write on vibrating strings.**







**Energy is the ultimate building block of the universe.**

**“ನಾದ ಬಿಂದು ಕಳಾತೀತ”** ಶಬ್ದವನ್ನು ಬಹಳಷ್ಟು ಶರಣರು ತಮ್ಮ ವಚನಗಳಲ್ಲಿ ಉಪಯೋಗಿಸಿದ್ದಾರೆ.

**ಮನದಲ್ಲಿ ಮೂಡುವ ಮೊದಲ ಪ್ರಶ್ನೆ “ನಾದ ಬಿಂದು ಕಳಾತೀತ” ಶಬ್ದ ಧಾರ್ಮಿಕ ಅಥವಾ ತಾತ್ವಿಕ ವಿವರಿಸಲಷ್ಟೇ ಬಳಸಿದ್ದಾರೆಯೇ ಅಥವಾ ವಿಶ್ವ ರಚನೆ ವಿವರಿಸಲು ಉಪಯೋಗಿಸಿದ್ದಾರೆಯೇ?.**

ಕೆಳಗಿನ ಕೆಲವು ವಚನಗಳನ್ನು ಗಮನಿಸಿದರೆ ಈ ಪ್ರಶ್ನೆಗೆ ಉತ್ತರ ಸಿಗುತ್ತದೆ.




1. ಇನ್ನು ಆದಿಮೂಲ ಅನಾದಿಮೂಲಗಳಿಗತ್ತತ್ತವಾದ ಮಹಾಮೂಲಸ್ವಾಮಿಯ ಮೀರಿದ <u>ಅತೀತ</u> ಮೂಲಸ್ವಾಮಿಗತ್ತತ್ತವಾಗಿಹ

ಆ ಅಖಂಡ ಮೂಲಸ್ವಾಮಿಯ ರೂಪು, ಲಾವಣ್ಯ, ಸೌಂದರ್ಯ, ಅಂಗ-ಪ್ರತ್ಯಂಗಸ್ವರೂಪ ಸ್ವಭಾವಗಳೆಂತೆಂದಡೆ :----------
ನಾದ ಬಿಂದು ಕಲಾತೀತಪ್ರಣವವೆ ಆ ಅಖಂಡ ಮಹಾಮೂಲಸ್ವಾಮಿಯ ತಾಳೋಷ್ಠಸಂಪುಟ ನೋಡಾ.--------
ಆ ಗರ್ಭದಲ್ಲಿ ಅನೇಕಕೋಟಿ ಬ್ರಹ್ಮಾಂಡಂಗಳು, ಅನೇಕಕೋಟಿ ಮಹಾಬ್ರಹ್ಮಾಂಡಂಗಳು, ಅನೇಕಕೋಟಿ ಆದಿಮಹಾಬ್ರಹ್ಮಾಂಡಂಗಳು ಅಡಗಿಹವು ನೋಡಾ. ಆ ಅಖಂಡ ಮಹಾಮೂಲಸ್ವಾಮಿಯ ನಡುವೆ ವ್ಯೋಮಾತೀತಪ್ರಣವವು. ಆ ಅಖಂಡ ಮಹಾಮೂಲಸ್ವಾಮಿಯ ಕಟಿಸ್ಥಾನವೇ /225 --- ಬಾಲಸಂಗಯ್ಯ ಅಪ್ರಮಾಣ ದೇವ

2. ಬ್ರಹ್ಮಾಂಡವು ಹೇಗೆ ಪುಟ್ಟಿತ್ತು ಪೇಳ್ವೆ ಕೇಳಿರಯ್ಯಾ. ಆದಿ, ಅನಾದಿಯಿಂದತ್ತತ್ತಲಾದ ನಿರಾಕಾರ ಪರವಸ್ತು
ತನ್ನ ಸ್ವರೂಪವ ತಾನರಿಯದೆ ಅನಂತ ಕಲ್ಪಕಲ್ಪಾಂತರ ಇರ್ದು ತನ್ನ ಸ್ವಲೀಲೆಯಿಂದ ತಾನೇ ಜಗತ್ಸೃಷ್ಟಿ ನಿಮಿತ್ತವಾಗಿ,
ನೆನವುದೋರಲು, ಆ ನೆನವು ನಿರ್ಧರವಾಗಿ ಚಿತ್ತೆನಿಸಿತ್ತು.
ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು.
ಆ ಚಿತ್ತು ತ್ರಿವಿಧಮಲ ಸಹವಾಗಿ ಚತುರ್ವಿಧವು ಘಟ್ಟಿಗೊಂಡು
ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.-----------
ತಾನೇ ಪರಶಿವನೆಂದು ತಿಳಿವುದಯ್ಯ, ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. / 316. ——--ಕಾಡಸಿದ್ಧೇಶ್ವರ

3. ರೂಹಿಲ್ಲದ ನೆಳಲಿಂಗೆ ಮಳಲ ಬೊಂಬೆಯ ಮಾಡಿ, ನಾದ ಬಿಂದುವಿನಲ್ಲಿ ಪುದಿಸಿ,
ಆರಿಗೂ ಮೈದೋರದೆ ಏಡಿಸಿ ಕಾಡಿತ್ತು ಶಿವನ ಮಾಯೆ.
ಇದು ಕಾರಣ, ಕೂಡಲಚೆನ್ನಸಂಗಯ್ಯಾ ಪಾಕಸಂಬಂದಿಗೆ ಪ್ರಸಾದ ದೂರ. -3/252.
--- ಚನ್ನಬಸವಣ್ಣ

4. ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ;
ತಾಳೋಷ್ಠಸಂಪುಟವೆಂಬುದು ನಾದಬಿಂದುಕಳಾತೀತ.
ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ ಮರುಳೆ. / 1321
-----ಅಲ್ಲಮಪ್ರಭುದೇವರು

5. ಆಕಾರ ನಿರಾಕಾರವಿಲ್ಲದಂದು, ಹಮ್ಮುಬಿಮ್ಮುಗಳಿಲ್ಲದಂದು, ಜೀವ ಪರಮರಿಲ್ಲದಂದು,ಮನ ಮನನ ನುನೀಯವಿಲ್ಲದಂದು,
ಶೂನ್ಯ ನಿಶೂನ್ಯ ನಾಮ ನಿರ್ನಾಮ ಇವೇನೂ ಇಲ್ಲದೆ, ಬಚ್ಚಬರಿಯ ಬಯಲೆ ಸಹಜದಿಂದ ಗಟ್ಟಿಗೊಂಡು, ಘನಲಿಂಗವೆಂಬ ಪುರುಷತತ್ತ್ವವಾಯಿತ್ತಯ್ಯ.
ಆ ಘನಲಿಂಗದಿಂದ ಚಿಚ್ಛಕ್ತಿ ಜನಿಸಿದಳು. ಚಿಚ್ಚಕ್ತಿಯಿಂದ ಪರಶಕ್ತಿ ಪುಟ್ಟಿದಳು.
ಪರಶಕ್ತಿಯಿಂದ ನಾದ ಬಿಂದು ಕಳೆಗಳಾದವು.
ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ.
ಇಂತೀ ತ್ರಿವಿಧಕ್ಕೆ ಪರಶಕ್ತಿಯೇ ತಾಯಿ.-------------
ಈ ತ್ರಿವಿಧ ಪದವನೊಳಕೊಂಡು ನಿಂದುದೇ ಪರತತ್ತ್ವವಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. / 70-- ತೋಂಟದ ಸಿದ್ಧಲಿಂಗ ಶಿವಯೋಗಿಗಳು

6. ನೀವು ನಿಮ್ಮ ಸ್ವಲೀಲೆಯಿಂದೆ ಜಗದಲೀಲಾ ವೈಭವಂಗಳ ನಟಿಸಬೇಕೆಂದು ನಿಮ್ಮಲ್ಲಿ ನೆನಹುದೋರಲು, ಆ ನೆನಹು ನಿರ್ಧರಿಸಿ, ಚಿತ್ತೆನಿಸಿತ್ತು. ಆ ಚಿತ್ತಿನಿಂದೆ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು.
ಆ ಚಿನ್ನಾದ ಚಿದ್ಬಿಂದು ಚಿತ್ಕಳೆ ಆ ಮೂಲಚಿತ್ತು ಸಹವಾಗಿ ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.---------------
ಇಂತಿವೆಲ್ಲವೂ ನಿಮ್ಮ ನೆನಹುಮಾತ್ರದಿಂದಾದವಯ್ಯ ಅಖಂಡೇಶ್ವರಾ. / 404
-- ಷಣ್ಮುಖಸ್ವಾಮಿ

7. ದ್ರವ್ಯ ನೀನು ದ್ರವ್ಯಾರ್ಥ ನೀನು; ಪದ ನೀನು, ಪದಾರ್ಥ ನೀನು. ಸಕಲ ನೀನು ನಿಷ್ಕಲ ನೀನು.
ಸಕಲ ನಿಷ್ಕಲಾತ್ಮಕ ಪರಿಪೂರ್ಣ ಶಿವನಲ್ಲದೆ ಅನ್ಯ ಬಿನ್ನಭಾವ ಉಂಟೆ ?----------
ಹೊತ್ತುಕೊಂಡೈದಾವೆ ನೋಡಾ !
ಇಂತೆಂದುದಾಗಿ-ನಾದ ನೀನು, ಬಿಂದು ನೀನು, ಕಳೆ ನೀನು, ಕಳಾತೀತ ನೀನು ಗುಹೇಶ್ವರಾ. / 951--- ಅಲ್ಲಮಪ್ರಭುದೇವರು

ವಚನ 8:




ಒಂದುವೇಳೆ ಐನ್ ಸ್ಟೈನ್ ಅವರಿಗೆ ಈ ವಚನಗಳು ಗೊತ್ತಾಗಿದ್ದರೆ, ಅವರ ಜೀಮಾನದಲ್ಲೇ ಅವರ ಕನಸು ನನಸಾಗುತ್ತಿತ್ತು. ವಿಜ್ಞಾನಕ್ಕೆ ಹೊಸ ಆಯಾಮ ಸಿಗುತ್ತಿತ್ತು ಮತ್ತು ವಿಜ್ಞಾನಿಗಳಿಗೆ ಹೊಸ ದಿಶೆಯಲ್ಲಿ ವಿಚಾರ ಮಾಡಲು ಅವಕಾಶವಿತ್ತು. ಈಗಲೂ ತಡವಾಗಿಲ್ಲ ಈಗಲೂ ವಿಜ್ಞಾನಿಗಳಿಗೆ ವಚನ ಗೊತ್ತಾದರೆ, **"ಜ್ಞಾನ, ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ"** ಎನ್ನುವ ವಿಚಾರಗಳ ಬಗ್ಗೆ ಸಂಶೋಧನೆ ನಡೆದು ವಿಜ್ಞಾನ ಮತ್ತು ತತ್ವಜ್ಞಾನ ನಡುವಿನ ಅಂತರ ಕಡಿಮೆಯಾಗುತ್ತದೆ.

12ನೇಯ ಶತಮಾನದಲ್ಲಿ ಶರಣರು ತಮ್ಮ ವಚನದಲ್ಲಿ "ನಾದ ಬಿಂದು ಕಳಾತೀತ" ಶಬ್ದ ಪ್ರಯೋಗಮಾಡಿ ಅನೇಕ ವಿವರಗಳನ್ನು ಕೊಟ್ಟಿದ್ದಲ್ಲದೇ ಅದು ವಿಶ್ವ ಉದಯದ ಯಾವ ಸಂದರ್ಭದಲ್ಲಿ ಉದಯವಾಯಿತು ಎನ್ನುವ ವಿವರವನ್ನೂ ಕೊಟ್ಟಿದ್ದಾರೆ.

ವಿಜ್ಞಾನಿಗಳು ಕಳೆದ ಹತ್ತು ವರ್ಷಗಳಲ್ಲಿ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ಅವರು ಶರಣರು ಕೊಟ್ಟ ವಿವರಗಳನ್ನು ಅಧ್ಯಯನ ಮಾಡಿ ಸಿದ್ದ ಮಾಡಲು ಇನ್ನೂ ಬಹಳ ಸಮಯ ಬೇಕು.



## SUPERSTRINGS

**ಕ್ವಾಂಟಮ್ ಭೌತಶಾಸ್ತ್ರ**ವು ನಿಸರ್ಗದಲ್ಲಿ ಅಣುವಿನ ಗಾತ್ರ ಮತ್ತು ಅದಕ್ಕಿಂತ ಚಿಕ್ಕದಾದ ಕಣಗಳ ಅಧ್ಯಯನ ನಡೆಸುವ ಭೌತಶಾಸ್ತ್ರದ ಒಂದು ಭಾಗ. ದೊಡ್ಡ ಗಾತ್ರಗಳಲ್ಲಿ ಕಾಣಿಸುವ ಭೌತಿಕ ಪ್ರಕ್ರಿಯೆಗಳಿಗೆ ಹೋಲಿಸಿದರೆ, ಈ ಚಿಕ್ಕ ಗಾತ್ರಗಳಲ್ಲಿನ ಪ್ರಕ್ರಿಯೆಗಳು ಅತ್ಯಂತ ಭಿನ್ನವಾಗಿರುತ್ತವೆ. ಅಲ್ಬರ್ಟ್ ಐನ್‌ಸ್ಟೈನ್, ಮ್ಯಾಕ್ಸ್ ಪ್ಲಾಂಕ್ ಮುಂತಾದ ವಿಜ್ಞಾನಿಗಳಿಂದ ಕ್ವಾಂಟಮ್ ಭೌತಶಾಸ್ತ್ರವು ಬೆಳೆದಿದೆ.

ಶ್ರೋದಿಂಗರ್ ಮಹೋದಯರು ದ್ರವ್ಯ ,ತರಂಗ ಚಲನೆಯನ್ನು ಪ್ರದರ್ಶಿಸುತ್ತದೆಯೆಂದು ಊಹಿಸಿದರು. ಆದರೆ ಈ ತರಂಗ ಚಲನೆ ಸಾಮಾನ್ಯ ತರಂಗಗಳಲ್ಲದೆ ಸಂಕೀರ್ಣ ತರಂಗಗಳು. ಈ ಕಲ್ಪನೆಯಿಂದ ಅವರು ಶ್ರೋದಿಂಗರ್ ತರಂಗ ಸಮೀಕರಣವನ್ನು ಸೃಷ್ಟಿಸಿದರು.

**ಅಲ್ಬರ್ಟ್ ಐನ್‌ಸ್ಟೈನ್ ಅವರ ಸಾಮಾನ್ಯ ಸಾಪೇಕ್ಷತಾ ಸಿದ್ಧಾಂತವು ಗುರುತ್ವಾಕರ್ಷಣೆಯನ್ನು ವಿವರಿಸುತ್ತದೆ.**

**ಸಿದ್ಧಾಂತದಲ್ಲಿ, ಬೃಹತ್ ವಸ್ತುಗಳು ಜಾಗವನ್ನು ಬಗ್ಗಿಸುತ್ತವೆ. ಕ್ವಾಂಟಮ್ ಗುರುತ್ವಾಕರ್ಷಣೆಯನ್ನು ವಿವರಿಸುವಲ್ಲಿನ ಯಶಸ್ಸು ಪ್ರಪಂಚದ ಎಲ್ಲವನ್ನೂ ವಿವರಿಸುವ ಸಿದ್ಧಾಂತವನ್ನು ರಚಿಸುವ ಒಂದು ಹೆಜ್ಜೆಯಾಗಿದೆ. ಅಂತಹ ಸಿದ್ಧಾಂತವು ಬ್ರಹ್ಮಾಂಡವು ಹೇಗೆ ಹುಟ್ಟಿತು, ಈಗ ಅದರಲ್ಲಿ ಏನು ನಡೆಯುತ್ತಿದೆ ಮತ್ತು ಅದರ ಅಂತ್ಯ ಏನೆಂದು ವಿವರಿಸುತ್ತದೆ.**

**ಇವೆರಡೂ ಕ್ರಂತಿಕಾರಕ ತತ್ವಗಳು ವಿಜ್ಞಾನಿಗಳಿಗೆ ಹೊಸ ಹೊಸ ಮಾರ್ಗದಲ್ಲಿ ಸಾಗಿ ಸಂಶೋಧನೆ ಮಾಡಲು ಪ್ರೆರಣೆ ಮಾಡಿದವು. "String theory" ಇವೆರದಡೂ ತತ್ವಗಳನ್ನು ಏಕಿಕರಿಸುವ ಮತ್ತು ಅವುಗಳಲ್ಲಿರುವ ಕೊರತೆ ತುಂಬುವ ಹೊಸ ತತ್ವವಾಗಿ 1980 ರಿಂದ ಈಚೆಗೆ ಹೊರಹೊಮ್ಮಿತು.**



ಇಷ್ಟೆಲ್ಲ ವಿವರಿಸಿದರೂ ಕೂಡ ಇವೆಲ್ಲ ಅಸಾಮಾನ್ಯವಾದ ತತ್ವಗಳು ಅರ್ಥವಾಗಬೇಕಾದರೆ ಇನ್ನೂ ಬಹಳಷ್ಟು ದಶಮಾನಗಳ ಸಂಶೋಧನೆಯ ಅಗತ್ಯವಿದೆ. ನಮಗೆ ಮೂರು ಆಯಾಮಗಳಲ್ಲಿಯ ವಿವರ ಅರ್ಥವಾಗುತ್ತವೆ. ಆದರೆ ವಿಶ್ವ ಅರಿಯಲು

**11** ಆಯಾಮಗಳಲ್ಲಿರುವ **String theory ಅರ್ಥಮಾಡಿಕೊಳ್ಳುವದು ತುಂಬಾ ಕಷ್ಟ ಸಾಧ್ಯ.**

ಹಾಗಾಗಿಯೇ ವಚನಗಳ ಪೂರ್ಣ ಅರ್ಥ ಮಾಡಿಕೊಳ್ಳಲು ಇನ್ನೂ ಹಲವು ಕಾಲ ಕಾಯಬೇಕು.




**This is because string theorists believe that the most basic things in the universe aren't the normal particles that we are all familiar with, but vibrating strings. All matter and all forces as well, as being made up of one single ingredient. Strings are composed of super-concentrated mass-energy which vibrate like a violin strings, with each distinct vibration mode corresponding to a fundamental particle(such as an electron or a photon)**

ಈಗ ಕೆಲವು ವಿಜ್ಞಾನಿಗಳು ಈ ಎಲ್ಲ ಕಣಗಳ ರಚನೆಯನ್ನು ವಿವರಿಸುವ **"STRING"** ಎಂಬ ತತ್ವವನ್ನು ಪ್ರಸ್ತುತ ಪಡಿಸಿದ್ದಾರೆ.
ಅವರ ಪ್ರಕಾರ ಉಪಪರಮಾಣುಗಳು ಸಣ್ಣ ಸಣ್ಣ ಉಪಕಣಗ ಳಿಂದ ಮಾಡಲ್ಪಟ್ಟಿಲ್ಲ ಆದರೆ ಅತೀ ಸಣ್ಣದಾದ ಕಳಾತೀತ **string** ದ ವಿವಿಧ ರೀತಿಯ **ಕಂಪನ** ದಿಂದ ಈ ಕಣಗಳ ರಚನೆಯಾಗುತ್ತದೆ. (ಒಂದು ತಂತಿ ವಾದ್ಯದಿಂದ ರಾಗ ಹೊರಟಹಾಗೆ).

**ಅಕ್ಕಮಹಾದೇವಿಯವರು**

**"ಇಂತೀ ಜಲವು ಒಂದೆ ನೆಲನು ಒಂದೆ ಆಕಾಶವು ಒಂದೇ"**
ಎನ್ನುವ ವಚನಭಾಗದಲ್ಲಿ ವಿಶ್ವದಲ್ಲಿರುವ ಎಲ್ಲ ವಸ್ತುಗಳು ಒಂದೇ "**ದ್ರವ್ಯ**"ದಿಂದ ನಿರ್ಮಾಣವಾಗಿವೆ ಎಂದು ಹೇಳಿದ್ದಾರೆ.
ಈ "**ದ್ರವ್ಯ**"ಕ್ಕೆ **ಶಿವಯೋಗಿ ಸಿದ್ಧರಾಮೇಶ್ವರರು** ತಮ್ಮ ವಚನಭಾಗದಲ್ಲಿ
**"ಅಣುವಿನೊಳಗೆ ಅಣುವಾಗಿಪ್ಪಿರಿ, ಎಲೆ ದೇವಾ, ನೀವು;"**
ಕೊಟ್ಟ ಹೆಸರು "**ದೇವ**".
ಅವರು "**ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?**" ಎಂಬ ಮಾತಲ್ಲಿ ಈ **"ದೇವ"** ಎಂಬ ಈ ದ್ರವ್ಯ ವಿಸ್ವದೆಲ್ಲಡೆ ವ್ಯಾಪಿಸಿದೆ ಅಂದರೆ ವಿಶ್ವ **"STRING" ( "ದೇವ")** ಎಂಬ ಒಂದೇ ಒಂದು ವಸ್ತುವಿನಿಂದ ನಿರ್ಮಿತವಾಗಿದೆ.
**"STRING" ("ದೇವ")** ದ ವಿವಿಧ ರೀತಿಯ ಕಂಪನ ದಿಂದ ವಿವಿಧ ರೀತಿಯ ಉಪರಮಾಣು ಮೂಲಭೂತ ಕಣಗಳು ರಚನೆಯಾಗಿವೆ ಮತ್ತು ಶಕ್ತಿಗಳು ಉತ್ಪತ್ತಿಯಾಗಿವೆ ಎನ್ನುವ ತತ್ವ ಪ್ರತಿಪಾದಿಸುತ್ತಿದ್ದಾರೆ.
**ಅಣ್ಣ ಬಸವಣ್ಣನವರು** ವಚನ ಭಾಗದಲ್ಲಿ "ನಾದ ಬಿಂದು ಕಳಾತೀತ ಆದಿಯಾಧಾರ ನೀನೆ ಅಯ್ಯ" ಎನ್ನುವಲ್ಲಿ **ಆ "ದ್ರವ್ಯ" ಕ್ಕೆ (1) ನಾದ (2) ಬಿಂದು (3) ಕಳಾತೀತ ಎಂಬ ಮೂರು ಗುಣಧರ್ಮಗಳಿರುವದಾಗಿ ವಿವರಿಸಿದ್ದಾರೆ.**
ತುಂಬಾ ಕ್ಲಿಷ್ಟವಾದ ಈ ವಿಷಯವನ್ನು ಚಿತ್ರಗಳ ಸಹಾಯದಿಂದ ವಿವರಿಸಲು ಪ್ರಯತ್ನಿಸುವೆ.
**"SUPERSTRING THEORY"** ಇನ್ನೂ ಸಂಶೋಧನೆಯ ಹಂತದಲ್ಲಿದೆಯಾದರೂ ಕೆಲವು ವಿಚಾರಗಳು ಈಗಾಗಲೇ ದೃಡಪಟ್ಟಿವೆ ಅಣ್ಣನವರ ವಚನ ವಿವರಿಸಲು ಅಷ್ಟು ವಿಷಯಗಳು ಸಾಕು.
ವಿಶ್ವದ ರಚನೆಯನ್ನು ಇಷ್ಟು ಸರಳವಲ್ಲ. ನಮಗೆ ಅರ್ಥವಾಗುವದು ಮೂರು (ಉದ್ದ, ಅಗಲ, ಮತ್ತು ಎತ್ತರ) ಆಯಾಮಗಳವರೆಗೆ ಮಾತ್ರ. **21** ಶತಮಾನದ ಪ್ರಾರಂಭದಲ್ಲಿ ನಾಲ್ಕು ಆಯಾಮಗಳಲ್ಲಿ ("ವೇಳೆ" ಸೇರಿಸಿ) ವಿಜ್ಞಾನ ತತ್ವಗಳ ಅಧ್ಯಯನ ಮಾಡಿದರು.
ಆದರೆ ಅಲ್ಲಿ ಬರುವ ವಿಷಯಗಳನ್ನುಅರ್ಥಮಾಡಿಕೊಳ್ಳುವದು ಬಹಳ ಕಷ್ಟ. (ನಾಲ್ಕನೆಯ ಆಯಾಮದಲ್ಲಿರುವ **(cube)** ಹೇಗಿರಬೇಕು ಎಂದು ಅರಿಯುವದು ಅಸಾಧ್ಯ.)
ಇನ್ನು ವಿಶ್ವವು **11** ಆಯಾಮದಲ್ಲಿದೆ (**23** ಅಯಾಮದಲ್ಲಿದೆ) ಎನ್ನುವ ವಿಚಾರ ಈಗ ಒಪ್ಪಿಕೊಳ್ಳುತ್ತಿದ್ದಾರೆ.
ವಿಶ್ವದ ರಚನೆ ಇತ್ಯಾದಿ ವಚನಗಳ ಅರ್ಥ ಮಾಡಿಕೊಳ್ಳಲು 11 ಆಯಾಮದಲ್ಲಿರುವ ವಸ್ತುಗಳ ಮತ್ತು ತತ್ವಗಳ ಅರಿವಿರುವದು ಅತೀ ಅವಶ್ಯಕ. ಅದಕ್ಕಾಗಿಯೆ ವಚನಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಇನ್ನೂ

ಶತಮಾನ ಕಾಯಬೇಕು. ಇವೆಲ್ಲ ತತ್ವಗಳ ಅರಿವಿಲ್ಲದೇ ವಚನಗಳ ಅಧ್ಯಯನ ವ್ಯರ್ಥ.
ಅದಕ್ಕಾಗಿಯೇ ವಿಜ್ಞಾನಿ **Stephen Howkings** ಕಳೆದು ಹೋಗಬೇಡಿ ಎಚ್ಚರ ಇರಲಿ ಎಂದಿದ್ದು.












**Since the 1990s, some physicists such as Edward Witten believe that 11-dimensional M-theory, which is described in some limits by one of the five perturbative superstring theories, and in another by the maximally-supersymmetric 11-dimensional supergravity, is the theory of everything.**

(ವಿಮಾನದಲ್ಲಿ ಹೋಗುತ್ತ ನಾನು ಬೆಂಗಳೂರ ನೋಡಿದೆ ಎಂದು ಹೇಳಿದ ಹಾಗೆ)

**String theory predict that there must be minimum 10 dimensions around us where one of them is time and if these dimensions didn't exist then string theory didn't work because string theory only work under the universe which have minimum 10 dimensions and reality is existence till now.**

**String theory predict an omniverse where more than one universe exist with the existence of different timelines as compare to others. Simply we can say that string theory works under multiverse and not under universe.**




**Note: This is because string theorists believe that the most basic things in the universe aren't the normal particles that we are all familiar with, but vibrating strings.**
**All matter and all forces as well, as being made up of one single ingredient.**
**Strings are composed of super-concentrated mass-energy which vibrate like a violin strings, with each distinct vibration mode corresponding to a fundamental particle (such as an electron or a photon)**

*According to string theory,*
*then, the universe is a kind of symphony and the laws of physics are its harmonies.*

***The vibrations of strings, however, occur in a ten-dimensional world, with each one-dimensional point in our ordinary space actually consisting of a complicated geometrical structure in six dimensions, all wrapped up on the scale of the Planck length (the smallest distance or size about which anything can be known, approximately 1.6 × 10-35 metres).***

*The vibratory quality of these tiny threads of energy is what replaces particles and fields in the quantum description of the universe.*

***The strength of the vibrations is what we see in the world as mass, and the patterns of vibrations are the fundamental forces.***




ಇಲ್ಲಿ ಉಪಯೋಗಿಸಿರುವ "ನಾದ", "ಬಿಂದು" ಮತ್ತು "ಕಳಾತೀತ" ಶಬ್ದಗಳ ಅರ್ಥವನ್ನು ವಿವರವಾಗಿ ಅರಿಯುವ ಪ್ರಯತ್ನ ಮಾಡುವಾ.




## ಬಿಂದು

**"ಬಿಂದು"** ತುಂಬಾ ಚಿರಪರಿಚಿತವಾದ ಶಬ್ದ. ಇಲ್ಲಿ ಅಣ್ಣ ಬಸವಣ್ಣನವರು ಈ ವಚನದಲ್ಲಿ ಎಷ್ಟು ಸರಿಯಾದ ಶಬ್ದವನ್ನು ಆರಿಸಿ ಉಪಯೋಗಿಸಿದ್ದಾರೆ ಎನ್ನುವ ವಿವರಣೆ ಇಲ್ಲಿದೆ. ಇದು ಬಸವಣ್ಣವರ ಪ್ರತಿಭೆಗೆ ಸಾಕ್ಷಿ.

ರೇಖಾಗಣಿತದಲ್ಲಿ "ಬಿಂದು" ಉದ್ದವಿಲ್ಲದ, ಅಗಲವಿಲ್ಲದ ಮತ್ತು ಎತ್ತರವಿಲ್ಲದ ಬರಿ ಸ್ಥಳ ನಿರ್ದೇಶಿಸುವ ಒಂದು ಗುರುತು.

**(A common interpretation is that the concept of a point is meant to capture the notion of a unique location in <u>Euclidean space</u>)**

ಆದರೆ ಇಲ್ಲಿ ಅಣ್ಣ ಬಸವಣ್ಣನವರು ಉಪಯೋಗಿಸಿರುವ ಶಬ್ದ ಅತೀ ಸಣ್ಣದಾದ **String "ದ್ರವ್ಯ"** ದ ಭಾಗವನ್ನು ನಿರ್ದೇಶಿಸುತ್ತದೆ.
ಚಿತ್ರಗಳ ಮೂಲಕ ಅಣುಗಳ ರಚನೆ ಬಗ್ಗೆ ಕೆಲವು ವಿಚಾರಗಳನ್ನು ಅರಿಯೋಣ. ಅಣುವಿನ ಗಾತ್ರ ಬಹಳ ಕಡಿಮೆ ಎನ್ನುವ ವಿಚಾರ ತಿಳಿದಿದೆ. ಅದನ್ನು ಕೆಳಗಿನ ಉದಾಹರಣೆ ವಿವರಿಸುತ್ತದೆ




"ಒಂದು ಸೇಬು ಹಣ್ಣನ್ನು ಭೂಮಿಯ ಗಾತ್ರದಷ್ಟು ವಿಸ್ತರಿಸಿದರೆ ಆ ಸೇಬುಹಣ್ಣಿನಲ್ಲಿರುವ ಒಂದು ಅಣುವಿನ ಗಾತ್ರ ಸೇಬುಹಣ್ಣಿನಷ್ಟಿರುತ್ತದೆ. ಸೇಬು ಹಣ್ಣಿಗೂ ಭೂಮಿಗೂ ಇರುವ ಅನುಪಾತ ಗಮನಿಸಿ.




ಒಂದು ಅಣುವಿನ ಮಧ್ಯಬಿಂದುವಿನಿಂದ **electron cloud** ಅಂಚಿನವರೆಗಿರುವ ದೂರ ಒಂದು ಸೆಂಟಿಮೀಟರನ **100000000** ಭಾಗದಷ್ಟು. **(Ordinal: 100000000th; one hundred millionth)**.




1900 ನಂತರ ಅಣುವಿನೊಳಗೆ ಅಣುಕೇಂದ್ರವಿದ್ದು ಅದರ ಸುತ್ತಲೂ **Electrons** ಸುತ್ತಲೂ ತಿರುಗುತ್ತವೆ ಎಂದು ಗೊತ್ತಾಯಿತು.

**The atomic nucleus is the small, dense region consisting of protons and neutrons at the center of an atom, discovered in 1911 by Ernest Rutherford based on the 1909 Geiger–Marsden gold foil experiment.**




ಈ ಅಣುಕೇಂದ್ರ **(Nucleus)** ಅಳತೆ ಸೆಂಟಿಮೀಟರನ **1000000000000 (one trillian, 10^12)** ಭಾಗದಷ್ಟು

**. The nucleus of an atom is about 10 ^ -15 m in size; this means it is about 10-5 (or 1/100,000) of the size of the whole atom.**

ಇನ್ನು ಎಲೆಕ್ಟ್ರಾನಗಳ ಅಳತೆ ಸೆಂಟಿಮೀಟರನ 1000000000000000000 (Quintillian) ಭಾಗದಷ್ಟು ಇದನ್ನು ಊಹಿಸಿಕೊಳ್ಳುವದು ತುಂಬಾ ಕಷ್ಟ.




ಈ ಅಣುಕೇಂದ್ರ (Nucleus) ಅಳತೆ ಸೆಂಟಿಮೀಟರನ 1000000000000 (one trillian, 10^12) ಭಾಗದಷ್ಟು.
The **nucleus** of an **atom** is about $10^{-15}$ m in **size**; this means it is about $10^{-5}$ (or 1/100,000) of the **size** of the whole **atom**.
ಇನ್ನು ಎಲೆಕ್ಟ್ರಾನಗಳ ಅಳತೆ ಸೆಂಟಿಮೀಟರನ 1000000000000000000 (Quintillian) ಭಾಗದಷ್ಟು.



While the **size** of protons and neutrons is of the order of a Fermi ($10^{-15}$ m),
the **size of quarks** is ~$10^{-18}$ m.
A unit of length, 10−15 m, used in measuring nuclear distances.

Estimates of Quark Radii (fermi)

| Quark | Small | | Medium | | Large | |
|---|---|---|---|---|---|---|
| | Inner | Outer | Inner | Outer | Inner | Outer |
| Up | 0.0 | 0.25 | 0.25 | 0.64 | 0.64 | 0.8 |
| | Inner | Outer | Inner | Outer | Inner | Outer |
| Down | 0.0 | 0.33 | 0.33 | 0.85 | 0.85 | 1.1 |

ಇನ್ನುಉಪಪರಮಾಣುಗಳ ರಚನೆ ಮತ್ತು ಇತರ ವಿವರಗಳು ಗೊತ್ತಾದ ಮೇಲೆ **Quark** ದ ಅಳತೆ ಒಂದು ಮೀಟರ ಉದ್ದವಿರುವ ಕಟ್ಟಿಗೆ ತುಂಡನ್ನು **1,00,00,00,00,00,00,000 (1** ರ ಮುಂದೆ **15** ಸೊನ್ನೆ, 1ಪದ್ಮ, **A thousand quadrillions is a quintillion:)** ಸಮನಾಗಿ ವಿಭಾಗಿಸಿದರೆ ಬರುವ ಒಂದು ಸಣ್ಣ ತುಂಡಿನ ಉದ್ದ ಎಂದು ಗೊತ್ತಾಗಿದೆ.

**"SUPERSTRING THEORY"** ಇನ್ನೂ ಸಂಶೋಧನೆಯ ಹಂತದಲ್ಲಿದೆ ಆದರೂ ಕೆಲವು ವಿಚಾರಗಳು ಗೊತ್ತಾಗಿವೆ.

**According to the theory, the fundamental constituents of reality are strings of the Planck *length* (about 10^−33 cm).**






ಅದರ ಜೊತೆಗೆ ನಾವು ಅರ್ಥಮಾಡಿಕೊಳ್ಳಬೇಕಾದ ಕಣಗಳೆಷ್ಟು ಸಣ್ಣವು ಎನ್ನುವ ಮತ್ತು ಕಾಲದ ವಿವರ ಕೊಡುತ್ತದೆ.
ಜೊತೆಗೆ ಅಣ್ಣ ಬಸವಣ್ಣನವರು ವಚನದಲ್ಲಿ ಉಪಯೋಗಿಸಿರುವ **"ಬಿಂದು"** ಶಬ್ದ ಪ್ರಯೋಗ ಎಷ್ಟು ಸಮಂಜಸ ಎನ್ನುವದು ಗೊತ್ತಾಗುತ್ತದೆ.
ಇದನ್ನು ಉಹಿಸಿಕೊಳ್ಳುವದು ಅತಿ ಕಷ್ಟ. ಬರಿ ಗಣಿತದ ತತ್ವಗಳನ್ನು ಉಪಯೋಗಿಸಿ ಸಿದ್ಧ ಮಾಡುದು ಮಾತ್ರ ಸಾಧ್ಯ.




**The atomic nucleus is the small, dense region consisting of <u>protons</u> and <u>neutrons</u> at the center of an <u>atom</u>, discovered in 1911 by <u>Ernest Rutherford</u> based on the 1909 <u>Geiger–Marsden gold foil experiment</u>.**
ಒಂದು ಪ್ರೋಟಾನಿನ ತೂಕ **1.67262×10E27 kg**
**(1.67 ಕೆ.ಜಿ. ಯನ್ನು 1 ರ ಮುಂದೆ 27 ಸೊನ್ನೆಗಳಿರುವ ಅಂಕೆಯಿಂದ (1 octillion) ಭಾಗಿಸಿದರೆ ಬರುವ ಸಂಖ್ಯೆಯೇ ಒಂದು ಪ್ರೋಟಾನಿನ ತೂಕ. 1.67 ಕಿಲೋ ಅಕ್ಕಿಯನ್ನು ನಮ್ಮ ಜಗತ್ತಿನ ಎಲ್ಲ ಜನರಿಗೆ ದಶಕೋಟಿ ಸಲ ಹಂಚಿದರೆ ಒಬ್ಬೊಬ್ಬರಿಗೆ ಬರುವ ಅಕ್ಕಿಯ ತೂಕದಷ್ಟು ಒಂದು ಪ್ರೋಟಾನಿನ ತೂಕ)**
**ಈ ಎಲ್ಲ ವಿವರಣೆಗಳು ಗೊತ್ತಾದರೆ ಅಣ್ಣನವರು ಉಪಯೊಗಿಸಿದ ಬಿಂದು ನಮಗೆ ಅರ್ಥವಾಗಬಹುದು!.**
ಆಣ್ಣ ವಿವರಿಸುವ **ಆಧಿಯಾಧಾರ ದ್ರವ್ಯ** ಇದಕ್ಕಿಂತಲೂ ದಶಲಕ್ಷ ಪಟ್ಟು ಸಣ್ಣದಿರಬಹುದು ಅದಕ್ಕಾಗಿಯೇ ಅದರ ಒಂದು ಗುಣಧರ್ಮವನ್ನು **"ಬಿಂದು"** ಎಂದು ವಿವರಿಸಿದ್ದಾರೆ.
**ಈ ತೆರನಾದ ಅತೀ ಸಣ್ಣ ಸಣ್ಣ ಕಣಗಳ ಅಧ್ಯಯನ ಮಾಡಲು ಸಹಕಾರಿಯಾದದ್ದು Quantum Physics ಎನ್ನುವ ವಿಷಯ.**
ಈ ವಿಷಯ ಜಗತ್ತಿನ ಎಲ್ಲ ವಿಜ್ಞಾನಿಗಳು ವಿಚಾರ ಮಾಡುವ ದಿಕ್ಕನ್ನೆ ಬದಲಿಸಿದಲ್ಲದ ಎಲ್ಲರಿಗೂ ಹೊಸ ದಿಕ್ಕನ್ನು ತೋರಿಸಿತು.




**The quantum theory allows us to understand the world of the very small and the fundamental properties of matter. ...**
**Having this deep understanding of the various elements of the theory allows us to do much more than just move atoms around or know exactly why things behave the way they do**
***Quantum mechanics* arose gradually, from *theories* to explain observations which could not be reconciled with classical *physics*, such as Max Planck's solution in 1900 to the black-body radiation problem, and the correspondence between energy and frequency in Albert Einstein's 1905 paper.**
**Planck's work in thermodynamics led to the formulations of his quantum theory. ... Planck called the packets of energy quanta and he was able to determine that the energy of each quantum is equal to the**

**frequency of the radiation multiplied by a universal constant that he derived, now known as Planck's constant.**

**ಕಳಾತೀತ**

ಈ ಶಬ್ದದ ಅರ್ಥ ತಾತ್ವಿಕವಾಗಿ ಹಾಗೂ ಧಾರ್ಮಿಕವಾಗಿ ಅನೇಕ ಪರಿಣಿತರು ಮಾಡಿಕೊಟ್ಟಿದ್ದಾರೆ.

ನಾನಿಲ್ಲಿ ವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರುವೆ.

ಇಲ್ಲಿ ಕಳಾತೀತ ಶಬ್ದ "ಅನಂತ" ಮತ್ತು **"Quantum particle"** ಶಬ್ದಕ್ಕೆ ಪರ್ಯಾಯ ಶಬ್ದವಾಗಿ ಉಪಯೋಗಿಸಿದ್ದಾರೆ .

ಮೊದಲು "ಕಳಾತೀತ" ದ **Dictionary meaning** ನೋಡೋಣ.

**1. ಕಳಾತೀತ** ♪ kaḷātīta *adjective*

**being above or not bound by the principles of physical existence. not depictable by any art.**

**2. ಕಳಾತೀತ** ♪ kaḷātīta *noun*

**(phil.) a man or a deity who is above or not bound by the principles of**

**the physical existence of the soul.**

**that which cannot be the subject for an art.**

**ಕಳಾತೀತ ಶಬ್ದಕ್ಕೆ "Infinite" "ಅನಂತ" ಎಂಬ ಇನ್ನೊಂದು ಅರ್ಥವೂ ಇದೆ.**

ಇಂದು ಈ ವಿಷಯದ ವಿವರ ಅರಿಯೋಣ.

**Quasiparticles:(ಅರೆಕಣ)**






"ನಿಮ್ಮಹತ್ತಿರವಿದ್ದ ಹಣದಲ್ಲಿ ನೀವು ಖರ್ಚು ಮಾಡಿದಷ್ಟು ಹಣವನ್ನು ಗಳಿಸುತ್ತ ಹೋದರೆ ನಿಮ್ಮಲ್ಲಿರುವ ಹಣ ಅನಂತ ಕಾಲದವರೆಗೆ ಇರುತ್ತದೆ ಎಂದು ಒಪ್ಪುತ್ತೀರಿ ಅಲ್ಲವೇ?

ಇಂತಹ ಕಣಗಳನ್ನು ಕಂಡುಹಿಡಿದು ಅವುಗಳಿಗೆ **"Quasiparticle" (ಅರೆಕಣ)** ಎಂದು ಕರೆಯಲಾಗಿದೆ.

**“ಈ ಕಣಗಳು ನಾಶವಾಗುತ್ತವೆ ಮತ್ತು ಅವುಗಳ ಅವಶೇಶಗಳಿಂದ ಮತ್ತೆ ಅಂತಹದೇ ಸರ್ವ ಸಮನಾದ ಕಣಗಳು ಉತ್ಪತ್ತಿಯಾಗುತ್ತವೆ”**
ಇಲ್ಲಿ ಈ ಕಣಗಳನ್ನು ವಿವರಿಸಲು **”ಅನಂತ ಕಾಲ, ಅಮರತ್ವ”** ಶಬ್ದ ಉಪಯೋಗಿಸಬಹುದಲ್ಲವೇ?
**ಅಣ್ಣ ಬಸವಣ್ಣನವರು ಈ ವಿಶ್ವವನ್ನು ರೂಪಿಸುವ ಒಂದೇ ಒಂದು ವಸ್ತುವನ್ನು**
**“ನಾದ ಬಿಂದು ಕಳಾತೀತ ಆದಿಯಾಧಾರ ನೀನೆ ಅಯ್ಯ”**
**ಎಂದು ವಿವರಿಸುವಾಗ ಕಳಾತೀತ (quantum particles) ಅನಂತತೆಯನ್ನು ವಿವರಿಸಲು ಉಪಯೋಗಿಸಿದ್ದಾರೆ.**
**“I think I can safely say that nobody really understands quantum mechanics,”**
**observed the physicist and Nobel laureate Richard Feynman.**
**Nothing lasts forever. Humans, planets, stars, galaxies, maybe even the Universe itself, everything has an expiration date.**
**But things in the quantum realm don't always follow the rules.**
**Now, scientists have found that quasiparticles in quantum systems could be effectively immortal.**
**Infinite decay and rebirth of quasiparticles:**
**Ruben Verresen, the lead author on the research says**
***“If this decay proceeds very quickly, an inverse reaction will occur after a certain time and the debris will converge again. This process can recur endlessly and a sustained oscillation between decay and rebirth emerges.”***
**So, technically, in this case, immortality is achieved by a pattern of re-emergence rather than rebirth For those who are unaware, quasiparticles aren’t exactly particles like electrons or quarks.**
**They are actually the disturbances or excitations in a solid that can be caused by electrical or magnetic forces. But collectively, they behave like particles**

**ನಾದ:**




"ನಾದ" ಶಬ್ದವನ್ನು ಅಣ್ಣನವರು ತುಂಬಾ ವಿಶಾಲವಾದ ಅರ್ಥದಲ್ಲಿ ತಮ್ಮ ವಚನದಲ್ಲಿ ಉಪಯೊಗಿಸಿದ್ದಾರೆ.
ಭಾರತೀಯ ತತ್ವಜ್ಞಾನದಲ್ಲಿ "ನಾದ" ಶಬ್ದಕ್ಕೆ ಅಪೂರ್ವವಾದ ವಿವರಣೆ ಸಿಗುತ್ತದೆ.
ಆದರೆ ಇಲ್ಲಿ ವಿಜ್ಞಾನಿಗಳು "ನಾದ" ಶಬ್ದವನ್ನು "ಕಂಪನ" "Vibration" ಶಬ್ದದ ಪರ್ಯಾಯ ಪದವಾಗಿ ಉಪಯೋಗಿಸಿದ್ದಾರೆ.
ಬಿಗಿಯಾಗಿ ಕಟ್ಟಿದ ತಂತಿಯನ್ನು ಮೀಟಿದಾಗ ತಂತಿ ಕಂಪಿಸುವದು ಗಮನಕ್ಕೆ ಬರುವದು.
ತಂತಿ ಮೀಟುವ ವಿವಿಧ ರೀತಿಯ ಕ್ರಮ ಅನುಸಾರ ವಿವಿಧ ಕಂಪನಗಳಾಗುತ್ತವೆ.
ಚಿತ್ರ ಈ ವಿವರಗಳನ್ನು ನೀಡುತ್ತದೆ.




**All stringed instruments make sound and notes by vibrating. Musicians make the strings vibrate by rubbing a bow against them, striking them, or plucking them. However, if you were to take a string and stretch it tight and pluck it, it likely would not make a very loud sound.**
**When there is a node on each end and only one antinode in between them, the wave is said to vibrate at the fundamental frequency.**
**String vibration.**
**A vibration in a string is a wave.**

**Resonance causes a vibrating string to produce a sound with constant frequency, i.e. constant pitch.**

**If the length or tension of the string is correctly adjusted, the sound produced is a musical tone.**
**String Theory and Vibrations.**
**The Foundation of String Theory: String theory states that all matter in the universe is composed of tiny 1-dimensional strings, not point particles (which are 0-dimensional in nature).**
**According to string theory, "strings" are tiny bits of pure energy that are the smallestconstituents of matter and force interaction in our universe. General quantum strings are approximated to be10^ -33 cm in length.**




**Superstring theory is an attempt to explain all of the particles and fundamental forces of nature in one theory by modeling them as vibrations of tiny supersymmetric strings. String theory depicts strings of energy that vibrate, but the strings are so tiny that you never perceive the vibrations directly, only their consequences.**

**Much as different vibrational patterns of a violin string play different musical notes, the different vibrations of the tiny strands in string theory were imagined to yield different particles of nature.**
**According to the theory, the strings have length (about $10^{-33}$ cm); the mass and charge of a particle is determined by how a string vibrates.**
**For example, string theory posits that an electron is a string undergoing one particular vibrational pattern; a quark is imagined as a string undergoing a different vibrational pattern.**
**Thus, string theory was proposed as the sought-for unification of all forces and all matter.**

ಕೈಲಾಸದ ಪೂರ್ವದಿಕ್ಕಿನ ಹೆಬ್ಬಾಗಿಲ ಉಪ್ಪರ ಗೋಪುರವ ಕಂಡು ಒಳಹೊಕ್ಕು ಹೋಗಿ ಕಂಗಳಿಗೆ ಮಂಗಳವಾದ ಶಿವಮಹಾಸಭೆಯ ಕಂಡು ಅಲ್ಲಿ ಹೊಡೆವ ಭೇರಿಯನಾದ ತುಡುಮು ತಾಳ ಮದ್ದಳೆಯನಾದ ಗಡಗಡ ಝಲ್ಲೆಂಬ ಸಮಾಳ ಕರಡಿ ಕೌಸಾಳನಾದ ನುಡಿಸುವ ವೀಣೆ ಕಿನ್ನರಿ ಸ್ವರಮಂಡಲ ತಂಬೂರಿ ಕಾಮಾಕ್ಷಿಯನಾದ ಭೋರಿಡುವ ಶಂಖ ಘಂಟೆಯನಾದ ಸ್ವರಗೈವ ನಾಗಸ್ವರ ಕೊಳಲು ಸನಾಯದ ನಾದ ಕೂಗಿಡುವ ಕಹಳೆ ಹೆಗ್ಗಹಳೆ ಚಿನಿಕಹಳೆ ಕರಣೆಯನಾದ ಇಂತಿವು ಮೊದಲಾದ ನಾನಾ ತೆರದ ನಾದಂಗಳನು ಕಿವಿದುಂಬಿ ಕೇಳಿ ಮನದುಂಬಿ ಸಂತೋಷಿಸಿ ---- ಷಣ್ಮುಖಸ್ವಾಮಿ

ನಾದ ಹೊರಹೊಮ್ಮಿಸುವ ಅನೇಕ ವಾದ್ಯಗಳನ್ನು ಷಣ್ಮುಖಸ್ವಮಿ ಹೆಸರಿಸಿದ್ದಾರೆ. ಅದರಲ್ಲಿ "ಕಿನ್ನರಿ" ಯ ನಾದ ಹೊರಡುವ ವಿವರ ಗಮನಿಸೋಣ.










ಇಲ್ಲಿ "ಬಿಂದು" ಮತ್ತು "ಕಳಾತೀತ" ಶಬ್ದಗಳು ಜೊತೆಯಾಗಿ

**"ಅತೀ ಸಣ್ಣ ಸಣ್ಣ ಕಣ ದಿಂದಾ ಅನಂತವಾದ ವಿಶ್ವ ಉತ್ಪತ್ತಿಯಾಯಿತು"** ಎಂಬ ತತ್ವವನ್ನು ಹೇಳುತ್ತವೆ.
ಇದುವೇ ವಿಜ್ಞಾನಿಗಳು ಪ್ರಸ್ತುತ ಪಡಿಸಿದ "Bing Bang" ತತ್ವ.

**Fundamental particles are the particles whose structure is unknown i.e it is unknown whether they are made up of different smaller particles or not. So they are the smallest particles known to this date. Theoretically there are 18 of them, (however, one of them is not yet confirmed),**

**The Higgs Boson particle (or god particle) was speculated by Peter Higgs in 1964.**

**Thought, recently, the particle has been discovered by CERN in 2012. It proved the existence of the Higgs field, and stated that the god particle gave the other particles mass**




**The Higgs field occupies everything in the universe.**

**ಸಿದ್ವರಾಮ ಶಿವಯೋಗಿಗಳ "ಅಣುವಿನೊಳಗೆ ಅಣುವಾಗಿಪ್ಪಿರಿ, ಎಲೆ ದೇವಾ, ನೀವು;"**

**"ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?"**

ಎಂಬ ಮಾತಲ್ಲಿ ಈ **"ದೇವ" (God particle)** ಎಂಬ ಈ ದ್ರವ್ಯ ವಿಸ್ವದೆಲ್ಲಡೆ ವ್ಯಾಪಿಸಿದೆ

**"ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?" ಎಂಬ ವಚನಭಾಗವನ್ನು ವಿಜ್ಞಾನಿಗಳು ಸಿದ್ವಮಾಡಿದ್ದಾರೆ.**

**It is visualized as molasses that drags particles that move through it. Particles that interact with the Higgs, receive mass.**

So electrons that hardly interact with the field have very little mass, and protons and neutrons that interact with it regularly have more mass.
The god particle's existence was proved in the Large Hadron Collider at CERN.
There are protons that are smashed together to relesase energy; since Einstein's theory of relativity states that mass is energy and energy cannot be destroyed, new particles are created from the release of energy.
The Higgs is unstable, therefore it splits into more particles.
The sensors in the collider detected this rare occurrence.
It is rare because there are trillions of collisions occurring.






**1960** ರಲ್ಲೇ ಹಿಗ್ಸ ಕ್ಷೇತ್ರ ಮತ್ತು ಅದಕ್ಕನುಗುಣವಾದ ಕಣದ ಬಗ್ಗೆ ಪೂರ್ವ ಸಿದ್ಧಾಂತವನ್ನು ಬ್ರಿಟಿಷ್ ವಿಜ್ಞಾನಿ ಪೀಟರ್ ಹಿಗ್ಸ ಮತ್ತು ಅವನ ಸಹಚರರು ಮಂಡಿಸಿದ್ದರು.

“ದಿ ಸ್ಟ್ಯಾಂಡರ್ಡ್ ಮಾಡೆಲ್" ನಲ್ಲಿ ಹಿಗ್ಸಬೋಸಾನ್ ಒಂದು ಮೂಲಕಣ ಇದನ್ನು ಸರ್ನ್ ಪ್ರಯೋಗಾಲದ **ಲಾರ್ಜ್ ಹ್ಯಾಡ್ರಾನ್ ಕೊಲೈಡರ್** ಎಂಬ ಭಾರಿ ಉಪಕರಣ ಬಳಸಿ ನಡೆಸಿದ ಪ್ರಯೋಗಗಳಲ್ಲಿ ಕಂಡುಹಿಡಿದಿರಬಹುದಾಗಿದೆ.

**ಪ್ರಯೋಗದಲ್ಲಿ ಕಂಡು ಬಂದ ಕಣ ಅದೇ ಎಂದಾದರೆ ವಿಶ್ವ ರಹಸ್ಯ ಭೇದಿಸಿದಂತೆಯೇ**

**ಎಲ್ಲ ದ್ರವ್ಯವು ಮೂಲ ಕಣಗಳಾದ ಕ್ವಾರ್ಕ್ ಮತ್ತು ಲೆಪ್ಟಾನ್‌ಗಳಿಂದಾಗಿದೆ ಎಂದು ಹೇಳಿದೆಯಷ್ಟೇ. ಆದರೆ ಕ್ವಾರ್ಕ್‌ಗಳು ಅತಿ ಹಗುರ ಹಾಗಾದರೆ ದ್ರವ್ಯಕ್ಕೆ ರಾಶಿ ಎಲ್ಲಿಂದ ಬಂತು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ.**

**ಈ ಕಣದ ಅಸ್ತಿತ್ವವು ಅನೇಕ ಕಣಗಳಿಗೆ ವಿವಿಧ ಮೊತ್ತದ ರಾಶಿಯಿರಬೇಕಾದರೆ, ಪ್ರೋಟಾನ್ ನಂತಹ ಕಣಗಳೇಕೆ ಶೂನ್ಯ ರಾಶಿ ಹೊಂದಿವೆ ಎಂಬುದನ್ನು ವಿವರಿಸಲಾಗಿದೆ.**

ಈ ಸಂಶೋಧನೆಗಳು ಮುಂದುವರೆದು ಅಣ್ಣ ಬಸವಣ್ಣನವರು ಮತ್ತು ಶರಣರು ಪ್ರಸ್ತುತಡಿಸಿದ ಸೃಷ್ಟಿ ನಿರ್ಮಾಣವಾದ ಏಕ ವಸ್ತುವನಿನ ಬಗೆಗಿನ ವಿಚಾರಗಳನ್ನು ಸಮರ್ಥಿಸಬಹುದು.

ಅಕ್ಕ ಹೇಳಿದ "ಇಂತೀ ಜಲವು ಒಂದೆ ನೆಲನು ಒಂದೆ ಆಕಾಶವು ಒಂದೆ" ಎಂಬ ಮಾತನ್ನು ಈ ಪ್ರಯೋಗಾಲಯದಲ್ಲಿ ಸಿದ್ಧ ಮಾಡುವ ದಿನ ಬೇಗ ಬರಲಿ ಎಂದು ಆಶಿಸುವೆ.

# ವಚನಾಮೃತ ಬಿಂದು 3
# ಎರಡನೆಯ ತತ್ವ
# ಬಲ (ENERGY, ಶಕ್ತಿ) ಪ್ರಾಣ

ಅಕ್ಕಮಹಾದೇವಿಯವರು




## “ಈರೇಳುಭುವನವ ಬೆಳಗುವ ದಿವ್ಯ ಸ್ವರೂಪವಿರುವ ಗುರು ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ ಪರಮಗುರು”

ಎಂಬ ವಚನ ಭಾಗದಲ್ಲಿ **ಕೂಡಲಸಂಗಮದೇವನನ್ನು ವಿವರಿಸಲು** ಬೇಕಾದ ಎರಡನೆಯ ತತ್ವದ ವಿವರಣೆ ಕೊಟ್ಟಿದ್ದಾರೆ.

**ಕೂಡಲಸಂಗಮದೇವನನ್ನು ವಿವರಿಸಲು** ಬೇಕಾದ ಎರಡನೆಯ ತತ್ವ **“ಶಕ್ತಿ”** ಎಂದು ಸೂಚಿಸಿದ್ದಾರೆ.




ಅಲ್ಲಮಪ್ರಭು ಅವರು ತಮ್ಮ ವಚನದಲ್ಲಿ ಶಕ್ತಿಗಳನ್ನು ಆದಿ ಮತ್ತು ಅನಾದಿ ಎಂಬ ಎರಡು ವಿಧದ ಶಕ್ತಿಯ ಗುಂಪುಗಳಾಗಿ ವಿಂಗಡಿಸಿದ್ದಾರೆ. ಈ ವಚನದಲ್ಲಿ ಅಲ್ಲಮಪ್ರಭು ಅವರು ಅಕ್ಕಮಹಾದೇವಿಯವರನ್ನು ಸ್ಮರಿಸಿದ್ದಾರೆ.

ನಾನೀಗ ಬರೆಯುತ್ತಿದ್ದೇನೆ, ಹೊರಗೆ ಗಾಳಿ ಬೀಸುತ್ತಿದೆ, ಬುಲ್ಬ ಬೆಳಗಿ ಬೆಳಕು ದೊರೆಯತ್ತಿದೆ, …. ಇವೆಲ್ಲ ಕೆಲಸಗಳು ನಡೆಯುವದು ಬೇರೆ ಬೇರೆ ತರಹದ ಬಲಗಳ ಮೂಲಕ. ಒಂದು ವಸ್ತುವಿನ ಮೇಲೆ ಬಲ ಪ್ರಯೋಗಿಸಲ್ಪಟ್ಟು, ಆ ವಸ್ತು ಬಲ ಪ್ರಯೋಗಿಸಿದ ದಿಕ್ಕಿನಲ್ಲಿ ಸ್ಥಾನಪಲ್ಲಟಗೊಂಡಿದ್ದರೆ, ಬಲವು ಕೆಲಸ ಮಾಡಿದೆ ಎನ್ನಲಾಗುವುದು.

ಇಲ್ಲಿಯವರೆಗೆ ಮೊದಲತತ್ವ "ವಸ್ತು" ವಿನ ಬಗೆಗಿನ ವಿವರ ಗೊತ್ತಾಗಿದೆ.

ಆ "ವಸ್ತು" ಕೆಲಸ ಮಾಡುತ್ತದೆ ಎನ್ನುವದು ಸರ್ವವಿದಿತ. ಹಾಗಾಗಿ ಅಲ್ಲಿ ಶಕ್ತಿಯ ಪ್ರಯೋಗವಾಗಿದೆ ಎನ್ನುವದು ಖಚಿತವಾಯಿತು.

ವಿಜ್ಞಾನಿಗಳು ಕೊಟ್ಟ ಬಲಗಳ ವಿವರ ಇಲ್ಲಿದೆ.ಬಲಗಳಲ್ಲಿ (ಶಕ್ತಿ, **Energy)** ಅನೇಕ ವಿಧ. **ಚಲನಶಕ್ತಿ, ಅಂತಸ್ಥ ಶಕ್ತಿ, ಶಾಖೋತ್ಪನ್ನ ಶಕ್ತಿ, ಗುರುತ್ವ ಶಕ್ತಿ, ಶಾಬ್ದಿಕ ಶಕ್ತಿ, ಬೆಳಕಿನ ಶಕ್ತಿ, ಸ್ಥಿತಿಸ್ಥಾಪಕ ಶಕ್ತಿ ಮತ್ತು ವಿದ್ಯುತ್ಕಾಂತೀಯ** ಶಕ್ತಿ – ಹೀಗೆ ಶಕ್ತಿಯಲ್ಲಿ ಹತ್ತು ಹಲವು ರೂಪಗಳಿವೆ.




ಯಾವ ಬಲದ ಆಧಾರದ ಮೇಲೆ ಶಕ್ತಿ ಉತ್ಪನ್ನವಾಗಿದೆ ಎಂಬುದನ್ನು ಆಧರಿಸಿ ಶಕ್ತಿಗೆ ಆ ಬಲದ ಹೆಸರನ್ನು ಗುಣವಾಚಿಯನ್ನಾಗಿ ಸೇರಿಸಲಾಗುತ್ತದೆ.

**ಯಾವುದೇ ಶಕ್ತಿಯನ್ನು ರೂಪಾಂತರಿಸಬಹುದು. ಆದರೆ, ಶಕ್ತಿಯ ಒಟ್ಟು ಪ್ರಮಾಣ ಮಾತ್ರ ಅಷ್ಟೇ ಇರುತ್ತದೆ.**

## ಶಕ್ತಿ-ಸಂಪನ್ಮೂಲದ ಸಂರಕ್ಷಣೆ

ಎಂಬ ಈ ತತ್ವವನ್ನು **19**ನೆಯ ಶತಮಾನದ ಆರಂಭದಲ್ಲಿ ಮೊದಲ ಬಾರಿಗೆ ಹೌದೆಂದು ಸಮರ್ಥಿಸಲಾಯಿತು. ಯಾವುದೇ ವ್ಯವಸ್ಥೆಯಲ್ಲೂ ಇದು ಅನ್ವಯವಾಗುತ್ತದೆ.

ನೋಥರ್ ಪ್ರಮೇಯದ ಪ್ರಕಾರ, ಭೌತವಿಜ್ಞಾನದ ನಿಯಮಗಳು ಕಾಲಾಂತರದಲ್ಲಿ ಬದಲಾಗದು ಎಂಬ ಸಂಗತಿಯನ್ನು ಆಧರಿಸಿಯೇ ಶಕ್ತಿಯ ಸಂರಕ್ಷಣೆ ನಡೆದಿದೆ.




ಎಂಬ ಈ ತತ್ವವನ್ನು **19**ನೆಯ ಶತಮಾನದ ಆರಂಭದಲ್ಲಿ ಮೊದಲ ಬಾರಿಗೆ ಹೌದೆಂದು ಸಮರ್ಥಿಸಲಾಯಿತು. ಯಾವುದೇ **ವ್ಯವಸ್ಥೆಯಲ್ಲೂ ಇದು ಅನ್ವಯವಾಗುತ್ತದೆ.**

**ನೋಥರ್ ಪ್ರಮೇಯ**ದ ಪ್ರಕಾರ, ಭೌತವಿಜ್ಞಾನದ ನಿಯಮಗಳು ಕಾಲಾಂತರದಲ್ಲಿ ಬದಲಾಗದು ಎಂಬ ಸಂಗತಿಯನ್ನು ಆಧರಿಸಿಯೇ ಶಕ್ತಿಯ ಸಂರಕ್ಷಣೆ ನಡೆದಿದೆ




**ವಿಶ್ವದಲ್ಲಿರುವ ಒಟ್ಟು ಶಕ್ತಿಯ ಮೊತ್ತವು ಸ್ಥಿರವಾಗಿರುತ್ತದೆ.**

ಹೊಸ ಶಕ್ತಿಯನ್ನು ಉತ್ಪಾದಿಸುವದು ಸಾಧ್ಯವಿಲ್ಲ. ಇದ್ದ ಶಕ್ತಿಯನ್ನು ನಾಶಮಾಡಲೂ ಸಾಧ್ಯವಿಲ್ಲ.

ಈ ತತ್ವದ ನಿರೂಪಣೆಯನ್ನು ಶರಣರು ತಮ್ಮ ವಚನದಲ್ಲಿ ಮಾಡಿದ್ದಾರೆ.
ನಾನಿಲ್ಲಿ ಡಾ ವ್ಹಿ ವ್ಹಿ ಬಾಗಲಕೋಟ ಅವರು ತಮ್ಮ ಪುಸ್ತಕ
**“ಬಸವಣ್ಣನವರ ಹಾಗೂ ಅಕ್ಕಮಹಾದೇವಿಯವರ ವಚನದಲ್ಲಿ ವೈಜ್ಞಾನಿಕ ಅಂಶಗಳು”**
ಕೊಟ್ಟ ವಿವರಣೆಗಳನ್ನು ಉಪಯೋಗಿಸುತ್ತಿದ್ದೇನೆ. ಅವರಿಗೆ ಧನ್ಯವಾದಗಳು.
**"ಸ್ಥಾವರ"** ಶಬ್ದವು ಚಲನರಹಿತವಾದ, ದೃಶ್ಯ, ಸ್ಪರ್ಶ ಸಾಧ್ಯವಾದ ದ್ರವ್ಯ **(Matter)** ವನ್ನು ಪ್ರತಿನಿಧಿಸುತ್ತದೆ.
**"ಜಂಗಮವು"** ಚಲನಶೀಲವಾಗಿಯೂ ಅದೃಶ್ಯವಾಗಿಯೂ ಇರುವದರಿಂದ ಇದು ಶಕ್ತಿ ಎಂದು ಹೇಳಬಹುದು.

## ಶಕ್ತಿ ನಿತ್ಯತ್ವ:




## “Principle of conservation of Energy”

ಇದನ್ನು ಕನ್ನಡದ ಒಂದೇ ಪದ ಪುಂಜ **“ಜಂಗಮಕ್ಕಳಿವಿಲ್ಲ”** ದಲ್ಲಿ ಅಳವಡಿಸಲಾಗಿದೆ.
ಮೊದಲಿಗೆ ದ್ರವ್ಯ **(Matter)** ಮತ್ತು ಶಕ್ತಿ (**Energy**) ಇವುಗಳು ಸಂಪೂರ್ಣವಾಗಿ ಬೇರೆ ಬೇರೆಯಾಗಿದ್ದು ಎರಡು ಪ್ರತ್ಯೇಕ ದ್ರವ್ಯ ನಿತ್ಯತ್ವ ಮತ್ತು ಶಕ್ತಿ ನಿತ್ಯತ್ವ ಎಂಬ ಸಿಂದ್ಧಾಂತಗಳನ್ನು ಅಂಗೀಕರಿಸಲಾಗಿತ್ತು. ಅಣ್ಣ ಬಸವಣ್ಣನವರಿಗೆ

ದ್ರವ್ಯ ಮತ್ತು ಶಕ್ತಿ ಇವುಗಳು ಬೇರೆ ಬೇರೆಯಾದವುಗಳಲ್ಲ ಎಂದು ಗೊತ್ತಿತ್ತು. ಅದನ್ನವವರು ತಮ್ಮ ವಚನದಲ್ಲಿ "ಸ್ಥಾವರ ಜಂಗಮ ಉಭಯ ಪಕ್ಷ ಒಂದೇ" **"Matter and energy are the same "** ವಿವರಿಸಿದ್ದಾರೆ.

ಇನ್ನೂ ಒಂದು ವಚನದಲ್ಲಿ ಈ ವಿಷಯ ದೃಡಪಡಿಸಿದ್ದಾರೆ.

ವಿಶಿಷ್ಟ ಸಾಪೇಕ್ಷತಾ ತತ್ವದಲ್ಲಿ "ದ್ರವ್ಯ ಮತ್ತು ಶಕ್ತಿ ಇವುಗಳು ಬೇರೆ ಬೇರೆಯಾದವುಗಳಲ್ಲ, ಒಂದೇ ವಸ್ತುವಿನ ಬೇರೆ ರೂಪಗಳು"

**ಗೋಳಕಾಕಾರ ಗೋರಕ್ಷನೆಂಬ ಪಟ್ಟಣದಲ್ಲಿ, ಗೋಮಯ ವೆಂಬ ಪರಶಕ್ತಿ** ಅಪರ ಪ್ರಸೂತಕವಾಗಲಾಗಿ, ಅದರಂಡದಲ್ಲಿ ಆಡು ಹುಟ್ಟಿತ್ತು. ಆಡಿನ ಅಂಡದಲ್ಲಿ ಕೋಡಗ ಹುಟ್ಟಿತ್ತು. ಕೋಡಗದ ಕುಂಡಿಯಲ್ಲಿ ಸಿರಿಯಕ್ಕ ಹುಟ್ಟಿದಳು. ಸಿರಿಯಕ್ಕನ ಆತುರಿಯದಲ್ಲಿ ಮೂದೇವಿ ಉರಿಯಕ್ಕ ಹುಟ್ಟಿದಳು. ಉರಿಯಕ್ಕನ ಉರವಣೆಯಲ್ಲಿ ಜಗ ಹುಟ್ಟಿ, ಜಗದ ಸಿರಿಯಲ್ಲಿ ಹೋದರು ಹಿರಿಯರೆಲ್ಲರು, ಬಂಕೇಶ್ವರಲಿಂಗವನರಿಯದೆ.

**ಶರಣ ಸಂಗಮೇಶ್ವರದ ಅಪ್ಪಣ್ಣ:**

ಅವರ ಈ ವಚನ ಚನ್ನಬಸವಣ್ಣನವರ ವಚನದಲ್ಲಿ ಬರುವ ಅನೇಕ ತತ್ವಗಳನ್ನು ಸಮರ್ಥಿಸುತ್ತದೆ.

| **ಶರಣ ಸಂಗಮೇಶ್ವರದ ಅಪ್ಪಣ್ಣನವರ ವಚನ** | |
|---|---|
| ಆದಿ ಅನಾದಿಯೆಂಬವು ನಾದಕ್ಕೆ ಬಾರದ ಮುನ್ನ,<br>ಶೂನ್ಯ ನಿಃಶ್ಶೂನ್ಯ ಸುರಾಳವೆಂಬವು ಸುಳುಹುದೋರದ ಮುನ್ನ, ಬೆಳಗು ಕತ್ತಲೆಯಿಲ್ಲದ ಮುನ್ನ, ಅಳಿವು ಉಳಿವು ಸುಳುವು ಸೂತ್ರ ಜಂತ್ರ ಜಡ ಅಜಡವಿಲ್ಲದ ಮುನ್ನ, ಕಡೆ ನಡು ಮೊದಲಿಲ್ಲದ ಅಡಿಯಲಾಧಾರ ಹಿಡಿವರೆ ರೂಹಿಲ್ಲದ ಮುನ್ನ,<br>ಒಡೆಯನಿಲ್ಲ ಬಂಟನಿಲ್ಲ ನಡೆಯಿಲ್ಲ ನುಡಿಯಿಲ್ಲ ಬೆಡಗಿಲ್ಲ ಒಡಲಿಲ್ಲದ ಮುನ್ನ, ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯರು ತಲೆದೋರದ ಮುನ್ನ,<br>ದೇವನಿಲ್ಲ ಭಕ್ತನಿಲ್ಲದ ಮುನ್ನ,<br>ನೀನು ನಾನುಯಿಲ್ಲದ ಮುನ್ನ,<br>ಆಕಾರ ನಿರಾಕಾರವೇನೂಯಿಲ್ಲದ ಮುನ್ನ, ತಾನು ತಾನೆಂಬ ತಲ್ಲಣವಿಲ್ಲದಂದು, ಆ ಬಟ್ಟಬಯಲ ಬ್ರಹ್ಮವೆ ಘಟ್ಟಿಯಾದ ಘನವೆಂತೆಂದಡೆ: ನಿಮ್ಮನುವ ನೀವರಿದ ಘನಮಹಿಮರು ತಿಳಿದು ನೋಡಿರಣ್ಣ. | ಇಂತಪ್ಪ ಬಸವಣ್ಣ ಜಲವ ಬಿಡಲು ಅಪ್ಪುಮಯವಾಯಿತ್ತು.<br>ಇಂತಪ್ಪ ಬಸವಣ್ಣನ ತೇಜವೆ ಅಗ್ನಿಯಾಯಿತ್ತು.<br>ಇಂತಪ್ಪ ಬಸವಣ್ಣನ ಉಚ್ಛ್ವಾಸ ನಿಶ್ವಾಸವೆ ವಾಯುವಾಯಿತ್ತು.<br>ಇಂತಪ್ಪ ಬಸವಣ್ಣನ ಶಬ್ದವೆ ಆಕಾಶವಾಯಿತ್ತು.<br>ಇಂತಪ್ಪ ಬಸವಣ್ಣನ ಕಂಗಳ ಬೆಳಗೆ ಚಂದ್ರ ಸೂರ್ಯರಾದರು.<br>ಇಂತಪ್ಪ ಬಸವಣ್ಣನ ಬುದ್ಧಿಯೆ ಆತ್ಮವೆನಿಸಿ, ಅಷ್ಟತನುಮೂರ್ತಿಯೆ ತನುವೆನಿಸಿ,<br>ಪಿಂಡ ಬ್ರಹ್ಮಾಂಡ ಕೋಟ್ಯಾನುಕೋಟಿ ಅಂಡಪಿಂಡಾಂಡಂಗಳಿಗೆ ಒಡಲಾಗಿ,<br>ಅಡಿಮುಡಿಗೆ ತಾನೆ ಆದಿಯಾಗಿ,<br>ಸರ್ವವೂ ನಮ್ಮ ಬಸವಣ್ಣನ ಒಡಲಲ್ಲಿ ಹುಟ್ಟುತ್ತ ಬೆಳೆಯುತ್ತ ಅಳಿವುತಿಪ್ಪವು ಕಾಣಿರೆ.<br>ಇಂತಪ್ಪ ಸಕಲಪ್ರಾಣಿಗಳಿಗೆ ನಮ್ಮ ಬಸವಣ್ಣನ ಗೋಮಯದಲ್ಲಿ ಹುಟ್ಟಿದ ಪೃಥ್ವಿಯೆ ಪದಾರ್ಥವೆ ಆದಿಜಲದಿಂದ ಹುಟ್ಟಿದ ಉದಕವೆ ಸಾರ.<br>ತೇಜದಿಂದ ಹುಟ್ಟಿದ ಅಗ್ನಿಯೆ ಕಳೆ. |

ಆ ಬಟ್ಟಬಯಲೆಂದಡಾರು ಬಸವ,
ಆ ಬಸವನೆಂದಡಾರು
ಬಟ್ಟಬಯಲು.
ಆ ಬ್ರಹ್ಮನೆಂದಡಾರು ಬಸವ,
ಬಸವನೆಂದಡಾರು ಬ್ರಹ್ಮ.
ಅಂತಪ್ಪ ಬಸವನ ಆ ಮೂಲವ
ಬಲ್ಲವರು ನೀವು ಕೇಳಿರಣ್ಣಾ. ಬಸವ
ಎಂಬ ಮೂರಕ್ಷರವೆ ಮೂಲಪ್ರಣವ.
ಅದೆಂತೆಂದಡೆ:ಬಯೆಂಬುದೆ
ಚಿನ್ನಾದ ಆಕಾರವಾಯಿತ್ತು,
ಸಯೆಂಬುದೆ ಚಿದ್ಬಿಂದುವಾಯಿತ್ತು,
ಮತ್ತಂ ಬಯೆಂಬುದೆ
ಅಕಾರವಾಯಿತ್ತು,
ಸ ಎಂಬುದೆ ಉಕಾರವಾಯಿತ್ತು.
ವಾ ಯೆಂಬುದೆ ಚಿತ್ಕಳೆಯಾಯಿತ್ತು.
ಮತ್ತಂ ಬಯೆಂಬುದೆ
ಆಕಾರವಾಯಿತ್ತು,
ಸ ಎಂಬುದೆ ಉಕಾರವಾಯಿತ್ತು.
ವಾಯೆಂಬುದೆ ಮಕರವಾಯಿತ್ತು.
ಮತ್ತೆ ಬಯೆಂಬುದೆ
ನಾದವಾಯಿತ್ತು, ಸಯೆಂಬುದೆ
ಬಿಂದುವಾಯಿತ್ತು,
ವಾಯೆಂಬುದೆ ಕಳೆಯಾಯಿತ್ತು.
ಮತ್ತೆ ಬ ಎಂಬುದೆ ಗುರುವಾಯಿತ್ತು,
ಸಯೆಂಬುದೆ ಅಂಗವಾಯಿತ್ತು,
ವಾ ಎಂಬುದೆ ಜಂಗಮವಾಯಿತ್ತು.
ಬ ಎಂಬ ನಾದವೆತ್ತಲು, ಸ ಎಂಬ
ಬಿಂದು ಕೂಡಲು,
ವಾಯೆಂಬ ಕಳೆ ಬೆರೆಯಲು,
ಗೋಳಕಾಕಾರವಾಗಿ
ಆದಿಪ್ರಣಮವೆನಿಸಿತ್ತು.
ಆದಿಪ್ರಣಮ, ಅನಾದಿಪ್ರಣಮ,
ಅಂತ್ಯಪ್ರಣಮವೆಂಬವು
ನಮ್ಮ ಬಸವಣ್ಣನ ಸ್ಥೂಲ ಸೂಕ್ಷ್ಮ
ಉಚ್ಛ್ವಾಸ ನಿಶ್ವಾಸದಿಂದ ಹುಟ್ಟಿದ
ಚಂದ್ರಸೂರ್ಯರೇ ಅರಿವು ಮರವೆ.
ಬುದ್ಧಿಯಿಂದ ಹುಟ್ಟಿದ ಆತ್ಮನೆ
ಚೈತನ್ಯಾತ್ಮ.
ಇಂತೀ ಸರ್ವಪ್ರಾಣಿಗಳಿಗೆ ನಮ್ಮ
ಬಸವಣ್ಣನೆ ಆದಿ ಕಾಣಿರೇ.
ಆದಿಯಲ್ಲಿ ಹುಟ್ಟಿ, ಮಧ್ಯದಲ್ಲಿ
ಬೆಳೆದು, ಅಂತ್ಯದಲ್ಲಿ
ಲಯವನೆಯ್ದಿದರೆ, ಮತ್ತೆ ನಿಲ್ಲುವದಕ್ಕೆ
ನಮ್ಮ ಬಸವಣ್ಣನೆ ಆದಿ ಕಾಣಿರೆ.
ಇಂತೀ ಒಳ ಹೊರಗೆ ಕೈಕೊಂಬರೆ,
ದೇವರು ಬೇರೊಬ್ಬರುಂಟಾದರೆ ಬಲ್ಲರೆ
ನೀವು ಹೇಳಿ ತೋರಿರೆ.
ಅಲ್ಲದಿರ್ದರೆ ನಿಮ್ಮ
ವೇದಾಗಮಶಾಸ್ತ್ರಪುರಾಣಗಳ ಕೈಯಲ್ಲಿ
ಹೇಳಿಸಿರೆ.
ಇಂತೀ ಅನಾದಿಸಂಸಿದ್ಧ
ಬಟ್ಟಬಯಲಬ್ರಹ್ಮವೆ ಬಸವನೆಂಬುದಂ
ಕಾಣುತಿದರ್ೂ ಕೇಳುತಿದರ್ೂ
ಹೇಳುತಿದರ್ೂ ಅರಿದಿದರ್ೂ,
ಮತ್ತೆ ಕೀಳುದೈವಂಗಳನಾರಾಧಿಸಿ
ಅರ್ಚನೆ ಪೂಜೆಯ ಹಲವು ಚಂದದಲ್ಲಿ
ಮಾಡಿ,
ಹಲವು ಜಾತಿ
ಹಲವುದರುಶನವೆನಿಸಿಕೊಂಡುಸ
ಹೊಲಬುದಪ್ಪಿದಿರಿ,
ಹುಲುಮನುಜರಿರಾ.
ಇನ್ನಾದರೂ ಅರಿದು ನೆನದು ಬದುಕಿ,
ನಮ್ಮ ಬಸವಪ್ರಿಯ
ಕೂಡಲ[ಚೆನ್ನ]ಸಂಗಮದೇವನ
ಶ್ರೀಪಾದಪದ್ಮವ. / 18

| | |
|---|---|
| ಕಾರಣ ಕಾಣಿರೆ.<br>ಇಂತಪ್ಪ ಬಸವಣ್ಣ<br>ಬಯಲಬ್ರಹ್ಮವನೆ ಮೆಯಿದು,. | |

**“ಗೋಮಯ ವೆಂಬ ಪರಶಕ್ತಿ”**

ಎನ್ನುವ ಪದಪ್ರಯೋಗ ವಿವರವಾದ ಅರ್ಥವಾಗಬೇಕಾದರೆ “ಪರಶಕ್ತಿ” ವಿವರ ತಿಳಿಯೋಣ.




12 ನೇಯ ವಚನಕಾರರಾದ ಚನ್ನಬಸವಣ್ಣನವರು ಮತ್ತು ಸಂಗಮೇಶ್ವರ ಅಪ್ಪಣ್ಣ ಅವರು ತಮ್ಮ ವಚನದಲ್ಲಿ ವಿಶ್ವ ವಿಕಾಸದ ವಿವರಣೆ ಕೊಡುವಾಗ "ಹೆಂಡಿ" ಅಥವಾ “ಗೋಮಯ” ಎನ್ನುವ ಪದಪ್ರಯೋಗ ಮಾಡಿದ್ದಾರೆ.
ಈಗ ಆ ಪದ ಬಳಸಿರುವ ಔಚಿತ್ಯ ಮತ್ತು ಅದಕ್ಕೇನಾದರೂ ವೈಜ್ಞಾನಿಕ ಅರ್ಥವಿದೆಯೇ? ಎನ್ನುವ ಪ್ರಶ್ನೆಗೆ ಉತ್ತರ ಕಂಡುಹಿಡಿಯುವ ಪ್ರಯತ್ನ ಇಲ್ಲಿದೆ.
ನಾನು ಹಳ್ಳಿಯಿಂದ ಬಂದವನು ಹೀಗಾಗಿ ಸಣ್ಣವನಿದ್ದಾಗ ಮನೆಯನ್ನು ಹೆಂಡಿಯಿಂದ ಸಾರಿಸುವದನ್ನು ನೋಡಿದ್ದೇನೆ. ಪಟ್ಟಣದಲ್ಲಿ ಬೆಳೆದವರು ಹೆಂಡಿಯನ್ನು ನೋಡಿರಲಿಕ್ಕೂ ಇಲ್ಲ, ಇನ್ನು ಸಾರಿಸುವದು ಗೊತ್ತಿರಲಿಕ್ಕಿಲ್ಲ, ಅವರಿಗಾಗಿ ಈ ವಿವರಣೆ.
ಗೋಮಯವೆಂದು ಕರೆಯಲ್ಪಡುವ ಹಸುವಿನ ಸೆಗಣಿಯನ್ನು ಹಳ್ಳಿಗಳ ಮನೆಗಳಲ್ಲಿ ಇಂದಿಗೂ ಕೂಡ ಹತ್ತು ಹಲವು ಉದ್ದೇಶಗಳಿಗಾಗಿ ಬಳಸುತ್ತಾರೆ.

1. ಸಸ್ಯಗಳ ಬೆಳವಣಿಗೆಗಾಗಿ ಹಸುವಿನ ಸೆಗಣಿಯಂತೂ ಅತ್ಯುತ್ತಮವಾದ ಗೊಬ್ಬರವಾಗಿದೆ.
2. ಗೋಮಯವನ್ನು ಮನೆಯ ನೆಲ ಮತ್ತು ಗೋಡೆಗೆ ಹಚ್ಚೋದು ಸಂಪ್ರದಾಯವಾಗಿದ್ದು, ಮನೆಯಲ್ಲಿ ಯಾವುದೇ ಹಬ್ಬ ಹರಿದಿನ ಇರಲಿ, ಸಡಗರದ ಕ್ಷಣವೇ ಇರಲಿ ಮನೆಯ ಅಂಗಳಕ್ಕೆ ದನದ ಸಗಣಿ ಹಚ್ಚುತ್ತಾರೆ. ಇತ್ತೀಚಿಗೆ ನಡೆಸಿದ ಅಧ್ಯಯನದಲ್ಲಿ ಸಗಣಿಯನ್ನು ಮನೆಯ ನೆಲಕ್ಕೆ

ಮತ್ತು ಗೋಡೆಗೆ ಹಚ್ಚುವುದರಿಂದ ಮನುಷ್ಯನಿಗೆ ಹಾನಿಯನ್ನುಂಟು ಮಾಡುವಂತಹ ಅನೇಕ ಬ್ಯಾಕ್ಟೀರಿಯಾಗಳನ್ನು ಇದು ಕೊಲ್ಲುತ್ತದೆ, ಗೋಮಯವು ವಾತಾವರಣದ ಗಾಳಿಯನ್ನು ಶುದ್ಧೀಕರಿಸುತ್ತದೆ ಹಾಗೂ ಪರಿಸರವನ್ನು ಮಾಲಿನ್ಯ ಮುಕ್ತ ಹಾಗೂ ಹಾನಿಕಾರಕ ವಿಕಿರಣಗಳಿಂದ ಮುಕ್ತವನ್ನಾಗಿ ಮಾಡುತ್ತದೆ ಎಂದು ಸಂಶೋಧಕರು ತಿಳಿಸಿದ್ದಾರೆ.

3. ಆಹಾರವನ್ನು ಬೇಯಿಸಲು ಬಳಸುವ ಮಣ್ಣಿನ ಕುಲುಮೆಗಳಲ್ಲಿ ಭರಣಿಯನ್ನೇ ಇಂಧನವಾಗಿ ಬಳಸುತ್ತಾರೆ.
4. ವಿವಿಧ ಪೂಜಾವಿಧಿಗಳಲ್ಲಿ ಗೋಮಯವನ್ನು ಬಳಸಲಾಗುತ್ತದೆ.




ಕೆಲ ಗ್ರಾಮಗಳಲ್ಲಿ ಇಂದಿಗೂ ಸಹ ಹಬ್ಬ ಹರಿದಿನಗಳಲ್ಲಿ ಮನೆಯನ್ನು ಕ್ಲೀನ್ ಮಾಡಲು ಸಗಣಿಯನ್ನು ನೀರಿಗೆ ಮಿಕ್ಸ್ ಮಾಡಿ ನೆಲಕ್ಕೆ ಹಚ್ಚುವುದನ್ನು ನಾವು ಇಂದಿಗೂ ಕಾಣಬಹುದು. ಸಾರಿಸುತ್ತ ಹೋದ ಹಾಗೆ ಹೆಂಡಿಯ ಬಹುಭಾಗ ನೆಲಕ್ಕೆ ಅಂಟುತ್ತದೆ ಮತ್ತು ನಾರಿನಂತಹ ಪದಾರ್ಥಗಳಿರುವ ಭಾಗ ಉಳಿಯುತ್ತದೆ. ಅಂದರೆ ಹೆಂಡಿಯಲ್ಲಿ ಎರಡು ಭಾಗಗಳಿದ್ದು

(1) ನೆಲಕ್ಕೆ ಹತ್ತುವ ಅತೀ ಸಣ್ಣ ಸಣ್ಣ ಕಣಗಳಿರುವ ದ್ರವ್ಯ

(2) ನಾರು, ದಾರ ಅಥವಾ ಕಸ ಕಡ್ಡಿ ಇರುವ ಅಲ್ಪ ಭಾಗ.

ಚನ್ನಬಸವಣ್ಣನವರು ಈ ಎರಡು ವಿಧದ ದ್ರವ್ಯಗಳು ವಿಶ್ವದ ಪ್ರಾರಂಭದಲ್ಲಿ ಉದಯವಾದವು ಎನ್ನುವ ವಿವರಣೆ ನೀಡಲು "ಹೆಂಡಿ" ಪದ ಬಳಕೆ ಮಾಡಿದ್ದಾರೆ. ಇಲ್ಲಿ ಅದು ಉರಿಯುವ ರೀತಿ ಮತ್ತು ಬೂದಿ ಆಗುವ ರೀತಿಯೂ ಅವರ ಮನದಲ್ಲಿದೆ.

ವಿಜ್ಞಾನಿಗಳು ಇತ್ತೀಚೆಗೆ ಪ್ರಸ್ತುತಪಡಿಸಿದ

**(1) Super strings ಮತ್ತು (2) cosmic strings**

ಎಂಬ ಎರಡು ತತ್ವಗಳು "ಹೆಂಡಿ" ಎನ್ನುವ ಪದ ಉಪಯೋಗಿಸಿರುವ ಔಚಿತ್ಯವನ್ನು ವಿವರಿಸುತ್ತವೆ.

**(1) Super strings**

ಅಣ್ಣಾ ಬಸವಣ್ಣನವರು ತಮ್ಮ ವಚನದಲ್ಲಿ ಈ ವಿಶ್ವವೆಲ್ಲ "ನಾದ ಬಿಂದು ಕಳಾತೀತ" ಗುಣಧರ್ಮವುಳ್ಳ ದ್ರವ್ಯ ದಿಂದ ರಚಿತವಾಗಿದೆ ಎನ್ನುವದನ್ನು ತಮ್ಮ ವಚನದಲ್ಲಿ ವಿವರಿಸಿದ್ದರು.




ಕಳೆದ 50 ವರ್ಷಗ ಳಿಂದ ತಮ್ಮ ಸಂಶೋಧನೆಗಳ ಆಧರದಲ್ಲಿ ವಿಜ್ಞಾನಿಗಳು **"Strings"** ಎನ್ನುವ "ನಾದ ಬಿಂದು ಕಲಾತೀತ" ಗುಣಧರ್ಮವುಳ್ಳ ದ್ರವ್ಯ ವಿಶ್ವದ ರಚನೆಗೆ ಕಾರಣ ಎನ್ನುವದನ್ನು ಪ್ರಸ್ತುತಪಡಿಸಿದ್ದಾರೆ.

**ವಿಜ್ಞಾನಿಗಳು ಇಂದು ಯಾವಾಗ "Strings" ರಚನೆಯಾದವು ಎನ್ನುವ ಪ್ರಶ್ನೆಗೆ ಉತ್ತರ ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದಾರೆ.**

12 ನೇಯ ಶತಮಾನದಲ್ಲಿಯೇ ಶರಣರು ಈ ಪ್ರಶ್ನೆಗೆ ಉತ್ತರವನ್ನು ತಮ್ಮ ವಚನಗಳಲ್ಲಿ ನೀಡಿದ್ದರು. ಆ ಒಂದು ಅಪೂರ್ವ ಸಂಗತಿ ಯಾರ ಗಮನಕ್ಕೂ ಬರಲಿಲ್ಲ.

ನಾನಿಲ್ಲಿ 16 ನೇಯ ಶತಮಾನದಲ್ಲಿ ತೋಂಟದ ಶಿದ್ದ ಲಿಂಗ ಶಿವಯೋಗಿಗಳ ಒಂದು ವಚನವನ್ನು ಇಲ್ಲಿ ಉದಾಹರಿಸಿರುವೆ.

**ತೋಂಟದ ಸಿದ್ದಲಿಂಗ ಶಿವಯೋಗಿಗಳ ವಚನ ಭಾಗ**

ನಾಮರೂಪು ಕ್ರೀಗಳೇನುಯೇನೂ ಇಲ್ಲದ ನಿತ್ಯನಿರಂಜನ ಪರವಸ್ತು ತಾನೆ ನಿರಂಜನಪ್ರಣವ ನೋಡಾ. [ಆ] ನಿರಂಜನ ಪರವಸ್ತುವಿನಲ್ಲಿ ಪರಮ ಚಿತ್ಕಲೆ ಉದಯವಾಗಿ, ಆ ಚಿದ್ರೂಪ ಕಲೆಯ ಶುದ್ಧಪ್ರಣವವೆನಿಸಿತ್ತು ನೋಡಾ.

ಆ ಶುದ್ಧ ಪ್ರಣವದಲ್ಲಿ ಚಿತ್ತು; ಆ ಚಿತ್ತೇ ಸಚ್ಚಿದಾನಂದಸ್ವರೂಪವನುಳ್ಳುದಾಗಿ, ಚಿತ್‌ಪ್ರಣವವೆನಿಸಿತ್ತು ನೋಡಾ.

ಆ ಚಿತ್ ಪ್ರಣವಸ್ವರೂಪವಪ್ಪ ಪರತತ್ವದಲ್ಲಿ ಪರಶಕ್ತಿ ಉದಯವಾಯಿತ್ತು.

ಆ ಪರಶಕ್ತಿಯಿಂದ ನಾದ ಬಿಂದು ಕಳೆಗಳಾದವಯ್ಯ.

ಆಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ;

ಇಂತೀ ಮೂರಕ್ಕೆ ಪರಶಕ್ತಿಯೇ ತಾಯಿ.

ಇಂತೀ ನಾಲ್ಕು ಒಂದಾದಲ್ಲಿ ಪ್ರಣವವಾಯಿತ್ತಯ್ಯ. ------

ವಿಶ್ವ ರಚನೆಯ ಮೊದಲ ಹಂತದಲ್ಲಿ (0 to 10^-43 second) ನಡೆದ ಘಟನಾವಳಿಗಳನ್ನು ವಿವರಿಸುತ್ತ ಚಿಚ್ಛಕ್ತಿ ಯಿಂದ ಪರಶಕ್ತಿ ಉದಯವಾದಳು, ಪರಶಕ್ತಿ ಯಿಂದ ನಾದ ಬಿಂದು ಕಳೆಗಳಾದವು
ಎನ್ನುವದನ್ನು ದೃಡಪಡಿಸುತ್ತಾರೆ. ಇದುವೆ ಚನ್ನಬಸವಣ್ಣನವರು ಹೇಳಿದ ಇಪ್ಪತ್ತನೇಯ ಯುಗ.

1. **ಘನಲಿಂಗದಿಂದ ಚಿಚ್ಛಕ್ತಿ ಜನಿಸಿದಳು:**
2. **ಚಿಚ್ಛಶಕ್ತಿ ಯಿಂದ ಪರಶಕ್ತಿ ಉದಯವಾಯಿತು:**

ಪರಶಕ್ತಿಯ ಅಸ್ತಿತ್ವದ ಬಗ್ಗೆ ಇದುವರೆಗೆ ವಿಜ್ಞಾನಿಗಳು ಅಧ್ಯಯನ ನಡೆಸಿಲ್ಲ. "ಪರಶಕ್ತಿ" ಎನ್ನುವ ಶರಣರ ತತ್ವ ಈಗ ವಿಜ್ಞಾನಿಗಳಿಗೆ ಮಾರ್ಗದರ್ಶನ ಮಾಡಿ ಅವರ ಅನೇಕ ಸಂದೇಹಗಳನ್ನು ನಿವಾರಣೆಮಾಡಬಹುದು.
ಪರಶಕ್ತಿ ಪದವನ್ನು 16 ವಚನಕಾರರು 32 ವಚನಗಳಲ್ಲಿ 43 ಕಡೆಗಳಲ್ಲಿ ಉಪಯೋಗಿಸಿದ್ದಾರೆ.
ಮೊದಲು ಶರಣರು ವ್ಯಕ್ತಪಡಿಸಿದ ಪರಶಕ್ತಿಯ ವಿವರಗಳನ್ನು ಅರಿತು ಆಮೇಲೆ ವಿಜ್ಞಾನಿಗಳಿಗೆ ಈ ವಿಷಯವಾಗಿ ಅಧ್ಯಯನದ ಅವಶ್ಯಕತೆ ಯಾಕೆ ಇದೆ ಎನ್ನುವ ಬಗ್ಗೆ ವಿವರಿಸುವೆ. ಪೂರ್ಣ ವಚನ ಕೊಟ್ಟಿಲ್ಲ ಕ್ಷಮಿಸಿ

1. **ಆ ಪರಬ್ರಹ್ಮವೆ ಓಂಕಾರವಪ್ಪ ಪ್ರಣವಸ್ವರೂಪು, ಪರಮಾತ್ಮನೆನಿಸಿ ಪರಶಿವನಾಮದಿಂ ಪರಶಕ್ತಿಸಂಯುಕ್ತವಾಗಿ, ಆಕಾರ ಉಕಾರ ಮಕಾರವೆಂಬ ಬೀಜಾಕ್ಷರಂಗಳಿಂ ನಾದಬಿಂದುಕಳೆಯಾಗಿ,**-- ಆದಯ್ಯ
2. **ಗೋಳಕಾಕಾರ ಗೋರಕ್ಷನೆಂಬ ಪಟ್ಟಣದಲ್ಲಿ, ಗೋಮಯವೆಂಬ ಪರಶಕ್ತಿ ಅಪರ ಪ್ರಸೂತಕವಾಗಲಾಗಿ, ಅದರಂಡದಲ್ಲಿ ಆಡು ಹುಟ್ಟಿತ್ತು.** -- ಸುಂಕದ ಬಂಕಣ್ಣ (ಕಾಲ-೧೧೬೦. ಸುಂಕ (ತೆರಿಗೆ) ಸಂಗ್ರಹಿಸುವುದು ಕಾಯಕ. 'ಬಂಕೇಶ್ವರಲಿಂಗ' ಅಂಕಿತದಲ್ಲಿ ೧೦೮ ವಚನಗಳು ದೊರೆತಿವೆ.
3. (i) **ಪರಶಿವನ ಪರಶಕ್ತಿಯಿಂದ ಸುಜ್ಞಾನಶಕ್ತಿ ಉದಯವಾದಳು. ಆ ಸುಜ್ಞಾನಶಕ್ತಿಯು ಗರ್ಭದಲ್ಲಿ ಶಿವಶರಣನುದಯವಾದ**
   (ii) **ಆ ಘನಲಿಂಗದಿಂದ ಚಿಚ್ಛಕ್ತಿ ಜನಿಸಿದಳು. ಚಿಚ್ಛಕ್ತಿಯಿಂದ ಪರಶಕ್ತಿ ಪುಟ್ಟಿದಳು. ಪರಶಕ್ತಿಯಿಂದ ನಾದ ಬಿಂದು ಕಳೆಗಳಾದವು. ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ. ಇಂತೀ ತ್ರಿವಿಧಕ್ಕೆ ಪರಶಕ್ತಿಯೇ ತಾಯಿ. ಇಂತೀ ನಾಲ್ಕು ಒಂದಾದಲ್ಲಿ ಓಂಕಾರವಾಯಿತ್ತಯ್ಯ.**

(iii) **ಪರಶಕ್ತಿ ಶಾಂತಿಯೆನಲು ಪರಶಿವಶಕ್ತಿಯ ನಾಮವೀಗ. ನಾದ ಬಿಂದು ಕಳೆ ಕಳಾನ್ವಿತ --**

**(iv) ಆ ಚಿತ್ ಪ್ರಣವಸ್ವರೂಪವಪ್ಪ ಪರತತ್ವದಲ್ಲಿ ಪರಶಕ್ತಿ ಉದಯವಾಯಿತ್ತು.**

ಆ ಪರಶಕ್ತಿಯಿಂದ ನಾದ ಬಿಂದು ಕಳೆಗಳಾದವಯ್ಯ

---- ತೋಂಟದ ಸಿದ್ಧಲಿಂಗ ಶಿವಯೋಗಿಗಳು

(16 ನೇಯ ಶತಮಾನ. 'ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ' ಎಂಬ ಅಂಕಿತದಲ್ಲಿ

ಸಿದ್ಧಲಿಂಗರು 701 ವಚನಗಳನ್ನು ರಚಿಸಿದ್ದಾರೆ.)

4 **ಶಬ್ದವೆಂಬ ಪರಬ್ರಹ್ಮದ ಚಿಂತಾಶಕ್ತಿಯ ಸಹಸ್ರಾಂಶದಲ್ಲಿ ಚಿಚ್ಛಕ್ತಿ ಹುಟ್ಟಿದಳು. ಆ ಚಿತ್‌ಶಕ್ತಿಯ ಸಹಸ್ರಾಂಶದಲ್ಲಿ ಪರಾಶಕ್ತಿ ಹುಟ್ಟಿದಳು. ಆ ಪರಾಶಕ್ತಿಯ ಸಹಸ್ರಾಂಶದಲ್ಲಿ ಆದಿಶಕ್ತಿ ಹುಟ್ಟಿದಳು.**

-- ಬಾಲಸಂಗಯ್ಯ ಅಪ್ರಮಾಣ ದೇವ

5. **ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿಯಾದಿಶಕ್ತಿ ಪರಶಕ್ತಿ ಚಿಚ್ಛಕ್ತಿಗಳೆಂಬಿವೆ ಶಕ್ತಿ. ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗಂಗಳೆಂಬಿವೆ ಲಿಂಗ.**

---- ಇಮ್ಮಡಿ ಮುರಿಘಾ ಗುರುಸಿದ್ಧ / ಗುರುಸಿದ್ಧಸ್ವಾಮಿ

(ಕಾಲ=ಸು. ೧೭ನೇಯ ಶತಮಾನ. 'ಚಿದೈಶ್ವರ್ಯ ಚಿದಾಭರಣ' ಸಂಕಲನದಲ್ಲಿ ಇತರ ಶರಣರ ವಚನಗಳ ಜೊತೆಗೆ ಸ್ವತಃ ಗುರುಸಿದ್ಧದೇವ ತಾನೂ ಬರೆದ ೧೦೧ ವಚನಗಳನ್ನೂ ಅಳವಡಿಸಿದ್ದಾನೆ. 'ಸಂಗನಬಸವೇಶ್ವರ' ಎಂಬುದು ಇವುಗಳ ಅಂಕಿತ.)

6. (a) **ಪ್ರಥಮದಲ್ಲಿ ನಾಮ ರೂಪು ಕ್ರೀ ಏನೂ ಏನೂ ಇಲ್ಲದ ಮಹಾಘನ ಶೂನ್ಯಬ್ರಹ್ಮವು.**

**ಆ ಶೂನ್ಯಬ್ರಹ್ಮದಿಂದ ಶುದ್ಧ ಪ್ರಣವ. ಆ ಶುದ್ಧ ಪ್ರಣವಧಿಂದ ಚಿತ್ತು ಭಾವದಕ್ಷರ.**

**ಆ ಚಿತ್ತು ಭಾವದಕ್ಷರದಿಂದ ಪರಶಕ್ತಿ. ಆ ಪರಾಶಕ್ತಿಯಿಂದ ಅಕ್ಷರತ್ರಯಂಗಳು.**

**ಆ ಅಕ್ಷರತ್ರಯಂಗಳಿಂದ ಓಂಕಾರ.**

**(b) ಇನ್ನು ಪ್ರಾಣಲಿಂಗಿಯ ಷಡ್ವಿಧಶಕ್ತಿಯ ವಿವರ: ಆದಿಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿ ಪರಶಕ್ತಿ ಚಿತ್ಯಕ್ತಿ.**

-- ಗುಮ್ಮಳಾಪುರದ ಸಿದ್ಧಲಿಂಗ **(16 ನೇಯ ಶತಮಾನ)**




(1) strings: ಈ ವಿಷಯವಾಗಿ ಸಾಕಷ್ಟು ವಿವರ ಅರಿತಿದ್ದೇವೆ.

(2) Cosmic strings:

ವಿಶ್ವರಚನೆಯಲ್ಲಿ ಮಹತ್ವದ ಪಾತ್ರವಹಿಸುವ Cosmic strings ಅಧ್ಯಯನ ಪ್ರರಂಭವಾದದ್ದು ಈ ಶತಮಾನದಲ್ಲಿ.

Cosmic strings ಚನ್ನಬಸವಣ್ಣನವರ ವಚನದಲ್ಲಿ ಉಪಯೋಗಿಸಿರುವ “ಹೆಂಡಿ” ಯಲ್ಲಿ ಬರುವ ಕಸಕಡ್ಡಿಗಳ ಹಾಗಿರುವದು ವಿಷೇಶ.




ಕಳೆದೆರಡು ದಶಮಾನದಲ್ಲಿ ವಿಶ್ವರಚನೆಯಲ್ಲಿ ಮಹತ್ವದ ಪಾತ್ರವಹಿಸುವ **Cosmic strings** ಅಧ್ಯಯನ ಪ್ರಾರಂಭವಾಗಿ ಅನೇಕ ಪ್ರಭಂಧಗಳು ಪ್ರಕಟವಾಗಿವೆ.

"Dark Matter" plays a key role in the observed structure.










**Cosmic strings** are objects that may have formed in the early Universe, but scientists are still searching for evidence that they exist.
They were first introduced by theoretical physicist Tom W. B. Kibble in the late 70s as a possible result of some field theories, including the famous Higgs theory.
They are one-dimensional (line-like) objects, similar to vortex lines in liquid helium, that could be left over after the early Universe went through a phase transition.
Cosmic strings were a popular research topic in the 80s, since they could have triggered the formation of large-scale structures such as galaxies.
After the Big Bang, the unified super force would have separated out into the forces of nature we see today by going through a series of phase transitions, akin to liquid water freezing into ice.
This haphazard process could have created cosmic strings as cracks in space-time, like the cracks that you can see inside ice cubes.

The universe would have kept expanding, cosmic strings growing along with it. But every so often, strings would fold in on themselves or collide with other strings, causing loops to pinch off in bursts of energy. These string loops would keep wobbling over billions of years, gradually losing energy as they emitted gravitational waves.
“It’s very similar to when you excite the string of a violin,” Schmitz said
ಕೆಲವು ಉದಾಹರಣೆಗಳನ್ನು ಗಮನಿಸುವಾ.
ಉದಾಹರಣೆ 1:
ಒಂದು ಶುದ್ಧವಾದ ನೀರಿನಿಂದ ತಯಾರಿಸಿದ ಭರ್ಪದ ತುಂಡನ್ನು ಕೈಯಲ್ಲಿ ಹಿಡಿದು ಪರೀಕ್ಷಿಸಿ. ಅದು ಪಾರದರ್ಶಕವಾಗಿದ್ದರೂ ಅಲ್ಲಲ್ಲಿ ಕೆಲವು ಕಪ್ಪು ದಾರದಂತಹ ಬಿರುಕು ಇರುವದು ಕಾಣಿಸುತ್ತದೆ.





The ice cubes materialized inside the tray will not always be perfect and will contain defects in its structure because of the various molecular dispersion. These imperfections are the uneven surface and cracks of the ice cubes, which in concept applies to the cosmic strings.
A great example of force realignment can be observed in ice cubes in a tray. As the phase of matter transitions from liquid to solid, the water inside the trays starts to solidify producing a crystallized form. While the growth is taking effect, some water molecules will stay or spread out from a particular region. The change in place of molecules won't affect the transition, and the forming of water to ice will be successful at the right amount of temperature.
In relation to the ice cube's example, cosmic strings are flaws developed in space-time throughout the evolving universe. These flaws come in various

forms of dimensions. Among these variants are the one-dimensional fissure, which happens to be the most common cosmic string.

ಉದಾಹರಣೆ 2:

ಗೌರಿ ಹುಣ್ಣಿಮೆಯ ದಿನ ಸಮೀಪಿಸುತ್ತಿದ್ದಂತೆಯೇ ಸಹಜವಾಗಿ ಸಕ್ಕರೆ ಗೊಂಬೆಗಳು ನೆನಪಿಗೆ ಬರುತ್ತವೆ. ಈ ಗೊಂಬೆಗಳು ಇಲ್ಲದಿದ್ದರೆ ಹುಣ್ಣಿಮೆ ಆಚರಣೆಯೇ ಅಪೂರ್ಣವೇ.

ಬಣ್ಣ ಹಾಕದೇ ಸಕ್ಕರೆ ಶುದ್ಧ ಗೊಳಿಸಿ ತಯಾರಿಸಿದ ಸಕ್ಕರೆ ಗೊಂಬೆಯನ್ನು ಗಮನಿಸಿದರೆ ಅಲ್ಲಿಯು ಭರ್ಪದ ತುಂಡಿನಲ್ಲಿರುವಂತೆ ಕೊರಕಲು ಗೆರೆಗಳು ಕಾಣಸಿಗುತ್ತವೆ.





**ಸಕ್ಕರೆ ಗೊಂಬೆಗಳ ತಯಾರಿಕೆ ಒಂದು ಕಲೆ:**

ಶುದ್ಧ ಸಕ್ಕರೆಗೆ ತಕ್ಕಂತೆ ನೀರು, ನಿಂಬೆರಸ, ಹಾಲು, ಏಲಕ್ಕಿ ಹಾಕಿ ಒಲೆಯ ಮೇಲೆ ಹದ ಬರುವ ಹಾಗೆ ಕಾಯಿಸಲಾಗುತ್ತದೆ. ಆ ಬಳಿಕ ಹದವನ್ನು ಗೊಂಬೆ ತಯಾರಿಕೆಯ ಕಟ್ಟಿಗೆ ಅಚ್ಚುಗಳಿಗೆ ಹಾಕಿದಾಗ ಕೆಲವೇ ಸಮಯದಲ್ಲಿ ಬಗೆಬಗೆಯ ಗೊಂಬೆಗಳು ಸಿದ್ಧವಾಗುತ್ತವೆ. ಗೊಂಬೆಗಳ ತಯಾರಿಕೆ ಕಲೆ ತಕ್ಷಣಕ್ಕೆ ಸಿದ್ಧಿಸುವುದು ವಿರಳ. ಇದಕ್ಕೆ ಅಪಾರ ಅನುಭವದ ಅಗತ್ಯವಿದೆ.

ವಿಶ್ವ ರಚನೆ ಮತ್ತು ಸಕ್ಕರೆಯ ಗೊಂಬೆ ರಚನೆಯಲ್ಲಿ ಸಾಮ್ಯತೆ ಇದೆಯೇ?




**ಭಾಗ – 1:.ವಿಶ್ವದಲ್ಲಿ (ವಿಕಾಸ) ಬೊಂಬೆ ನಿರ್ಮಾಣ ಪ್ರಾರಂಭವಾದ ಕಾಲ:**

ಆದಿ ಅನಾದಿಯೆಂಬವು ನಾದಕ್ಕೆ ಬಾರದ ಮುನ್ನ, ಶೂನ್ಯ ನಿಃಶ್ಶೂನ್ಯ ಸುರಾಳವೆಂಬವು ಸುಳುಹುದೋರದ ಮುನ್ನ, ಬೆಳಗು ಕತ್ತಲೆಯಿಲ್ಲದ ಮುನ್ನ, ಅಳಿವು ಉಳಿವು ಸುಳುವು ಸೂತ್ರ ಜಂತ್ರ ಜಡ ಅಜಡವಿಲ್ಲದ ಮುನ್ನ, ಕಡೆ ನಡು ಮೊದಲಿಲ್ಲದ ಅಡಿಯಲಾಧಾರ ಹಿಡಿವರೆ ರೂಹಿಲ್ಲದ ಮುನ್ನ, ಒಡೆಯನಿಲ್ಲ ಬಂಟನಿಲ್ಲ ನಡೆಯಿಲ್ಲ ನುಡಿಯಿಲ್ಲ ಬೆಡಗಿಲ್ಲ ಒಡಲಿಲ್ಲದ ಮುನ್ನ, ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯರು ತಲೆದೋರದ ಮುನ್ನ, ದೇವನಿಲ್ಲ ಭಕ್ತನಿಲ್ಲದ ಮುನ್ನ, ನೀನು ನಾನುಯಿಲ್ಲದ ಮುನ್ನ, ಆಕಾರ ನಿರಾಕಾರವೇನೂಯಿಲ್ಲದ ಮುನ್ನ, ತಾನು ತಾನೆಂಬ ತಲ್ಲಣವಿಲ್ಲದಂದು, ಆ ಬಟ್ಟಬಯಲ ಬ್ರಹ್ಮವೆ ಘಟ್ಟಿಯಾದ ಘನವೆಂತೆಂದಡೆ: ನಿಮ್ಮನುವ ನೀವರಿದ ಘನಮಹಿಮರು ತಿಳಿದು ನೋಡಿರಣ್ಣ.--- ಸಂಗಮೇಶ್ವರದ ಅಪ್ಪಣ್ಣ



ಒಟ್ಟಾರೆಯಾಗಿ ಶರಣರ ಅಭಿಪ್ರಾಯ ಆ ಬಟ್ಟಬಯಲ ಬ್ರಹ್ಮವೆ ಘಟ್ಟಿಯಾದ ಬಿಂದುವಾಯಿತು. ಮತ್ತು ಆ ಬಿಂದುವಿನಿಂದ ವಿಶ್ವ ರಚನೆಯಾಯಿತು.
ವಿಜ್ಞಾನಿಗಳ ಅಭಿಪ್ರಾಯವೂ ಇದೇ ಆಗಿದೆ







ಇಬ್ಬರ ಅಭಿಪ್ರಾಯದಲ್ಲಿ ಬಯಲು ಎಂದರೆ ಖಾಲಿ ಜಾಗವಲ್ಲಿ ಅದು ಶಕ್ತಿಯ ಕಣಜ.
**"ಶರಣರು "ಶೂನ್ಯ" ಖಾಲಿಯಾದ, ಏನೂ ಇಲ್ಲದ ಸೂಚಕವಲ್ಲ. ಆದರೆ ಅದು ಎಲ್ಲವನ್ನು ಒಳಗೊಂಡಿದೆ"**
ಎಂದು ಪ್ರತಿಪಾದಿಸಿದ್ದರು.
ಆದರೆ 1920 ರ ವರೆಗೆ "Empty space" "ಶೂನ್ಯ" ವೆಂದರೆ ಏನೇನೂ ಇಲ್ಲದ ಖಾಲಿ ಸ್ಥಳ ಎಂದೆ ಪ್ರತಿಪಾದಿಸುತ್ತಿದ್ದರು.
"Quantum mechanics" ಎನ್ನುವ ಹೊಸ ತತ್ವದ ಅವಿಷ್ಕಾರವಾದ ಮೇಲೆ ವಿಜ್ಞಾನಿಗಳು "ಶೂನ್ಯ" ವೆಂದರೆ ಅದು "ಶೂನ್ಯ" Vcume filled with countless

“virtual” particles rapidly bursting into and out of existence like an invisible fireworks display.” ಎನ್ನುವದನ್ನು ದೃಢಪಡಿಸಿದರು.
1948 ರಲ್ಲಿ ಡಚ ವಿಜ್ಞಾನಿ Hendrik Casimir ಪ್ರಯೋಗದ ಮೂಲಕ
**“virtual particles can move objects in the real world”**
ಎನ್ನುವದನ್ನು ಸಾಧಿಸಿ ಅಲ್ಲಮಪ್ರಭು ಅವರ ವಚನಭಾಗ “ಬಯಲು ಭ್ರಮೆ ನೋಡಾ ಒಮ್ಮೆ ಕಂಡೆನೊಮ್ಮೆ ಕಾಣೆ” ವಾಸ್ತವ ಎಂದು ತೋರಿಸಿದರು.











**ಭಾಗ – 2: ಸಕ್ಕರೆ ಬೊಂಬೆ ತಯಾರಿಕೆ:**

ಸಕ್ಕರೆ ಬೊಂಬೆ ತಯಾರಿಸಲು ಪ್ರಾರಂಭ ಮಾಡುವ ಮೊದಲು ಸಕ್ಕರೆ ಚೀಲ ತರುತ್ತಾರೆ. ಅದನ್ನು ಪಾಕ ಮಾಡುತ್ತಾರೆ. **ಸಕ್ಕರೆ ಗೊಂಬೆಗಳ ತಯಾರಿಕೆ ಒಂದು ಕಲೆ:**

ಶುದ್ಧ ಸಕ್ಕರೆಗೆ ತಕ್ಕಂತೆ ನೀರು, ನಿಂಬೆರಸ, ಹಾಲು, ಏಲಕ್ಕಿ ಹಾಕಿ ಒಲೆಯ ಮೇಲೆ ಹದ ಬರುವ ಹಾಗೆ ಕಾಯಿಸಲಾಗುತ್ತದೆ. ಆ ಬಳಿಕ ಪಾಕವನ್ನು ಗೊಂಬೆ ತಯಾರಿಕೆಯ ಕಟ್ಟಿಗೆ ಅಚ್ಚುಗಳಿಗೆ ಹಾಕಿದಾಗ ಕೆಲವೇ ಸಮಯದಲ್ಲಿ ಪಾಕ ತಂಪುಗೊಂಡು ಬಗೆಬಗೆಯ ಗೊಂಬೆಗಳು ಸಿದ್ಧವಾಗುತ್ತವೆ. ಗೊಂಬೆಗಳ ತಯಾರಿಕೆ ಕಲೆ ತಕ್ಷಣಕ್ಕೆ ಸಿದ್ಧಿಸುವುದು ವಿರಳ. ಇದಕ್ಕೆ ಅಪಾರ ಅನುಭವದ ಅಗತ್ಯವಿದೆ. ವಿಶ್ವ ರಚನೆ ಮತ್ತು ಸಕ್ಕರೆಯ ಗೊಂಬೆ ರಚನೆಯಲ್ಲಿ ಸಾಮ್ಯತೆ ಇದೆಯೇ?




**ವಿಶ್ವ ವಿಕಾಸ:**

ವಿಶ್ವದಲ್ಲಿ (ವಿಕಾಸ) ನಿರ್ಮಾಣ ಪ್ರಾರಂಭವಾಗಲು ಕಾರಣವಾದದ್ದು ಒಂದು ಬಿಂದುವಿನಿಂದ.

ಆ ಬಿಂದುವಿಗೆ ಶರಣರು ಪರಶಿವ (ಘನ ಲಿಂಗ) ಎಂದು ಕರೆದರೆ ವಿಜ್ಞಾನಿಗಳು **Singularity** ಎಂದು ಕರೆದಿದ್ದಾರೆ.

ಅಲ್ಲಮಪ್ರಭುದೇವರು ವಚನ

ಅಯ್ಯ ತತ್ತ್ವ ವಿತತ್ತ್ವಗಳಿಲ್ಲದಂದು,
ಪ್ರಕೃತಿ ಪುರುಷರಿಲ್ಲದಂದು,
ಜೀವ_ಪರಮರೆಂಬ ಭಾವ ತಲೆದೋರದಂದು,
ಏನೂ ಏನೂ ಇಲ್ಲದಂದು
ಬಯಲು ಬಲಿದು ಒಂದು ಬಿಂದುವಾಯಿತ್ತು
ನೋಡಾ.
--- ಬಸವಣ್ಣನ ಕೃಪೆಯಿಂದಲರಿದು ನಮೋ ನಮೋ ಎನುತಿರ್ದೆನು.

12 ನೇಯ ಶತಮಾನದಲ್ಲಿ ಅಲ್ಲಮಪ್ರಭು ಅವರು ತಮ್ಮ ವಚನದಲ್ಲಿ

**"ಬಯಲು ಬಲಿದು ಬಿಂದುವಾಯಿತ್ತು".**

ಎನ್ನುವ ವಚನಭಾಗದಲ್ಲಿ ಬಿಂದು ನಿರ್ಮಾಣವಾದ ಬಗೆಯನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ.

16 ನೇಯ ಶತಮಾನದಲ್ಲಿ ತೋಂಟದ ಸಿದ್ದಲಿಂಗ ಶಿವಯೊಗಿಗಳು ಆ ಬಿಂದುವಿಗೆ ಘನ ಲಿಂಗ ಎಂದು ಕರೆದು

“ಬಚ್ಚ ಬರಿಯೆ ಬಯಲೆ ಸಹಜ ದಿಂದ ಗಟ್ಟಿಗೊಂಡು ಘನಲಿಂಗವಾಯಿತು” ಎಂದು ಅಲ್ಲಮಪ್ರಭು ಅವರು ಹೇಳಿದ ವಿಚಾರವನ್ನು ದೃಡಪಡಿಸಿದ್ದಾರೆ. ಅಣ್ಣನವರು ಈ ಬಿಂದುವಿಗೆ “ಪರಶಿವ” ಎಂದು ಕರೆದು ಅದು ಉದಯವಾದ ಬಗೆಯನ್ನು ವಿವರಿಸಿದ್ದಾರೆ.




ಈ ಬಿಂದು “ಪರಶಿವ”, “ಘನಲಿಂಗ” ದಲ್ಲಿದ್ದ ದ್ರವ್ಯದ ವಿವರಗಳನ್ನು ಬಾಲಸಂಗಯ್ಯನವರ ವಚನದಲ್ಲಿ ಕಾಣಬಹುದಾಗಿದೆ.




16 ನೇಯ ಶತಮಾನದಲ್ಲಿ ತೋಂಟದ ಸಿದ್ದಲಿಂಗ ಶಿವಯೊಗಿಗಳು ಆ ಬಿಂದುವಿಗೆ ಘನ ಲಿಂಗ ಎಂದು ಕರೆದು

**“ಬಚ್ಚ ಬರಿಯೆ ಬಯಲೆ ಸಹಜ ದಿಂದ ಗಟ್ಟಿ ಗೊಂಡು ಘನಲಿಂಗವಾಯಿತು”**

ಎಂದು ಅಲ್ಲಮಪ್ರಭು ಅವರು ಹೇಳಿದ ವಿಚಾರವನ್ನು ದೃಡ ಪಡಿಸಿದ್ದಾರೆ. **Steve Weinberg** ಅವರ ಅಭಿಪ್ರಾಯವೂ ಇದೇ ಆಗಿದೆ.




| | ವಿಶ್ವದ ತಾಪಮಾನ | ಸಮಯ |
|---|---|---|
| 1ST FRAME | 100,000 million degrees Kelvin (10^11 ° K). | ಪ್ರಾರಂಭ |
| 2ND FRAME. | 30,000 million degrees Kelvin (3 X 10^10 ° K). | 0.11 seconds |
| 3RD FRAME | 10,000 million degrees Kelvin (10^10 ° K). | 1.09 seconds |
| 4TH FRAME | 3000 million degrees Kelvin (3 X 10^9 ° K). | 13.82 seconds |
| 5TH FRAME | 1000 million degrees Kelvin (109 ° K), | 3 minutes |









ಈ ಎಲ್ಲ ವಿವರಗಳನ್ನು ಒಗ್ಗೂಡಿಸಿ ಶರಣರು **"ಮೊದಲು ಅಸ್ತಿತ್ವದಲ್ಲಿದ್ದ ವಿಶ್ವದಲ್ಲಿದ ದ್ರವ್ಯವೆಲ್ಲ ಬಯಲು ಸಹಜವಾಗಿ ಒಂದುಗೂಡಿ ಘನ ಲಿಂಗ"** ವಾಯಿತು ಮತ್ತು ಅದು ಇನ್ನಷ್ಟು ಸಣ್ಣದಾಗತೊಡಗಿತು. ಅಖಂಡ ಪರಿಪೂರ್ಣ ಅಪ್ರಮೇಯ ಅಗೋಚರ ಅಪ್ರಮಾಣ ಅನಂತ ತೇಜೊಮಯವಾಗಿರುವ ಘನಲಿಂಗ ಮತ್ತಷ್ಟು ಚಿಕ್ಕದಾದಾಗ ಅಪಾರವಾದ ಶಕ್ತಿ ಬಿದುಗಡೆಯಾಗಿ ಅಲ್ಲಿಯ ತಾಪಮಾನ ಊಹೆಗೆ ಮೀರಿ ಹೆಚ್ಚಾಯಿತು.

**ಈಗ ಆ ಘನ ಲಿಂಗ ದಿಂದ ಚಿಚ್ಛಕ್ತಿ ಜನನನಾಯಿತು** ಎನ್ನುವದನ್ನು ತೊಂಟದ ಶಿದ್ದಲಿಂಗ ಶಿವಯೋಗಿಗಳು ವಿವರಿಸಿದ್ದಾರೆ. ಆಗ ಅಲ್ಲಿದ್ದ ತಾಪಮಾನ **10^32 kelvin** ಎನ್ನುವದು ವಿಜ್ಞಾನಿಗಳು ಊಹಿಸಿದ್ದಾರೆ. ಈ ತಾಪಮಾನವನ್ನು ಊಹಿಸುವದು ಅಸಾಧ್ಯ.




ಮಾನವ ನಿರ್ಮಿತ ಅತೀ ಹೆಚ್ಚಿನ ತಾಪಮಾನ **5.5^12 kelvin** ಮಾತ್ರ. ಈಗ ವಿಜ್ಞಾನಿಗಳು ಈ ರೀತಿಯಾಗಿ **10^32 kelvin** ತಾಪಮಾನ ಬಯಲಿನಿಂದ ನಿರ್ಮಾಣವಾಗುವದು ಸಾಧ್ಯ ಎನ್ನುವದನ್ನು ಪ್ರಯೋಗಳ ಮೂಲಕ ಸಾದರಪಡಿಸುವ ಹಂತದಲ್ಲಿದ್ದಾರೆ.




**ನಾಭಿಕಮಲ ಪದಪ್ರಯೋಗದ ಔಚಿತ್ಯ.**




**ಚನ್ನಬಸವಣ್ಣನವರು ವಚನದಲ್ಲಿ**

**" ಅಂದು ನಿಮ್ಮ ನಾಭಿಕಮಲದಲ್ಲಿ ಜಲಪ್ರಳಯ ಪುಟ್ಟಿತ್ತು "**

ಎನ್ನುವ ವಚನಭಾಗದಲ್ಲಿ "ನಾಭಿಕಮಲ" ಪದಪ್ರಯೋಗ ಮಾಡಿದ್ದಾರೆ. ಮೇಲಿನ ಚಿತ್ರವು "ನಾಭಿಕಮಲ" ಪದದ ಅರ್ಥ ಕೊಡುತ್ತದೆ. ವಿಜ್ಞಾನದಲ್ಲಿ "Center of Gravity" ಬಗ್ಗೆ ಸಾಕಷ್ಟು ವಿವರ ಅರಿತಿದ್ದೇವೆ. ಅದರಲ್ಲಿ ಮುಖ್ಯವಾಗಿ ಮಾನವ ದೇಹದ ಗುರುತ್ವ ಕೇಂದ್ರ ಆ ದೇಹದ "ನಾಭಿ" ಅಥವಾ "ಹೊಕ್ಕಳ" ಎನ್ನುವದು ಚಿರಪರಿಚಿತವಾದ ತತ್ವ. ಹುಟ್ಟುವಾಗ ಇಲ್ಲಿಂದ ಹೊರಡುವ ಕರಳುಬಳ್ಳಿ ದೆಹಕ್ಕೆ ತಾಯಿಯ ಜೊತೆ ಸಂಪರ್ಕ ಸಾಧನ.ಇದು ಪ್ರಾರಂಭದ ಸಂಕೇತ. ಇನ್ನು ಕಮಲದ ಹೂವಿನ ಚಿತ್ರ ಗಮನಿಸಿದರೆ ಆ ಹೂವಿನ ಮಧ್ಯದಲ್ಲಿ ಹೊರಟ ದೇಟನ್ನು ಗಮನಿಸಬಹುದು.

ಚನ್ನಬಸವಣ್ಣನವರು ಈಗಿರುವ ವಿಶ್ವದ ಗುರುತ್ವಕೇಂದ್ರುದಲ್ಲಿ ವಿಶ್ವ ರಚನೆಯ ಮೊದಲ ಹಂತದ "ಜಲಪ್ರಳಯ" ಪುರಂಭವಾಯಿತು ಎನ್ನುವ ವಿಚಾರವನ್ನು ""ಅಂದು ನಿಮ್ಮ ನಾಭಿಕಮಲದಲ್ಲಿ ಜಲಪ್ರಳಯ ಪುಟ್ಟಿತ್ತು " ಎನ್ನುವ ವಚನಭಾಗದಲ್ಲಿ ವಿವರಿಸಿದ್ದಾರೆ.

Part 2

ಪ್ರಥಮ ಯುಗದಲ್ಲಿ ಪೃಥ್ವಿ, ಅಪ್ಪು, ತೇಜ, ವಾಯು,
ಆಕಾಶಂಗಳಿಲ್ಲದಂದು
ಆರೂ ಆರೂ ಇಲ್ಲದಂದು, ನಾಮವಿಲ್ಲದಂದು,
ಅಂದು ನಿಃಶೂನ್ಯವಾಗಿದ್ದ ಕಾಣ ನಮ್ಮ ಬಸವಣ್ಣ.
ಅಂದು ನಿಮ್ಮ ನಾಬಿಕಮಲದಲ್ಲಿ ಜಲಪ್ರಳಯ ಪುಟ್ಟಿತ್ತು.
ಆ ಜಲಪ್ರಳಯದಲ್ಲಿ ಒಂದುಗುಳ್ಳೆ ಲಿಂಗಾಕಾರವಾಗಿ
ಪುಟ್ಟಿತ್ತು.
ಆ ಲಿಂಗವ ತಕ್ಕೊಂಡು ಸ್ಥಾಪ್ಯವಿಟ್ಟಾತ ನಮ್ಮ ಬಸವಣ್ಣನು.

ತೊಂಟದ ಶಿದ್ದಂಲಿಂಗ ಶಿವಯೋಗಿಯವರ ವಚನದಲ್ಲಿ
"**ಆ ಲಿಂಗದ ಮಧ್ಯದಲ್ಲಿ ಬೀಜದಿಂದ ವೃಕ್ಷವು ಉದಯವಾಗುವ ಹಾಂಗೆ**"
ಎನ್ನುವ ವಚನಭಾಗದಲ್ಲಿ ವಿಶ್ವದ ಮಧ್ಯದಲ್ಲಿ ವಿಶ್ವ ರಚನಾ ಕಾರ್ಯ ಪ್ರಾರಂಭವಾಯಿತು ಎನ್ನುವದನ್ನು ಹೇಳಿ ಚನ್ನಬಸವಣ್ಣನವರ ಮಾತನ್ನು ಸಮರ್ಥಿಸಿದ್ದಾರೆ.

ತೊಂಟದ ಶಿದ್ಧಂಲಿಂಗ ಶಿವಯೋಗಿ ವಚನ

ಆ ಲಿಂಗದ ಮಧ್ಯದಲ್ಲಿ ಬೀಜದಿಂದ
ವೃಕ್ಷವು ಉದಯವಾಗುವ ಹಾಂಗೆ
ಆ ಲಿಂಗವು ತನ್ನ ಇಚ್ಛಾಶಕ್ತಿಯ ಕೂಡಿಕೊಂಡು
ಜಗದುತ್ಪತ್ತಿ ಸ್ಥಿತಿ ಲಯಂಗಳಿಗೆ ಕರ್ತುವಾಗಿ
ಸಕಲ ನಿಃಕಲವಾಗಿ ಪಂಚಮುಖ ದಶಭುಜ
ದಶಪಂಚನೇತ್ರ ದ್ವಿಪಾದ ತನುವೇಕ ಶುದ್ಧ ಸ್ಫಟಿಕವರ್ಣ
ಧಾತುವಿನಿಂದ ಒಪ್ಪುತ್ತಿಪ್ಪುದು ಸದಾಶಿವಮೂರ್ತಿ.

ಈಗ ಚಿಚ್ಛಕ್ತಿ ಉದಯದ ವಿವರಗಳನ್ನು ತಿಳಿದುಕೊಳ್ಳುವಾ




ತೋಂಟದ ಸಿದ್ಧ ಲಿಂಗ ಶಿವಯೋಗಿಗಳ ಈ ವಚನಭಾಗ ಎರಡು ವಿಷಯಗಳನ್ನು ನಿಖರವಾಗಿ ವಿವರಿಸುತ್ತದೆ.

1. **ಬಚ್ಚಬರಿಯ ಬಯಲೆ ಸಹಜ ದಿಂದ ಗಟ್ಟಿಗೊಂಡು ಘನ ಲಿಂಗವೆಂಬ ಪುರುಷತತ್ವವಾಯಿತ್ತಯ್ಯ.**

ಈ ಮಾತನ್ನು ವಿಜ್ಞಾನಿಗಳು ಸಮರ್ಥಿಸಿದ್ದಾರೆ.

**"All matter and energy of the entire visible universe is contained in a hot dense point a billionth the size of a nuclear particle."**






1. ಅ ಘನ ಲಿಂಗ ದಿಂದ ಚಿಚ್ಛಕ್ತಿ ಜನಿಸಿದಳು.

(a) ಈ ತತ್ವವನ್ನು ಚನ್ನಬಸವಣ್ಣನವರು ತಮ್ಮ ವಚನದಲ್ಲಿ ಸಮರ್ಥಿಸಿದ್ದಾರೆ.

“ನಿಃಕಲ ಪ್ರಣವದಿಂದ ಪ್ರಣವ ನಾದವು ಉದಯಿಸಿತ್ತು
ನಾದಬ್ರಹ್ಮ ದಿಂದ ಚಿತ್ ಶಕ್ತಿಯು  ಉದಯಿಸಿತ್ತು”

(b) ಸ್ವತಂತ್ರ ಸಿದ್ದ ಲಿಂಗ ಶಿವಯೋಗಿಗಳು ತಮ್ಮ ವಚನದಲ್ಲಿ ಈ ವಿಷಯವಾಗಿ ಅನೇಕ ವಿವರಗಳನ್ನು
ಕೊಟ್ಟಿದ್ದಾರೆ.




(a) **ನಿಃಕಲ ಶಿವತತ್ವದಲ್ಲಿ ಜ್ಞಾನಚಿತ್ತು ಉದಯವಾಯಿತ್ತು. ಆ ಚಿತ್ತಿನಿಂದ ಆಕಾರ ಉಕಾರ ಮಕಾರಗಳೆಂಬ**

**ಅಕ್ಷರತ್ರಯಂಗಳಾದವು. ಅಕಾರವೇ ನಾದ ಉಕಾರವೇ ಬಿಂದುಮಕಾರವೇ ಕಳೆ. ಇಂತೀ ತ್ರಿವಿಧಕಕ್ಕೆ ತಾಯಿ ಚಿತ್ತು.**

**ಇಂತೀ ನಾಲ್ಕು ಒಂದಾದಲ್ಲಿ ಓಂಕಾರವೆಂಬ ಪ್ರಣವದುತ್ಪತ್ತಿಯಾಯಿತ್ತು. ಆ ಓಂಕಾರವೆಂಬ ಪ್ರಣವವೇ ಅಖಂಡ ಪರಿಪೂರ್ಣ ಗೋೞಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗನೋಡಾ**

**ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.** -- ತೊಂಟದ ಶಿದ್ದಂಲಿಂಗ ಶಿವಯೋಗಿ

(b) **ಸಚ್ಚಿದಾನಂದ ನಿತ್ಯಪರಿಪೂರ್ಣ ನಿಃಕಲ ಶಿವತತ್ವವು ತನ್ನಿಂದ ತಾನೆ ಅಖಂಡ ಪರಿಪೂರ್ಣ ಗೋೞಕಾಕಾರ ಪರಂಜ್ಯೋತಿಸ್ವರೂಪವಪ್ಪ ಮಹಾಲಿಂಗವಾಯಿತ್ತು ನೋಡಾ.**

-- ತೊಂಟದ ಶಿದ್ದಂಲಿಂಗ ಶಿವಯೋಗಿ

**1. ಹಾಲು ಉಕ್ಕುವದು:**




1. ಹಾಲು ಉಕ್ಕುವದು:
ಒಲೆಯ ಮೇಲೆ ಬಹಳ ಹೊತ್ತು ಹಾಲನ್ನಿಟ್ಟು ಕಾಯಿಸಿದರೆ ಹಾಲು ಉಕ್ಕಿ ಹರಿಯುವದು ನಮಗೆಲ್ಲ ಗೊತ್ತಿರುವ ವಿಷಯ. ಹೊಸ ಮನೆ ಪ್ರವೇಶಕ್ಕೂ ಮುನ್ನ ಹಾಲು ಉಕ್ಕಿಸುವ ಸಂಪ್ರದಾಯವಿದೆ. ಇಲ್ಲಿ ಒಲೆಯ ಮೇಲೆ ಪಾತ್ರೆಯನ್ನಿಟ್ಟು ಕಾಯಿಸುವ ಅವಶ್ಯಕತೆ ಇದೆ. ಸಾಮಾನ್ಯವಾಗಿ ಒಲೆ **1500** ಕೆಲ್ವಿನ್ ತಾಪನಮಾನವಿರುತ್ತದೆ.

**2. ದೋೞಸೆ ಹಿಟ್ಟು ಉಬ್ಬುವದು:**

ರುಬ್ಬಿದ ದೋಸೆ ಹಿಟ್ಟನ್ನು ಒಂದು ಪಾತ್ರೆಯಲ್ಲಿ ಹಾಕಿ ಕೆಲವು ಅವಧಿಯ ನಂತರ ನೋಡಿದರೆ ಆ ಪಾತ್ರೆಯಲ್ಲಿ ಹಿಟ್ಟಿನ ಗಾತ್ರ ಹೆಚ್ಚಾಗಿರು ಗುತ್ತದೆ. ರಾತ್ರಿ ಪಾತ್ರೆಯಲ್ಲಿಟ್ಟ ದೋಸೆ ಹಿಟ್ಟು ಉಕ್ಕಿ ಹೊರಗೆ ಚಲ್ಲಿದ್ದನ್ನು ನೀವು ನೋಡಿರಲೂ ಬಹುದು. ಯಾವುದೇ ರೀತಿಯ ಒಲೆ ಹಚ್ಚಿ ತಾಪಮಾನ ಹೆಚ್ಚಿಸಿಲ್ಲ

ಚಿತ್ರದಲ್ಲಿ ದ್ರವ್ಯ ವಿಕಾಸವಾಗುವ ಎರಡು ಉದಾಹರಣೆಗಳಿವೆ

ಈ ಎರಡು ಉದಾಹರಣೆಗಳಲ್ಲಿ ದ್ರವ್ಯ ವಿಕಾಸ ಆಗುತ್ತಿದೆ ಆದರೂ ಕಾರಣ ಬೇರೆ ಬೇರೆ.

ಶರಣರು ಹಾಗೂ ವಿಜ್ಞಾನಿಗಳು ವಿಶ್ವದ ವಿಕಾಸ ಎರಡನೆಯ ವಿಧಾನದಲ್ಲಾಯಿತು ಎನ್ನುವದನ್ನು ಒಪ್ಪಿಕೊಂಡಿದ್ದಾರೆ.

ಹಾಗಾದರೆ ವಿಶ್ವ ರಚನೆಯಾಗುವ ಪ್ರಾರಂಭವಾದ ಕ್ಷಣದಲ್ಲಿದ್ದ

1. **10^32 K ದಷ್ಟು ತಾಪಮಾನ ಉಂಟಾಗಲು ಕಾರಣಗಳೇನು?**
2. **ಆ ತಾಪಮಾನದಿಂದ ಆದ ಪರಿಣಾಮಗಳೇನು?**

ಎನ್ನುವ ಎರಡು ಪ್ರಶ್ನೆಗಳಿಗೆ ಉತ್ತರವನ್ನು 12 ನೇಯ ಶತಮಾನದಲ್ಲಿ ಶರಣರು ನಿಖರವಾಗಿ ತಮ್ಮ ವಚನದಲ್ಲಿ ಕೊಟ್ಟಿದ್ದಾರೆ.

ಈ ಶತಮಾನದ ಪ್ರಾರಂಭ ದಿಂದ ಇಂದಿನವರೆಗೆ ವಿಜ್ಞಾನಿಗಳು ಹಲವು ವಿಧದಲ್ಲಿ ಉತ್ತರಿಸಲು ಪ್ರಯತ್ನಿಸಿದ್ದಾರೆ.

ಆದರೆ ಕಳೆದ 25 ವರ್ಷದಲ್ಲಿ **Quantum mechanics** ತತ್ವಗಳನ್ನು ಉಪಯೋಗಿಸಿ ವಿಜ್ಞಾನಿಗಳು ಕೊಡುತ್ತಿರುವ ಉತ್ತರ ಮತ್ತು ಶರಣರು ಕೊಟ್ಟ ಉತ್ತರ ಒಂದೇ ಎನ್ನುವದು ಗಮನಿಸಬೇಕಾದ ಅಂಶ.

ಶರಣರು ಮತ್ತು ವಿಜ್ಞಾನಿಗಳು ಕೊಟ್ಟ ವಿವರಗಳನ್ನು ಗಮನಿಸುವಾ.

(1) **It's important to realize that "before" the Big Bang, there was no space and there was no time**




(1) Because all of space and time existed within the singularity, the singularity itself did not exist within space or time.

(2) Since the singularity itself was not in a location on the planes of space or time, there is no center of the universe; everything is expanding from everything else at an equal rate. As for the origins of the singularity, or even what existed before it, scientists are just as befuddled as everyone else.




(1) **If the universe didn't explode into existence, where did it all come from?**

**According to the theory, the universe—this includes all space, time, energy,**

**etc.—was condensed into an**

**extremely hot zero-volume entity of infinite density called a singularity.**

(2) **Big Bang ಅಥವಾ ಮಹಸ್ಫೋಟ ದಲ್ಲಿ ನಮಗೆ ಗೊತ್ತಿರುವ ಹಾಗೆ ಯಾವುದೇ ಸ್ಫೋಟ ಆಗಲೇ ಇಲ್ಲ.**

**ಇಲ್ಲಿ ಅತಿ ಸಂಕುಚಿತವಾದ ದ್ರವ್ಯ ವಿಕಾಸವಾಗುವ ಕ್ರಿಯೆ ನಡೆದಿದೆ.**

**There was no bang, just a vast expansion of extremely condensed material.**

**But the Big Bang wasn't an explosion that destroyed things. It was the beginning of our universe, the start of both space and time. Rather than an explosion, it was a very rapid expansion, the event that started the universe growing bigger and bigger.**

**Many people hear the name "Big Bang" and think about a giant explosion of stuff, like a bomb going off. But the Big Bang wasn't an explosion that destroyed things. It was the beginning of our universe, the start of both space and time. Rather than an explosion, it was a very rapid expansion, the event that started the universe growing bigger and bigger.**

**(3) Present-day physics cannot describe what happened in the Big Bang.**

Quantum theory and the theory of relativity **fail in this almost infinitely dense and hot primal state of the universe.**

**Only an all-encompassing theory of quantum gravity which unifies these two fundamental pillars of physics could provide an insight into how the universe began.**









**Einstein** ಅವರ ಸಂಶೊಧನೆಗಳ ಸಹಾಯದಿಂದ ವಚನಗಳ ಅರ್ಥ ಮಾಡಿಕೊಳ್ಳಬಹುದು. ಅವರ ಸಂಶೋದನೆಗಳ ಮೇಲೆ ಶರಣರ ವಿಚಾರಗಳ ಪ್ರಭಾವ ಆಗಿದೆ ಎನ್ನುವದಕ್ಕೆ ಸಾಧ್ಯವಿಲ್ಲ ಯಾಕಂದರೆ ವಚನಗಳನ್ನು ನಾವು ಇಂಗ್ಲೀಷನಲ್ಲಿ ಭಾಷಾಂತರ ಮಾಡಲು ಪುರಂಭಿಸಿದ್ದು ಇತ್ತೀಚೆಗೆ. ಕಡಕೋಳ ಮಡಿವಾಳಪ್ಪ (ಕ್ರಿ ಶ1780 ರಿಂದ ಕ್ರಿ ಶ 1855) ಅವರ ವಚನ ಓದಿದ ಮೆಲೆ ಆಗುವ ಅನುಭವವೇ ಬೇರೆ. ಅದು ನಮ್ಮ ಸಾಮಾನ್ಯ ಅನುಭವಗಳಿಗೆ ಮೀರಿದ ಯಾವುದೋ ಹೊಸ ವಿಷಯ ಪ್ರಸ್ತಾಪ ಮಾಡುತ್ತದೆ. ಅಲ್ಲಿ ಅಧ್ಯಾತ್ಮಿಕ ವಿಷಯಗಳ ಜೊತೆಗೆ ಯಾವುದೋ ನಮಗೆ ಗೊತ್ತಿರದ ವೈಜ್ಞಾನಿಕ ತತ್ವಗಳ ಪ್ರತಿಪಾದನೆಯು ಇದೆ ಎನ್ನಿಸುತ್ತದೆ.
ಕ್ರಿ ಶ 1900 ನಂತರ ನಡೆದ ವಿಜ್ಞಾನದಲ್ಲಿ ಪ್ರತಿಪಾದಿಸಲ್ಪಟ್ಟ ಎರಡು ಕ್ರಾಂತಿತಿಕಾರಕ ತತ್ವಗಳು

**(1) Theory of relativity**







**(2) Quantum physics**













**"ವಿಶ್ವದ ಪ್ರಾರಂಭದ ಅವದಿಯಲ್ಲಿ ಕಣಗಳು ಮತ್ತು ಅವಕಾಶ ಮತ್ತು ವೇಳೆ (space-time structure of the universe.) ಹೇಗೆ ನಿರ್ಮಾಣವಾದವು?**

ಎನ್ನುವ ಪ್ರಶ್ನೆಗೆ ನಿಖರವಾದ ಉತ್ತರ ವಿವರಿಸುವಲ್ಲಿ ಈ ಎರಡು ತತ್ವಗಳು ವಿಫಲವಾದವು.

Quantum theory and the theory of relativity fail in this almost infinitely dense and hot primal state of the universe.

**ಆದರೆ ಇವೆರಡೂ ತತ್ವಗಳನ್ನು ಒಂದುಗೂಡಿಸಿ ಹೊಸ ತತ್ವದ ಅವಿಷ್ಕಾರ ಮಾಡುವ ಪ್ರಯತ್ನ ನಡೆದಿದೆ.**

**"Only an all-encompassing theory of quantum gravity which unifies these two fundamental pillars of physics could provide an insight into how the universe began"**

**Scientists from the Max Planck Institute for Gravitational Physics (Albert Einstein Institute) in Golm/Potsdam and the Perimeter Institute in Canada have made an important discovery along this route. According to their theory, space consists of tiny "building blocks". Taking this as their starting point, the scientists arrive at one of the most fundamental equations of cosmology, the Friedmann equation, which describes the universe. This shows that quantum mechanics and the theory of relativity really can be unified.**

ಆದರೆ 12 ನೇಯ ಶತಮಾನದಲ್ಲಿ ಶರಣರು ಈ ಎರಡು ಪ್ರಶ್ನೆಗಳಿಗೆ ತಮ್ಮ ವಚನಗಳಲ್ಲಿ ಸಮರ್ಪಕ ಉತ್ತರ ಕೊಟ್ಟಿದ್ದಾರೆ.

**ವಿಜ್ಞಾನಿಗಳೀಗ ಕೊಡುತ್ತಿರುವ ವಿವರಗಳು ಮತ್ತು ಶರಣರು ಕೊಟ್ಟ ವಿವರಣೆಗಳನ್ನುಲ್ಲಿ ಸಾಮ್ಯತೆ ಕಂಡುಬರುತ್ತಿದೆ.**

ಕಡಕೋಳ ಮಡಿವಾಳಪ್ಪ ಅವರ ವಚನಗಳಲ್ಲಿ ಇವೆರಡು ತತ್ವಗಳ ಪ್ರತಿಪಾದನೆ ಮತ್ತು ಇವೆರಡು ತತ್ವಗಳ ತಾಕಲಾಟದ ವಿವರಗಳಿವೆ.

"ವಿಶ್ವದ ಪ್ರಾರಂಭದ ಅವದಿಯಲ್ಲಿ ಕಣಗಳು (Particles) ಮತ್ತು ಅವಕಾಶ ಮತ್ತು ವೇಳೆ (space-time structure of the universe.) ಹೇಗೆ ನಿರ್ಮಾಣವಾದವು? ಎನ್ನುವ ಪ್ರಶ್ನೆಗೆ ಉತ್ತರ ಕಂಡುಹಿಡಿಯುವ ಪ್ರಯತ್ನ ನಡೆದಿದೆ.

Quantum theory and the theory of relativity fail in this almost infinitely dense and hot primal state of the universe.

**ಆದರೆ ಇವೆರಡೂ ತತ್ವಗಳನ್ನು ಒಂದುಗೂಡಿಸಿ ಹೊಸ ತತ್ವದ ಅವಿಷ್ಕಾರ ಮಾಡುವ ಪ್ರಯತ್ನ ನಡೆದಿದೆ.**

ವಿಜ್ಞಾನಿಗಳು ಪ್ರಸ್ತುತಪಡಿಸಿದ ವಿಚಾರಗಳಲ್ಲಿ ಸುಳ್ಳು ಯಾವದು ಮತ್ತು ಸತ್ಯ ಯಾವದು ಎನ್ನುವದು ಇನ್ನೂ ನಿರ್ಧಾರವಾಗಿಲ್ಲ. ಆ
ವಿಷಯವಾಗಿ ಸಂಶೋಧನೆಗಳು ನಡೆದಿವೆ.

ಕಡಕೋಳ ಮಡಿವಾಳಪ್ಪ (ಕ್ರಿ ಶ1780 ರಿಂದ ಕ್ರಿ ಶ 1855) ಅವರ ವಚನ ಈ ಎಲ್ಲ ವಿವಾದಗಳನ್ನು ಹಾಗೂ ಸಂದೇಹಗಳನ್ನು ವಿವರಿಸಿರುವರೇನೋ ಎನಿಸುವ ಹಾಗೆ ಮಾಡುತ್ತದೆ.


ಮಡಿವಾಳಪ್ಪ / ಕಡಕೋಳ ಮಡಿವಾಳಪ್ಪ ಭಾಗ 1

ಜಯ ಜಯ ನಿರುಪಮ ನಿರವಯ ನಿಷ್ಕಲ
ಜಯ ಜಯ ನಿಶ್ಚಲ ನಿರ್ಮಲ ನಿರ್ಗುಣ
ಜಯ ಜಯ ಪರಮ ನಿರಂಜನ ಸದ್ಗುರು ಮಹಾಂತ ಶರಣಾರ್ಥಿ. |ಪಲ್ಲ |
ಸುಳ್ಳೆ ನಿರ್ಬೈಲೆನಿಸಿ ಮೆರೆದಿ
ಸುಳ್ಳೆ ಮಹಾಬೈಲಾಗಿ ತೋರಿದಿ
ಸುಳ್ಳೆ ಚಿದ್ಬೈಲವಾಗಿ ಸಾರಿದಿ ಸುಳ್ಳೆ ಪರಬ್ರಹ್ಮಾ
ಸುಳ್ಳೆ ಪರಶಿವ ಚಿತ್ತಭ್ಹಿತ್ತಿಯು
ಸುಳ್ಳೆ ಇಚ್ಛೆಯ ನೆನವಕೊನರಿಸಿ
ಸುಳ್ಳೆ ಮನಘನವೃಕ್ಷ ಮಾಡಿದಿ ಮಹಾಂತ ಶರಣಾರ್ಥಿ. | 1 |

ಈ ಎಲ್ಲ ಗೊಂದಲಗಳನ್ನು ಗಮನಿಸಿದಾಗ ಶರಣರು ಪ್ರಸ್ತುತಪಡಿಸಿದ ತತ್ವಗಳೇ ಹೆಚ್ಚು ಪ್ರಸ್ತುತ ಎನಿಸುತ್ತವೆ. ಅವರ ತತ್ವಗಳಲ್ಲಿ ಗೊಂದಲಗಳಿಲ್ಲ ಮತ್ತು 12 ನೇಯ ಶತಮಾನದಿಂದ 18 ನೇಯ ಶತಮಾನದವರೆಗೆ ರಚನೆಯಾದ ಎಲ್ಲ ವಚನಗಳಲ್ಲಿ ಪ್ರಸ್ಥುತಪಡಿಸಿದ ತತ್ವಗಳಲ್ಲಿ ಸಮನ್ವಯತೆ ಇದೆ. ವಿಜ್ಞಾನಿಗಳು ಇದುವರೆಗೆ ಪ್ರಸ್ಥುತಪಡಿಸಿದ ತತ್ವಗಳ ಸಾರ ವಚನಗಳಲ್ಲಿದೆ ಮತ್ತು ವಿಜ್ಞಾನ ಸಾಗಬೇಕಾದ ಹೊಸ ಹಾದಿಯೆಡೆಗೆ ಮಾರ್ಗ ಸೂಚಿಸುತ್ತಿದೆ ಎನಿಸುತ್ತದೆ.

## ವಚನಾಮೃತಬಿಂದು 8
## “ವಿಶ್ವ ರಚನೆ” ಪ್ರತಿಪಾದನೆಯಲ್ಲಿರುವ ಶರಣರ ಮತ್ತು ವಿಜ್ಞಾನಿಗಳ ಸಾಮ್ಯತೆ.

**ನಾ ಕನಸಿನಲ್ಲಿ ಕಂಡ ವಚನದ ವೈಜ್ಞಾನಿಕ ಅರ್ಥ:**

**ನಿನ್ನೆ ರಾತ್ರಿ** vachana science.com ದಲ್ಲಿ 331 **ನೇಯ** ಲೇಖನ ಬರೆದು ಮಲಗಲು ಹೋದೆ. ಮನದಲ್ಲಿ ಏನೋ ತಳಮಳ. ತಲೆ ತುಂಬಾ
ಯೋಚನೆಗಳು. ಅಚ್ಚಗನ್ನಡದಲ್ಲಿ ತುಂಬಾ ಸರಳ ಎನಿಸುವ ವಚನದ ಸಾಲುಗಳು. ವಿಚಾರಿಸಲು ಹೋದರೆ ಆಳವೂ ಸಿಗುತ್ತಿಲ್ಲ ಅಂತ್ಯವೂ ಸಿಗುತ್ತಿಲ್ಲ. ಕಳ್ಳ ಉಸುಕಿನಲ್ಲಿ ಸಿಕ್ಕಿರುವ ಅನುಭವ.
ಇದಕ್ಕೆ ವಿಜ್ಞಾನಿಗಳ ಹತ್ತಿರ ಪರಿಹಾರ ಕೇಳಿದರೆ ಅವರು ಮುಂದಿಡುವದು ನೂರಾರು ಪ್ರಬಂಧಗಳನ್ನು. ಒಂದು ಪ್ರಬಂಧ ಪ್ರಕಟಿಸಲು ಆ ವಿಜ್ಞಾನಿ ತನ್ನ ಜೀವನಮಾನವನ್ನೆಲ್ಲ ಪ್ರಯೋಗಾಲದಲ್ಲಿ ಕಳೆಯುತ್ತಾನೆ. ಕಂಡುಕೊಂಡ ಸತ್ಯಗಳನ್ನೆಲ್ಲ ಜತನ ದಿಂದ ಭಟ್ಟಿಇಳಿಸಿ ಪ್ರಕಟಿಸಿದ ಆ ಪ್ರಬಂಧವನ್ನು ನಾನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವೇ?
ಶರಣರ ಒಂದು ವಚನಭಾಗ ಅರ್ಥ ಮಡಿಕೊಳ್ಳಲು ನೂರಾರು ಪ್ರಬಂಧ ಓದಬೇಕು, ಹಾಗೆ ಮಾಡಲು ಸಾವಿರಾರು ಜನುಮವೆತ್ತಬೇಕು. ಅಸಾಧ್ಯ, ಎಲ್ಲ ಗೋಜಲು ಗೊಂದಲ. ನಿದ್ದೆ ಬರಲಿಲ್ಲ. ಮೊಮ್ಮಗ ತೇಜಸ್ ಜೊತೆ ಸ್ವಲ್ಪ ವೇಳೆ ಕಳೆದರಾಯಿತು ಎಂದು ಅವನ ರೂಮಿಗೆ ಹೋದೆ. ಅವನು ತನ್ನ **lap top** ದಲ್ಲಿ ಆಟದಲ್ಲಿ ಮುಳುಗಿದ್ದ.
ಅವನಾಡುತ್ತಿದ್ದುದು **time machine** ಆಟ, ಅವ ಹೇಳಿದ ಇದರಲ್ಲಿ **time set** ಮಾಡಿದರೆ ನಾವು ಆ ಕಾಲಕ್ಕೆ ಹೋಗಿ ಅಲ್ಲಿರುವ ವಿವರ ಗ್ರಹಿಸಿ ಅಲ್ಲಿ ಆಡಿ ಗೆದ್ದು ಸ್ಟಿಕರ ಪಡೆಯಬಹುದು, ನಾನೀಗ 22 ನೇಯ ಶತಮಾನದಲ್ಲಿಯ ಯುದ್ದದಲ್ಲಿ ಭಾಗವಹಿಸಿ ಆಟ ಆಡುತ್ತಿದ್ದೇನೆ ಎಂದ. ನನಗದರಲ್ಲಿ ಇಷ್ಟವಿಲ್ಲ ಎಂದೆ. ಅಜ್ಜ ನಿನಗೆ ಭೂತಕಾಲದ್ದೇ ಚಿಂತೆ ಕಳೆದಹೋದದ್ದು ಹುಡುಕುವದರಲ್ಲೇನಿದೆ ಸಂತೋಷ ಎಂದನವನು. ನನಗೆ ನಿದ್ದೆ ಬರುತ್ತಿದೆ **good night** ಹೇಳಿ
ಮರಳಿ ಬಂದು ಮಲಗಿಕೊಂಡೆ.
ಆಗ ನನಗನಿಸಿದ್ದು ಕನಸಿನಲ್ಲಾದರೂ ನನಗೆ ವಚನಗಳ ವಿವರಣೆ ಸಿಗಬಹುದಾ? ಕನಸು ಎಂದಕೂಡಲೇ ನನಗೆ ನೆನಪಾಗುವದು ಅಕ್ಕ ಮಹಾದೇವಿಯವರ ವಚನ

> **ಅಕ್ಕ ಕೇಳಕ್ಕಾ, ನಾನೊಂದು ಕನಸ ಕಂಡೆ.**
> **ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು**
> **ಬಂದೆನ್ನ ನೆರೆದ ನೋಡವ್ವಾ.**
> **ಆತನನಪ್ಪಿಕೊಂಡು ತಳವೆಳಗಾದೆನು.**
> **ಚೆನ್ನಮಲ್ಲಿಕಾರ್ಜುನನ ಕಂಡು**
> **ಕಣ್ಣುಮುಚ್ಚಿ ತೆರೆದು ತಳವೆಳಗಾದೆನು. / 11**---ಅಕ್ಕ ಮಹಾದೇವಿ

ಯಾವಾಗ ನಿದ್ದೆ ಆವರಿಸಿತೋ ಗೊತ್ತಾಗಲಿಲ್ಲ .
ಎದ್ದಾಗ ರಾತ್ರಿಯೆಲ್ಲ ಕನಸು ಕಂಡ ಅನುಭವ. ಆ ಕನಸನಲ್ಲಿ ಕಂಡದ್ದೇನು?
ನೆನಪಾದ ಕೆಲವು ವಿಷಯಗಳ ವಿವರಣೆ ಇಲ್ಲಿದೆ.

ಇದು ನನ್ನ ಕನಸು ಇಲ್ಲಿರುವದು ಪೂರ್ಣ ಸತ್ಯವಲ್ಲ ಅದರರ್ಥ ಅದೆಲ್ಲಾ ಮಿತ್ಯವೂ ಅಲ್ಲ ಅದು ನನ್ನ ಮನದ ತಳಮಳದಿಂದ ಮೂಡಿ ಬಂದ ಕಲ್ಪನೆಗಳು. ಇಲ್ಲಿರುವ ವಿವರಗಳನ್ನು ಪೂರ್ಣವಾಗಿ ಓದಿದಾಗ ಶರಣರ ವಚನಗಳನ್ನು ವಿಜ್ಞಾನಿಗಳ ದೃಷ್ಟಿಯಲ್ಲಿ ಕಂಡ ಅನುಭವ ಸಿಗಬಹುದು.
ಯಾವಾಗ ನಿದ್ದೆ ಆವರಿಸಿತೋ ಗೊತ್ತಾಗಲಿಲ್ಲ . ಎದ್ದಾಗ ರಾತ್ರಿಯೆಲ್ಲ ಕನಸು ಕಂಡ ಅನುಭವ.
ಆ ಕನಸನಲ್ಲಿ ಕಂಡದ್ದೇನು? ನೆನಪಾದ ಕೆಲವು ವಿಷಯಗಳ ವಿವರಣೆ ಇಲ್ಲಿದೆ..



ಈ ಚಿತ್ರ ಹೇಳುವ ವಿವರಗಳನ್ನೆಲ್ಲ ದೇಶಿಕೇಂದ್ರ ಸಂಗನಬಸವಯ್ಯನವರ ವಚನದಲ್ಲಿ ಪಡೆಯಬಹುದಾಗಿದೆ.

> ಅವಿರಳಪರಶಿವಲಿಂಗಕ್ಕೆ **ಕ್ರಿಯಾಶಕ್ತಿ** ಪಾದಸೇವೆಯ ಮಾಡುತಿರ್ದಳು
> **ಆಚಾರಲಿಂಗ**ವೆನ್ನ ಪ್ರಾಣನಾಥನೆಂದು.
> **ಜ್ಞಾನಶಕ್ತಿಯು** ಸವಿನಯಮಾತಿನಿಂದ ಮಜ್ಜನಮಾಡಿಸುತ್ತಿಹಳು
> **ಗುರುಲಿಂಗ**ವೆನ್ನ ಪ್ರಾಣನಾಥನೆಂದು.
> **ಇಚ್ಛಾಶಕ್ತಿಯು** ಇಚ್ಛೆಯ ಗ್ರಹಿಸುತ್ತಿಹಳು **ಶಿವಲಿಂಗ**ವೆನ್ನ
> ಪ್ರಾಣನಾಥನೆಂದು.
> **ಆದಿಶಕ್ತಿಯು** ಪೂಜಾನುಕೂಲೆಯಾಗಿಹಳು **ಜಂಗಮಲಿಂಗ**ವೆನ್ನ
> ಪ್ರಾಣನಾಥನೆಂದು.

**ಪರಶಕ್ತಿಯು** ಮಂತ್ರ ಧ್ಯಾನ ಜಪ ಸ್ತೋತ್ರದಿಂದ ಸ್ತುತಿಯಮಾಡುತ್ತಿಹಳು **ಪ್ರಸಾದಲಿಂಗ**ವೆನ್ನ ಪ್ರಾಣನಾಥನೆಂದು.
**ಚಿಚ್ಛಕ್ತಿಯು** ಪರಮಸುಖಾನಂದವ ತೋರುತ್ತಿಹಳು **ಮಹಾಲಿಂಗ**ವೆನ್ನ ಪ್ರಾಣನಾಥನೆಂದು.
ಇಂತು **ಷಡ್ವಿಧಶಕ್ತಿಯರೆನ್ನಲ್ಲಿ** ನಿಂದು, ನಿರಂಜನ ಚನ್ನಬಸವಲಿಂಗವೆನ್ನ ಪ್ರಾಣನಾಥನೆಂದು ಕರಸ್ಥಲವಿಡಿದಾನಂದಿಸುತ್ತಿಹರು.
/ 212 ---- **ದೇಶಿಕೇಂದ್ರ ಸಂಗನಬಸವಯ್ಯ**

Time machine ದಲ್ಲಿ ಪ್ರವಾಸ ಮಾಡುತ್ತ ನಡೆದ ಸಂವಾದವನ್ನಿಲ್ಲಿ ವಿವರಿಸುತ್ತಿರುವೆ. ಓದುತ್ತ ಹೋದ ಹಾಗೆ ವಚನಗಳ ಅರ್ಥವೂ ಆಗುವದು ಎನ್ನುವದು ನನ್ನ ಅನಿಸಿಕೆ.

| | |
|---|---|
|  | ಸಣ್ಣವರಿದ್ದಾಗ ಅನೇಕ ಕಥೆಗಳಲ್ಲಿ ಚಾಪೆಯ ಮೇಲೆ ಅಥವಾ ಕೀಲುಕುದುರೆಯ ಮೇಲೆ ಕುಳಿತು ಮನ ಬಯಸಿದ ಕಡೆ ಕ್ಷಣಮಾತ್ರದಲ್ಲಿ ತಲುಪಿದ ಘಟನೆ ಓದಿ ಸಂತೋಷಪಟ್ಟಿದ್ದೇವೆ.<br>ಅನೇಕ ಲೇಖನಗಳಲ್ಲಿ ಮತ್ತು ಸಿನಿಮಾಗಳಲ್ಲಿ time machine ದಲ್ಲಿ ಪ್ರವಾಸ ಮಾಡುವ ಸನ್ನಿವೇಶ ನೋಡಿ ಚಪ್ಪಾಳೆ ತಟ್ಟಿದ್ದೇವೆ.<br>ಇಲ್ಲಿ ಆ ರೀತಿಯ ಘಟನೆಗಳನ್ನು ವಿವರಿಸುವೆ |

**Time travel is the concept of movement between certain points in time, analogous to movement between different points in space by an object or a person, typically with the use of a hypothetical device known as a time machine. Time travel is a widely recognized concept in philosophy and fiction.**

ನಮಸ್ಕಾರ ಗುರಣ್ಣ ಎಂದು ಕರೆದ ಹಾಗಾಯಿತು. ನನ್ನ ಹತ್ತಿರದ **time machine** ದಿಂದ ಶಬ್ದ ಕೇಳುತ್ತಿತ್ತು. ನನಗರಿವಿಲ್ಲದಂತೆ ನಮಸ್ಕಾರ ಎಂದೆ.
ಬನ್ನಿ ಹೋಗೋಣ ನಿಮ್ಮ ಮನದಿಚ್ಚೆಯಂತೆ ಪ್ರಯಾಣ ಮಾಡೋಣ ಎನ್ನುವ ದನಿ ಕೇಳಿ ಸರಿ ಎಂದಾಗ ನಾನು ಅ time machine ಒಳಗಿದ್ದೆ.
ಆಗ "ಸರಿ ನಾವು ಹೊರಡೋಣ ನಾನು ನೀವು ಈಗ ಅದೃಶ್ಯ ಸ್ತಿತಿಯಲ್ಲಿದ್ದೇವೆ. ಆದರೂ ನಮ್ಮ ನಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಸಾಧ್ಯ. ನಾನು ಈ time machine ಸಂಚಾಲಕ ನಿಮ್ಮ ಪರಿಚಯದ "ಅರುಣ", ನಾನು ಅದೃಶ್ಯನಾಗಿದ್ದರೂ ನಿಮ್ಮ ಮನದಲ್ಲಿ ಮೂಡಿದ ವಿಚಾರಗಳು ನನಗೆ ಗೊತ್ತಾಗುತ್ತವೆ ಮತ್ತು ನನ್ನ ಮನದ ವಿಚಾರಗಳು ನಿಮಗೆ ತಿಳಿಯುತ್ತೆ ಅದಕ್ಕಾಗಿ ಬೇರೆ ಮಾಧ್ಯಮಗಳ ಅವಶ್ಯಕತೆಯಿಲ್ಲ.
ಮುಂದಿನ ವಿವರಗಳೆಲ್ಲ "ಗುರಣ್ಣ" ಮತ್ತು "ಅರುಣ" ನಡುವಿನ ಸಂಭಾಷಣೆಯ ರೂಪದಲ್ಲಿವೆ.
**ಅರುಣ :** ಈಗ ನಮ್ಮ time machine ಚಾಲು ಆಗಿದೆ ಯಾವ ಅವಧಿಗೆ ಹೋಗೋಣ.
**ಗುರಣ್ಣ:** ಭೂತಕಾಲಕ್ಕೆ ಹೋಗಬಹುದೇ? ವಿಶ್ವದ ಪ್ರಾರಂಭಕ್ಕೆ.
**ಅರುಣ :** ಸರಿ ಅರ್ಥವಾಯಿತು.
ಆ ಕ್ಷಣ ಪೆನೆಲ ಮೇಲೆ -13.8 Billion ಎನ್ನುವ ಸಂದೇಶ ಕಾಣತೊದಗಿತು.
**ಗುರಣ್ಣ:** -13.8 Billion ವೇಳೆಯನ್ನು ಆರಿಸಿಕೊಂಡಿರುವಿರಿ?
**ಅರುಣ :** ಇದೊಂದೇ ಅಲ್ಲ ನಿಮ್ಮ ಮನದಲ್ಲಿ ಮೂಡಿರುವ ಪ್ರಶ್ನೆಗಳನ್ನು ಮತ್ತು ಅವಕ್ಕೆ ಸಾಧ್ಯವಾದಷ್ಟು ನಿಖರವಾದ ಉತ್ತರ
ಕೊಡುವೆ ಅದು ಪೆನೆಲ ಮೇಲೆ ಮೂಡುತ್ತದೆ.
**ಗುರಣ್ಣ:1 Billion ಅಂದರೇನು?**
**ಅರುಣ :**ಸ್ವಾಭಾವಿಕ ಸಂಖ್ಯೆ 1,000,000,000 ಗೆ ಒಂದು billion ಎನ್ನುತ್ತಾರೆ. ಇದನ್ನು ಶತಕೋಟಿ ಎಂದೂ ಕರೆಯುತ್ತಾರೆ.
ಇದನ್ನು $1 \times 10^9$ ಎನ್ನುವ ರೂಪದಲ್ಲಿ ಬರೆಯಬಹುದು. ನಾವೀಗ (-13.8 Billion) 13800,000,000 ವರ್ಷಗಳಷ್ಟು ಹಿಂದೆ ಹೋಗಿ ಆಗಿನ ಪರಸ್ಥಿತಿ ಅಧ್ಯಯನ ಮಾಡುತ್ತೇವೆ.
**ಗುರಣ್ಣ: ಈ ಅವಧಿಯನ್ನೇ ಏಕೆ ಆರಿಸಿಕೊಳ್ಳಲಾಯಿತು?**
**ಅರುಣ :** ಶರಣರು ಮತ್ತು ವಿಜ್ಞಾನಿಗಳು ಈ ಅವಧಿಗೆ ತುಂಬ ಮಹತ್ವ ಕೊಟ್ಟಿದ್ದಾರೆ ವಿವರಣೆ ನೋಡಿದ ಮೇಲೆ ಕಾರಣ
ಗೊತ್ತಾಗುತ್ತದೆ. ವಿಜ್ಞಾನಿಗಳು ಈ ವಿಷಯವಾಗಿ ಅಧ್ಯಯನ ಮಾಡಿ ಕೆಲವು (ಭಿನ್ನಮತವಿದೆಯಾದರೂ) ನಿರ್ಣಯಕ್ಕೆ ತಲುಪಿದ್ದಾರೆ ಅವುಗಳನ್ನು ಅರಿಯೋಣ.




ಅನೇಕ ವಿಜ್ಞಾನಿಗಳ ನೂರಾರು ವರ್ಷಗಳ ಅವಿರತ ಯೋಚನೆ ಮತ್ತು ಪ್ರಯೋಗಾಲಯಗಳಲ್ಲಿ ಮಾಡಿದ ಪ್ರಯೋಗಗಳ ಫಲವಾಗಿ ಮೂಡಿಬಂದ ಸಂಶೋಧನೆಯ ಫಲಿತಾಂಶಗಳು

ಒಮ್ಮೆಲೆ ಎಲ್ಲವನ್ನು ಅರ್ಥಮಾದಿಕೊಳ್ಳುವದು ಅಸಾಧ್ಯ, ಅದಕ್ಕಾಗಿ ಮನದಲ್ಲಿ ಗೊಂದಲ ಮೂಡುವದು ಸಹಜ.

**ಗುರಣ್ಣ:** ಇವೆಲ್ಲವನ್ನು ಅಲ್ಪ ಅವಧಿಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವೇ?

**ಅರುಣ :** ವಚನಗಳ ಮೂಲಕ ಈ ತತ್ವಗಳಷ್ಟೇ ಅಲ್ಲ ಇವುಗಳಿಗೆ ಸಂಭಂಧಿಸಿದ ಇನ್ನೂ ಅನೇಕ ತತ್ವಗಳನ್ನು ಅಲ್ಪಕಾಲದಲ್ಲಿ ಅರ್ಥ ಮಾಡಿಕೊಳ್ಳಬಹುದು.

**ಗುರಣ್ಣ:** ತುಂಬಾ ವಿಚಿತ್ರವಾದ ವಿವರಣೆ 12 ನೇಯ ಶತಮಾನದಲ್ಲಿ ಯಾವ ಸಾಧನ ಸಲಕರಣೆಗಳಿಲ್ಲದೇ ಗವಿಯಲ್ಲಿ ಕುಳಿತು ಶರಣರು ರಚಿಸಿದ ವಚನಗಳ ಸಹಾಯ ದಿಂದ 21ನೇಯ ತಮಾನದ ಸಂಶೊಧನೆಗಳ ವಿವರಣೆ ಸಾಧ್ಯವೇ?

**ಅರುಣ :** ಸಾಮಾನ್ಯವಾಗಿ ಎಲ್ಲರೂ ವಿಚಾರಿಸುವ ದಾರಿಯಲ್ಲಿಯೇ ಇದೆ ಈ ವಿಚಾರ. ಪ್ರಯತ್ನ ಪಡದೆ ಅಸಾಧ್ಯ ಎನ್ನುವ ನಿರ್ಧಾರಕ್ಕೆ ಬಂದಿರುವಿರಿ.

**ಗುರಣ್ಣ:** ನನಗೆ ವಚನಗಳ ಬಗ್ಗೆ ಇರುವ ಅಲ್ಪ ಅರಿವು ವಿಜ್ಞಾನದ ಬಗ್ಗೆ ಇರುವ ಒಲವು ಹೀಗೆ ವಿಚಾರಿಸುವಂತೆ

ಮಾಡಿರಬಹುದು. ನಿಮ್ಮ ದಾರಿಯಲ್ಲಿ ಒಮ್ಮೆ ಸಾಗುವದರಲ್ಲಿ ತಪ್ಪೇನಿದೆ?

**ಅರುಣ :**

**ವಿಜ್ಞಾನಿಗಳ ವಿವರಣೆ:**

**Around 13.8 billion years ago, all the matter in the Universe emerged from a single, minute point, or singularity, in a violent burst.**

ಮಹಾಸ್ಫೋಟದ ವಿವರಣೆಯನ್ನು ಮೂರು ಭಾಗಗಳಲ್ಲಿ ಶರಣರು ವಿವರಣೆ ಕೊಟ್ಟಿದ್ದಾರೆ.

ಅವುಗಳನ್ನು ವಿವರವಾಗಿ ಅರಿಯೋಣ

**ಭಾಗ 1: ಮಹಾಸ್ಫೋಟ ನಡೆದ ಕಾಲ ಮತ್ತು ಆಗಿನ ವಾತಾವರಣ.**

ಮೊದಲಿಗೆ ಷಣ್ಮುಖಸ್ವಾಮಿ ವಚನ ಅಧ್ಯಯನ ಮಾಡೋಣ

ಷಣ್ಮುಖಸ್ವಾಮಿ 16 ನೇಯ ಶತಮಾನದಲ್ಲಿ ವಚನ ರಚಿಸಿ ವಚನ ಸಾಹಿತ್ಯ ಮತ್ತು ಸಂಸ್ಕೃತಿ ನೆಲೆಗೊಳ್ಳುವಂತೆ ಮಾಡಿದ ಶರಣರು.

ನೀವು ನಿಮ್ಮ ಸ್ವಲೀಲೆಯಿಂದ ಜಗದಲೀಲಾ ವೈಭವಂಗಳ
ನಟಿಸಬೇಕೆಂದು ನಿಮ್ಮಲ್ಲಿ ನೆನಹುದೋರಲು,
ಆ ನೆನಹು ನಿರ್ಧರಿಸಿ, ಚಿತ್ತನಿಸಿತ್ತು.
**ಆ ಚಿತ್ತಿನಿಂದೆ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು**.
ಆ ಚಿನ್ನಾದ ಚಿದ್ಬಿಂದು ಚಿತ್ಕಳೆ ಆ ಮೂಲಚಿತ್ತು **ಸಹವಾಗಿ ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.**
ಆ ಮಹಾಲಿಂಗವೇ ಪಂಚಮುಖವನ್ನೈದಿಹ ಸದಾಶಿವನೆಂದೆನಿಸಿತ್ತು.
ಆ ಸದಾಶಿವನಿಂದೆ ಬ್ರಹ್ಮ-ವಿಷ್ಣು-ರುದ್ರರೆಂಬ ತ್ರೈಮೂರ್ತಿಗಳುದಿಸಿದರು.
ಆ ತ್ರೈಮೂರ್ತಿಗಳಿಂದೆ ಸ್ವರ್ಗ-ಮರ್ತ್ಯ-ಪಾತಾಳಂಗಳೆಂಬ
ತ್ರೈಲೋಕಂಗಳು ಜನಿಸಿದವು.
ಆ ತ್ರೈಲೋಕಂಗಳ ಮಧ್ಯದಲ್ಲಿ ಸಚರಾಚರ ಹೆಣ್ಣುಗಂಡು ನಾಮ ರೂಪ
ಕ್ರಿಯಾದಿ ಸಕಲ ವಿಸ್ತಾರವಾಯಿತ್ತು.
ಇಂತಿವೆಲ್ಲವೂ ನಿಮ್ಮ ನೆನಹುಮಾತ್ರದಿಂದಾದವಯ್ಯ ಅಖಂಡೇಶ್ವರಾ. / 404

---- ಷಣ್ಮುಖಸ್ವಾಮಿ

ಇವರು ಉಪಯೋಗಿಸಿದ ಪದ **“ಚಿನ್ನಾದ ಚಿದ್ಬಿಂದು ಚಿತ್ಕಳೆ”**

**“single, minute point, or singularity”**

ಎನ್ನುವ ಪದವನ್ನು ಕಾವ್ಯಾತ್ಮಕವಾಗಿ ವಿವರಿಸುತ್ತದೆ ಅಲ್ಲದೆ ಅದರ ವಿವರಣೆ
**“ಮೂಲಚಿತ್ತು ಸಹವಾಗಿ ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು”** ಎನ್ನುವದನ್ನು ಭಾಷಾಂತರ ಮಾಡುವದು ಅಸಾದ್ಯ ಆದರೂ
**“All the matter in the Universe emerged from a single, minute point, or singularity”** ಎಂದು ವಿವರಿಸಬಹುದಲ್ಲವೇ?

**ಗುರಣ್ಣ :** ಷಣ್ಮುಖಸ್ವಾಮಿ ಅವರ ವಚನದಲ್ಲಿಯ ವಿವರಣೆ ವಿಜ್ಞಾನಿಗಳ ವಿವರಣೆಗಿಂತ ಹೆಚ್ಚು ಪ್ರಭುದ್ಧವಾಗಿದೆ,
ನಾನು ಗಣಿತ ಕಲಿಸುವಾಗ **point** ಶಬ್ದವನ್ನು ಸಾವಿರಾರು ಸಲ ಉಪಯೋಗಿಸಿರುವೆ ಆದರೆ
“**ಚಿದ್ಬಿಂದು”** ಎಂದಾಗ ಆಗುವ ಮಧುರಾನಂದ ಒಮ್ಮೆಯೂ ಅನುಭವಿಸಿಲ್ಲ. ಇಲ್ಲಿ ಈ ಶಬ್ದಕ್ಕೆ ಇನ್ನೂ ಏನೋ
ಹೆಚ್ಚಿನ ಅರ್ಥವಿರಬೇಕು ಎನಿಸುತ್ತದೆ.

**ಅರುಣ : “ಚಿದ್ಬಿಂದು”** ಶಬ್ದವನ್ನು ಸುಮಾರು 15 ಶರಣರು 30 ವಚನಗಳಲ್ಲಿ ಉಪಯೊಗಿಸಿದ್ದಾರೆ. ಅವರ ವಿವರಣೆಯನ್ನು ತಿಳಿದ
ಮೇಲೆ ಈ ಶಬ್ದದ ಪೂರ್ಣ ಅರ್ಥ ಆಗಬಹುದು.

**ಗುರಣ್ಣ :** ಶರಣರ ಕೆಲವು ವಚನಗಳಲ್ಲಿ ಬಹಳ ಸಾಲುಗಳಿವೆ ಅದಕ್ಕಾಗಿ ಅವೆಲ್ಲ ವಚನಗಳನ್ನು ಉದಾಹರಿಸಲಾಗುವದಿಲ್ಲ, ಅದರೆ
ಅಲ್ಲಿಯ ಕೆಲವು ಸಾಲುಗಳನ್ನು ಉದಾಹರಿಸಿ ಸಾಕು.
ಇದು 18 ನೇಯ ಶತಮಾನದ ಶರಣ ಕಡಕೋಲ ಮಡಿವಾಳಪ್ಪ ಅವರ ವಚನ.. ಇವರ ತತ್ವಪದಗಳು
ಜನಪ್ರೀಯವಾಗಿವೆ. ಅವು ಹಳ್ಳಿಯ ಜನರಿಗೆ ಕಂಠಸ್ಥವಾಗಿ ಭಜನೆಗಳ ಪದಗಳಗಿವೆ.




ಇಲ್ಲಿ ಮಡಿವಾಳಪ್ಪನವರು ನಾದ, ಬಿಂದು, ಮತ್ತು ಕಳೆ ಶಬ್ದ ಬದಲಿಗೆ ಚಿನ್ನಾದ, ಚಿದ್ಬಿಂದು ಚಿತ್ಕಳೆ ಶಬ್ದ

ಉಪಯೋಗಿಸಿ, ವಿಜ್ಞಾನಿಗಳು ಹೇಳಿದ ಬಿಂದು singularity,

ನಾದ, ಬಿಂದು, ಮತ್ತು ಕಳೆ ಗುಣ ಹೊಂದಿದ ವಸ್ತುವನ್ನು ಒಳಗೊಂಡಿದೆ ಎನ್ನುವದನ್ನು ಸೂಚಿಸಿದ್ದಾರೆ.

**ಅಂದರೆ ವಿಜ್ಞಾನಿಗಳು ಹೇಳಿದ ಬಿಂದು singularity ಯು STRINGS ಒಳಗೊಂಡಿದೆ**

ಎನ್ನುವ ಸತ್ಯವನ್ನು ಹೆಳಿದ್ದಾರೆ.

**ಅರುಣ :** ಹಾಗೆ ಅನಿಸುತ್ತದೆ. ಈ ವಿಶ್ವ **STRINGS** ಗಳಿಂದ ರಚಿತವಾಗಿದೆ ಎನ್ನುವದನ್ನು ಪ್ರತಿಪಾದಿಸಿದ್ದಾರೆ

ಎನಿಸುತ್ತದೆ. ಈ ದಶಮಾನದಲ್ಲಿಯ ಪ್ರಮುಖ ಸಂಶೋಧನೆಯ ವಿಷಯ ಇದಾಗಿದೆ.

**ಗುರಣ್ಣ :** ಈ ವಚನಗಳನ್ನು ಓದಿದಾಗ ಇವೆಲ್ಲ ತಾತ್ವಿಕ ಧಾರ್ಮಿಕ ವಿಚಾರಗಳು. ನಾವು ಶರಣರ ಅಭಿಮಾನದಿಂದ

ವಿಶ್ವದ ರಚನೆಗಾಗಿ ಬರೆದವುಗಳು ಎಂದು ಬಿಂಬಿಸುತ್ತಿದ್ದೇವೆಯೇ?

**ಅರುಣ :** ಈಗ ಕಾಡಶಿದ್ದೇಶ್ವರ ಶರಣರ ವನಚವಿಲ್ಲಿದೆ ಓದಿ ನಿಮ್ಮ ಅಭಿಪ್ರಾಯ ಬದಲಾಗುತ್ತವೆ ಮತ್ತು ಈ

ವಚನಗಳ ರಚನೆಯ ಉದ್ದೇಶ ಸ್ಪಷ್ಟವಾಗುತ್ತದೆ.

ಬ್ರಹ್ಮಾಂಡವು ಹೇಗೆ ಪುಟ್ಟಿತ್ತು ಪೇಳ್ವೆ ಕೇಳಿರಯ್ಯಾ.

ಆದಿ, ಅನಾದಿಯಿಂದತ್ತತ್ತಲಾದ ನಿರಾಕಾರ ಪರವಸ್ತು ತನ್ನ ಸ್ವರೂಪವ

ತಾನರಿಯದೆ ಅನಂತ ಕಲ್ಪಕಲ್ಪಾಂತರ ಇರ್ದು
ತನ್ನ ಸ್ವಲೀಲೆಯಿಂದ ತಾನೇ ಜಗತ್ಸೃಷ್ಟಿ ನಿಮಿತ್ತವಾಗಿ,
ನೆನವುದೋರಲು, ಆ ನೆನವು ನಿರ್ಧರವಾಗಿ ಚಿತ್ತೆನಿಸಿತ್ತು.
ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು.
ಆ ಚಿತ್ತು ತ್ರಿವಿಧಮಲ ಸಹವಾಗಿ ಚತುರ್ವಿಧವು ಘಟ್ಟಿಗೊಂಡು ಅಖಂಡ
ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.
ಆ ಮಹಾಲಿಂಗದಿಂದ ಆತ್ಮ ಜನನ ;
ಆತ್ಮದಿಂದ ಭಾವ ಪುಟ್ಟಿತ್ತು.
ಆ ಭಾವದಿಂದ ಮೋಹ ಪುಟ್ಟಿತ್ತು.
ಆ ಮೋಹವೆಂದಡೆ, ಮಾಯವೆಂದಡೆ, ಆಶೆಯೆಂದಡೆ, ಮನವೆಂದಡೆ
ಏಕಪರ್ಯಾಯಾರ್ಥ.
ಇಂತಪ್ಪ ಮೋಹದಿಂದ ತ್ರೈಲೋಕ ಮೊದಲಾಗಿ
ಚತುರ್ದಶಭುವನಂಗಳು ಪುಟ್ಟಿದವು.
ಆ ಚತುರ್ದಶಭುವನದ ಮಧ್ಯದಲ್ಲಿ ಇರುವೆ ಮೊದಲು ಆನೆ ಕಡೆಯಾಗಿ
ಎಂಬತ್ತುನಾಲ್ಕುಲಕ್ಷ ಜೀವರಾಶಿಯೊಳಗೆ
ದೇವ-ದಾನವ-ಮಾನವರು ಮೊದಲಾದ ಹೆಣ್ಣು-ಗಂಡು,
ಸಚರಾಚರಂಗಳೆಲ್ಲವು ಉತ್ಪತ್ತಿಯಾದವು.
ಇಂತೀ ಎಲ್ಲವು ಪರಶಿವನ ನೆನವುಮಾತ್ರದಿಂದ ಮರೀಚಿಕಾಜಲದಂತೆ,
ಸುರಚಾಪದಂತೆ, ತೋರಿ ತೋರಿ ಅಡಗುವವಲ್ಲದೆ
ನಿಜವಲ್ಲ, ಮಿಥ್ಯವೆಂದು ತಿಳಿದು ವಿಸರ್ಜಿಸಿ ಬಿಡುವಾತ ತಾನೇ
ಪರಶಿವನೆಂದು ತಿಳಿವುದಯ್ಯ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. / 316
--- ಕಾಡಸಿದ್ದೇಶ್ವರ

**ಗುರಣ್ಣ :** ಕಾಡಸಿದ್ದೇಶ್ವರ ಶರಣರು ಸ್ಪಷ್ಟವಾಗಿ ಇಲ್ಲಿ ಬ್ರಹ್ಮಾಂಡ ರಚನೆಯಾದ ವಿವರ ಹೇಳುವದಾಗಿ ತಿಳಿಸಿ

ಮನದಲ್ಲಿಯ ದ್ವಂದಗಳನ್ನು ನಿವಾರಿಸಿದ್ದಾರೆ. ಇವರೂ ಸಹ ಷಣ್ಮುಖಸ್ವಾಮಿಯರ

**"ಚಿನ್ನಾದ ಚಿದ್ಬಿಂದು ಚಿತ್ಕಳೆ ಆ ಮೂಲಚಿತ್ತು ಸಹವಾಗಿ ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು"**

ಎನ್ನುವ ಮಾತನ್ನು ಅನುಮೋದಿಸಿದ್ದಾರೆ.

ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು
ಎನ್ನುವದು ವಿಜ್ಞಾನಿಗಳು ಹೇಳಿದ "Singularity" ಯು "strings"
ಒಳಗೊಂಡ ಬಿಂದು ಎನ್ನುವದು ಸ್ಪಷ್ಟವಾಗುತ್ತದೆ.

**ಅರುಣ** : ಅದು ಸರಿ. ಆದರೆ ಶರಣರು ವಿಜ್ಞಾನಿಗಳ ವಿವರಣೆಗಿಂತ ಇನ್ನೂ ಹೆಚ್ಚಿನ ವಿವರಣೆ ಕೊಟ್ಟಿದ್ದಾರೆ
ಅದರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ ಎಂದೆನಿಸುತ್ತದೆ.

**ಗುರಣ್ಣ : "ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗ"** ವಿವರಿಸುವ ಇನ್ನಷ್ಟು ವಚನಗಳ
ಅಧ್ಯಯನ ಮಾಡುವಾ.

**ಅರುಣ** : ಸರಿ. ಇದು ದೇಶಿಕೇಂದ್ರ ಸಂಗನಬಸವಯ್ಯ ಅವರ ವಚನ.

ಮಹಾಬಯಲು ನಿರ್ವಯಲು ನಿರವಯ ನಿರಂಜನ ನಿಃಶೂನ್ಯ ನಿಃಕಲ
ಪರಶಿವಲಿಂಗವು ಆ ನೆನಹು ನಿರ್ಧರಿಸಿ ಚಿತ್ತೆನಿಸಿತ್ತು.
ಆ ಚಿತ್ತಿನಿಂದೆ ಚಿನ್ನಾದ ಚಿದ್ಬಿಂದು ಚಿತ್ಕಳೆಯುದಯವಾಗಿ, ಆ ಮೂಲ
ಚಿತ್ತುಗೂಡಿ, ಗಟ್ಟಿಗೊಂಡು
ಗೋಲಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.
ಆ ಮಹಾ ಚಿದ್ಭನಲಿಂಗಕ್ಕೆ ಆ ಚಿತ್ತ ಅಂಗವಾಗಿ ಶಕ್ತಿಯೆನಿಸಿತ್ತು ನೋಡಾ.
ಆ ಶಿವಶಕ್ತಿಗಳಿಂದೆ ಸಕಲಸಂಭ್ರಮವಾಯಿತ್ತು.
ಆ ಸಕಲಸಂಭ್ರಮೈಶ್ವರ್ಯದೊಳಗೆ ಆ ಶಿವನ ಅನಂತ ಸಹಸ್ರ
ಸಹಸ್ರಾಂಶದೊಳಗೊಂದಂಶ ಬೇರ್ಪಡಿಸಿ
ಚಿದಾತ್ಮನಾಗಿ ಕಾಯಾಶ್ರಯಗೊಂಡು ನಿಮರ್ಿಸಿದಲ್ಲಿ,ಆ ಕಾಯಸಂಗ
ಸಕಲನಿಃಕಲತತ್ವಾನ್ವಿತದಿಂದೆ
ತನ್ನಾದಿಯ ಮರೆದು ಪರಾದಿ ಸ್ವಯವಾಗಿ,
ಪಂಚಕೃತ್ಯಪರಿಯುತದಿಂದಿರ್ದ ಆತ್ಮನ ತೇರ್ಕಡೆಯಾಂತರವರಿದ
ಶಿವ ತಾನೆ ಸುಜ್ಞಾನಗುರುವಾಗಿ ಅಂತರಂಗದಲ್ಲಿ ಬೆಳಗಲು,ಆ
ಬೆಳಗಿನಿಂದೆ ಆತ್ಮನು ತನ್ನಾದಿ ಮಧ್ಯಾವಸಾನವನರಿದು,
ಮಿಥ್ಯ ಮಾಯಾಸಂಸಾರಸಂಬಂಧವನಳಿಸಿ ತನ್ನ ಕಾಂಬಾವಸ್ಥೆಯ
ಮುಂದೆ ಆ ಜ್ಞಾನಗುರುವೇ ಕ್ರಿಯಾಘನಗುರುವಾಗಿ ತೋರಲು
ಅಜ್ಞಾನಕಲಾತ್ಮನು ಗುರೋಪಾಸ್ತೆಯ ಮಾಡುವ ನಿಲವರಿದು
ಗುರುಕಾರುಣ್ಯದಿಂದಿಷ್ಟವನನುಗ್ರಹಿಸಿಕೊಡಲು ಆ ಲಿಂಗವಿಡಿದು
ಧಾರಣವಾಗಿ, ಚಿದ್ಭಸಿತ ರುದ್ರಾಕ್ಷಿಯ ಧರಿಸಿ, ಪರಮಪಂಚಾಕ್ಷರ
ಪ್ರಾಣವಾಗಿ,

ಆ ಗುರುಲಿಂಗಕ್ಕೆ ಭಕ್ತಾಂಗನೆಯಾಗಿ ತ್ರಿವಿಧಾಚಾರವನರಿದು,
ಷಟ್ಸ್ಥಲದಲ್ಲಿ ನಿಂದು ಚಿದಂಗ ಚಿಲ್ಲಿಂಗಭಾವದವಿರಳ ವಿನೋದಕ್ಕೆ
ಭಾವತ್ರಿಸ್ಥಲವನುಂಟುಮಾಡಿಕೊಂಡಾಚರಿಸುತಿರ್ದ ತಾನೆ ನಮ್ಮ
ಗುರುನಿರಂಜನ ಚನ್ನಬಸವಲಿಂಗವು. / 972

---- ದೇಶಿಕೇಂದ್ರ ಸಂಗನಬಸವಯ್ಯ

**ಗುರಣ್ಣ :** ಈ ವಚನದಲ್ಲಿ

1. ಮಹಾಬಯಲಿನಿಂದ "ಚಿಚ್ಛಕ್ತಿ ಉದಯಿಸಿತ್ತು.
1. ಮೊದಲು ಉದಯಯವಾದದ್ದು "ಚಿಚ್ಛಕ್ತಿ" ಎನ್ನುವದನ್ನು ಶರಣರು ಅನೇಕ ವಚನಗಳಲ್ಲಿ ಹೇಳಿದ್ದಾರೆ. "ಚಿಚ್ಛಕ್ತಿ" ಗೆ ಈ ವಚನದಲ್ಲಿ ಚಿತ್ತು ಎಂದಿದ್ದಾರೆ.
2. "ಚಿಚ್ಛಕ್ತಿ" ಯಿಂದ **ನಾದ, ಬಿಂದು ಮತ್ತು ಕಳೆ** ಇವು ಮೂರು ಒಟ್ಟುಗೂಡಿದವು.
3. ನಾದ, ಬಿಂದು ಮತ್ತು ಕಳೆ ಒಂದಾದ ವಸ್ತುವೇ ಮಹಾಲಿಂಗ.
4. **ಅಖಂಡ ಗೋಳಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗ (singularity)**
5. ಆ ಮಹಾಲಿಂಗ ಶಕ್ತಿಗಳು ಉದಯವಾದವು.
6. ಆ ಶಕ್ತಿಯಿಂದಲೇ ವಿಶ್ವ ನಿರ್ಮಾಣವಾಯಿತು.
7. ಎಲ್ಲಕ್ಕಿಂತ ಮುಖ್ಯವಾಗಿ Singularity ಉದಯವಾಗುವದ ಕ್ಕಿಂತ ಮೊದಲುಮೊದಲು
   "**ಮಹಾಬಯಲು ನಿರ್ವಯಲು ನಿರವಯ ನಿರಂಜನ ನಿಃಶೂನ್ಯ ನಿಃಕಲ ಪರಶಿವಲಿಂಗವು ಆ ನೆನಹು ನಿರ್ಧರಿಸಿ ಚಿತ್ತೆನಿಸಿತ್ತು**"
   ಎನ್ನುವಲ್ಲಿ ಮೊದಲೊಂದು ವಿಶ್ವವಿತ್ತು ಅಥವಾ ಬಯಲಿತ್ತು ಎನ್ನುವದನ್ನು ವಿವರಿಸುತ್ತಾರೆ,



ವಿಶ್ವ ರಚನೆಯ ಎಲ್ಲ ವಿವರಗಳು ಇಲ್ಲಿವೆ.

**ಅರುಣ :** ಇಲ್ಲಿಯ ವಿವರಗಳು ಸರಿಯಾಗಿವೆ. ಬಾಲಸಂಗಯ್ಯನವರ ವಚನದಲ್ಲಿ ಇದೇ ವಿವರಗಳಿವೆ.




**ಗುರಣ್ಣ :** ಅವರು ಘನಲಿಂಗದ ವರ್ಣನೆ

**" ಅಖಂಡ ಪರಿಪೂರ್ಣ ಅಪ್ರಮೇಯ ಅಗೋಚರ ಅಪ್ರಮಾಣ ಅನಂತ ತೇಜೋಮಯ"** ಅವರ ಪ್ರತಿಭೆಗೆ ಸಾಕ್ಷಿ. ಒಮ್ಮೆ ಓದಿದರೆ ಸಾಕು ವಿವರಣೆಯ ಅವಶ್ಯಕತೆಯೇ ಇಲ್ಲ.

**ಅರುಣ :** ಇನ್ನೂ ಕೆಲವು ವಚನಗಳು ಇಲ್ಲಿವೆ ಅವನ್ನು ಓದಿದರೆ ಸಾಕು ಎಲ್ಲ ಶರಣರ ಅಭಿಪ್ರಾಯ ಮನನವಾಗುತ್ತದೆ






**ಗುರಣ್ಣ:** ಈ ವಚನದಲ್ಲಿ ಷಣ್ಮುಖಸ್ವಾಮಿಗಳು ಬಿಂದು ರೂಪದಲ್ಲಿರುವ ಈ " ಎನ್ನುವ

**"ಘನ ಲಿಂಗ ಅನಂತಕೋಟಿ ಬ್ರಹ್ಮಾಂಡಗಳನೊಳಕೊಂಡಿದೆ"**

ಎನ್ನುವ ತತ್ವವವನ್ನು ವಿವರಿಸಿದ್ದಾರೆ. ಈ ತತ್ವವನ್ನು ಸಿದ್ಧಮಾಡಲು ವಿಜ್ಞಾನಿಗಳು

ಪರಿಸ್ರಮವಹಿಸಿ ಅನೇಕಾನೇಕ ಪ್ರಬಂಧಗಳನ್ನು ಬರೆದಿದ್ದಾರೆ.

ಇದುವರೆಗೆ ನನಗೆ **Time machine** ದಲ್ಲಿ ಇದ್ದೇನೆ ಎನ್ನುವದು ಮರತೇ ಹೋಗಿತ್ತು.

**Time machine Panel** ನಲ್ಲಿ ಒಂದು ಕೆಂಪು ದೀಪ ಪ್ರಜ್ವಲಿಸುವದು ಕಾಣಿಸಿತು ಮತ್ತು ಅದರ ಪಕ್ಕದಲ್ಲಿ ಕೆಲವು ಅಂಕಿಗಳಿದ್ದವು. ಅದು ಏನು ಎನ್ನುವ ಪ್ರಶ್ನೆ ಮನದಲ್ಲಿ ಮೂಡಿತು.

**ಅರುಣ :** ಅದು ಹೊರಗಿನ ತಾಪಮಾನವೆಷ್ಟಿದೆ ಎನ್ನುವದನ್ನು ಸೂಚಿಸುತ್ತದೆ. ಈಗ ಹೊರಗಿನ ತಾಪಮಾನ

100000000K ಇದೆ. ಸೂರ್ಯನ ಮಧ್ಯಭಾಗದಲ್ಲಿರುವ ತಾಪಮಾನ ಕ್ಕಿಂತ ಹೆಚ್ಚು.

**ಗುರಣ್ಣ:** ನನಗೆ

1) ಸೆಲ್ಸಿಯಸ್ ಪದ್ದತಿ 2)ಫ್ಯಾರನ್ ಹೀಟ್ 3) ಕೆಲ್ವಿನ್ ಪದ್ದತಿ

ವಿವರ ತಿಳಿಸಿ.

**ಅರುಣ :** ಈ ಚಿತ್ರ ಎಲ್ಲ ವಿವರ ಕೊಡುತ್ತದೆ.






**ಚಿತ್ರ ಬೇರೆ ಬೇರೆ ವಸ್ತುಗಳ ತಾಪಮಾನ ತೋರಿಸುತ್ತದೆ.**

ಮಾನವ ನಿರ್ಮಿತ ಅತೀ ಹೆಚ್ಚಿನ ತಾಪಮಾನ **Large Hadron Collider (LHC) at CERN around 5.5 trillion Kelvin(5500000000000K).** ಮಹಾಸ್ಫೋಟವಾಗುವ ಕಾಲದಲ್ಲಿ ತಾಪಮಾನ 10^32K **(10000000 ----000 32 ಸೊನ್ನೆಗಳು)** ಇರಬಹುದು ಎಂದು ಅಂದಾಜಿಸಲಾಗಿದೆ. **(At the end of the initial Big Bang event, the temperature of the universe is approximately T=10^32K).**

ವಿಜ್ಞಾನಿಗಳು ತಾಪಮಾನ ಯಾವ ಯಾವ ಅವಧಿಯಲ್ಲಿ ಎಷ್ಟಿತ್ತು ಎನ್ನುವ ವಿವರವನ್ನು ಕೊಟ್ಟಿದ್ದಾರೆ. ಈ ಚಿತ್ರ ಆ ವಿವರ ತಿಳಿಸುತ್ತದೆ.



**ಗುರಣ್ಣ:** ಶರಣರಿಗೆ ಆ ತಾಪಮಾನದಲ್ಲಿ ವಿಶ್ವದಲ್ಲಿರುವ ಕಣಗಳು ಯಾವ ರೂಪದಲ್ಲಿರಬಹುದು ಎನ್ನುವ ವಿವರ
ಗೊತ್ತಿತ್ತಾ?

**ಅರುಣ :** ವಚನಗಳನ್ನು ಅಧ್ಯಯನ ಮಾಡಿದ ಮೇಲೆ ಹೌದು ಎಂದು ಎಲ್ಲರೂ ಹೇಳಬೇಕು.

**ಗುರಣ್ಣ:** ಶರಣರಿಗೆ ಈ ಎಲ್ಲ ವಿವರ ಗೊತ್ತಿತ್ತಾ?

**ಅರುಣ :** ಶರಣರಿಗೆ ಇದುವರೆಗೆ ವಿಜ್ಞಾನಿಗಳಿಗೆ ಗೊತ್ತಿರುವದಕ್ಕಿಂತ ಹೆಚ್ಚಿನ ವಿವರ ಗೊತ್ತಿತ್ತು ಅನ್ನುವ ದಕ್ಕೆ ಈ
ವಚನವೇ ಸಾಕ್ಷಿ.
ಚನ್ನಬಸವಣ್ಣನವರ ವಚನದ ಒಂದು ಭಾಗ.




ಈ ವಚನದಲ್ಲಿ ಹೇಳಿರುವ ತತ್ವಗಳನ್ನು ವಿವರಿಸುವ
ಅನೇಕ ಸಂಶೋಧನ ಪ್ರಬಂಧಗಳು 2005 ರಿಂದ ಇತ್ತೀಚೆಗೆ ಪ್ರಕಟವಾಗಿವೆ.
ಉದಾಹರಣೆಗಾಗಿ ಒಂದು ಪ್ರಬಂಧದ ವಿವರ ಇಲ್ಲಿದೆ.






**ಚನ್ನಬಸವಣ್ಣವರು ತಮ್ಮ ವಚನದಲ್ಲಿ ಉಪಯೊಗಿಸಿದ “ಜಲ” ಶಬ್ದದ ಅರ್ಥ:** ವಿಶ್ವದಲ್ಲಿರುವ ದ್ರವ್ಯ ಸಾಮಾನ್ಯವಾಗಿ ಘನ, ದ್ರವ ಮತ್ತು ವಾಯು ಆಕಾರದಲ್ಲಿ ಇರಬಹುದು ಎನ್ನುವದು ನಮಗೆ ಗೊತ್ತು. ನೀರನ್ನು ಭರ್ಫ (ಘನರೂಪದಲ್ಲಿ), ನೀರು (ದ್ರವ ರೂಪದಲ್ಲಿ) ಮತ್ತು ಹಬೆ (ವಾಯು ರೂಪದಲ್ಲಿ) ಕಾಣಬಹುದು. ತಾಪಮಾನ ಹೆಚ್ಚಾದಾಗ ಭರ್ಫ ನೀರಾಗುತ್ತದೆ ಇನ್ನಷ್ಟು ತಾಪಮಾನ ಹೆಚ್ಚಾದಾಗ ನೀರು ಆವಿಯಾಗಿ ಪರಿವರ್ತನೆ ಆಗುತ್ತದೆ. **ಇನ್ನೂ ತಾಪಮಾನ ಹೆಚ್ಚಾದರೆ ಆವಿ ಏನಾಗುತ್ತದೆ?**
ಕೆಳಗಿನ ಚಿತ್ರಗಳು ಈ ಪ್ರಶ್ನೆಗೆ ಉತ್ತರ ಕೊಡುತ್ತವೆ.






ಮಹಾಪ್ರಳಯದ ಕಾಲದಲ್ಲಿ ಅತೀ ಹೆಚ್ಚಿನ ತಾಪಮಾನದಲ್ಲಿ ಅಲ್ಲಿದ್ದ ಕಣಗಳು ಯಾವ ರೂಪ ಪಡೆಯುತ್ತವೆ?

ಚನ್ನಬಸವಣ್ಣನವರು ಅದಕ್ಕೆ ತಮ್ಮ ವಚನಭಾಗದಲ್ಲಿ ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ.
ಆ ತಾಪಮಾನದಲ್ಲಿ "ಜಲ" ಹುಟ್ಟಿ ಪ್ರಳಯವಾಗಿ ಸ್ವಲ್ಪ ತಾಪಮಾನ ಕಮ್ಮಿಯಾದಮೇಲೆ ಲಿಂಗಾಕಾರವಾದ ಒಂದು ಗುಳ್ಳೆಯಾಯಿತು ಎನ್ನುವ ವಿವರಣೆ ಕೊಟ್ಟಿದ್ದಾರೆ.




ಚನ್ನಬಸವಣ್ಣವರ ವಚನವನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗುವ ಕೆಲವು ಪ್ರಭಂಧಗಳು.


1. **J.-E. Alam, S. Sarkar, P. Roy, T. Hatsuda, and B. Sinha, "Thermal photons and lepton pairs from quark gluon plasma and hot hadronic matter,"** ***Annals of Physics*****, vol. 286, no. 2, pp. 159–248, 2000.**
2. **Cosmological Models with Strange Quark Matter Attached to String Cloud in Self-creation Theory V. U. M. Rao* and D. Neelima Department of Applied Mathematics, Andhra University, Visakhapatnam, India**
3. **M. Gyulassy, P. Levai, and I. Vitev, "Jet quenching in thin quark-gluon plasmas I: formalism,"** ***Nuclear Physics B*****, vol. 571, pp. 197–233, 2000.**

4. **B. G. Zakharov, "On the energy loss of high energy quarks in a finite-size quark-gluon plasma," *JETP Letters*, vol. 73, no. 2, pp. 49–52, 2001.**
5. **A. K. Dutt-Mazumder, J. Alam, P. Roy, and B. Sinha, "Stopping power of hot QCD plasma," *Physical Review D*, vol. 71, no. 9, Article ID 094016, 9 pages, 2005.**
6. **M. J. Tannenbaum, "Recent results in relativistic heavy ion collisions: from 'a new state of matter' to 'the perfect fluid'," *Reports on Progress in Physics*, vol. 69, no. 7, 2005.View at: Publisher Site | Google Scholar**
7. **P. Arnold, J. Lenghan, G. D. Moore, and L. G. Yaffe, "apparent thermalization due to plasma instabilities in the quark-gluon plasma," *Physical Review Letters*, vol. 94, no. 7, Article ID 072302, 4 pages, 2005.**
8. **P. Romatschke and M. Stricland, "Collisional energy loss of a heavy quark in an anisotropic quark-gluon plasma," *Physical Review D*, vol. 71, no. 12,**
9. **J. Ruppert and B. Muller, "Waking the colored plasma," *Physics Letters B*, vol. 618, no. 1–4, pp. 123–130, 2005.**
10. **P. Chakraborty, M. G. Mustafa, and M. H. Thoma, "Wakes in the quark-gluon plasma," *Physical Review D*, vol. 74, no. 9, Article ID 094002, 16 pages, 2006.**
11. **M. Mandal and P. Roy, "Wake in anisotropic quark-gluon plasma," *Physical Review D*, vol. 86, no. 11, Article ID 114002, 9 pages, 2012.View at: Publisher Site | Google Scholar**
12. **J. P. Blaizot and E. Iancu, "The quark-gluon plasma: collective dynamics and hard thermal loops," *Physics Reports*, vol. 359,**

no. 5-6, pp. 155–528, 2002.




ಮಹಾಸ್ಫೋಟ ಆದ ಘಟನೆಯ ನಂತರ ದಿಂದ ಇಂದಿನ ವಿಶ್ವ ರಚನೆಯಾಗುವರೆಗೆ ನಡೆದ ವಿವಿಧ ಹಂತಗಳನ್ನು **ಘನಲಿಂಗದೇವ** ತಮ್ಮ ವಚನದಲ್ಲಿ ವಿವರಿಸಿದ್ದಾರೆ. ಅವರು ಮಹಾಲಿಂಗ ಐದು ಹಂತಗಳಲ್ಲಿ ವಿಕಾಸವಾಯಿತು ಎಂದು ವಿವರಿಸಿದ್ದಾರೆ.

ಅವರು ವಿವರಿಸಿದ ಪಂಚಲಿಂಗ ಹಂತಗಳು

(1) ಪ್ರಸಾದಲಿಂಗ

(2) ಜಂಗಮಲಿಂಗ

(3) ಶಿವಲಿಂಗ

(4) ಗುರುಲಿಂಗ

(5) ಆಚಾರಲಿಂಗವೆಂದು




ವಿಜ್ಞಾನಿಗಳ ವಿವರಣೆಯೂ ಇದೇ ಆಗಿದೆ.
ನಾವು ಪ್ರತಿ ಹಂತದಲ್ಲಿ ನಡೆದ ಘಟನಾವಳಿಗಳ ವಿವರ ಗಮನಿಸೋಣ.
**ಘನಲಿಂಗ** (Singularity) ರಚನೆಯಾಗುವ ಮುನ್ನ ಇದ್ದ ಸನ್ನಿವೇಶದಲ್ಲಿ ಇದ್ದ ವಾತಾವರಣವನ್ನು ಹಲವು ಶರಣರು ವಿವರಿಸಿದ್ದಾರೆ. ನಾವು ಅವರ ವಚನಗಳಲ್ಲಿರುವ ವಿವರ ನೋಡೋಣ.

**ವಚನ 1: ಸಂಗಮೇಶ್ವರದ ಅಪ್ಪಣ್ಣ**

> ಆದಿ ಅನಾದಿಯೆಂಬವು ನಾದಕ್ಕೆ ಬಾರದ ಮುನ್ನ, ಶೂನ್ಯ ನಿಃಶೂನ್ಯ ಸುರಾಳವೆಂಬವು ಸುಳುಹುದೋರದ ಮುನ್ನ,
> ಬೆಳಗು ಕತ್ತಲೆಯಿಲ್ಲದ ಮುನ್ನ, ಅಳಿವು ಉಳಿವು ಸುಳುವು ಸೂತ್ರ ಜಂತ್ರ ಜಡ ಅಜಡವಿಲ್ಲದ ಮುನ್ನ,
> ಕಡೆ ನಡು ಮೊದಲಿಲ್ಲದ ಅಡಿಯಲಾಧಾರ ಹಿಡಿವರೆ ರೂಹಿಲ್ಲದ ಮುನ್ನ,
> ಒಡೆಯನಿಲ್ಲ ಬಂಟನಿಲ್ಲ ನಡೆಯಿಲ್ಲ ನುಡಿಯಿಲ್ಲ ಬೆಡಗಿಲ್ಲ ಒಡಲಿಲ್ಲದ ಮುನ್ನ, ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯರು ತಲೆದೋರದ ಮುನ್ನ,
> ದೇವನಿಲ್ಲ ಭಕ್ತನಿಲ್ಲದ ಮುನ್ನ, ನೀನು ನಾನುಯಿಲ್ಲದ ಮುನ್ನ, ಆಕಾರ ನಿರಾಕಾರವೇನೂಯಿಲ್ಲದ ಮುನ್ನ,

ತಾನು ತಾನೆಂಬ ತಲ್ಲಣವಿಲ್ಲದಂದು, ಆ ಬಟ್ಟಬಯಲ ಬ್ರಹ್ಮವೆ ಘಟ್ಟಿಯಾದ ಘನವೆಂತೆಂದಡೆ: ನಿಮ್ಮನುವ ನೀವರಿದ ಘನಮಹಿಮರು ತಿಳಿದು ನೋಡಿರಣ್ಣ.
ಆ ಬಟ್ಟಬಯಲೆಂದಡಾರು ಬಸವ, ಆ ಬಸವನೆಂದಡಾರು ಬಟ್ಟಬಯಲು.
ಆ ಬ್ರಹ್ಮನೆಂದಡಾರು ಬಸವ, ಬಸವನೆಂದಡಾರು ಬ್ರಹ್ಮ.
ಅಂತಪ್ಪ ಬಸವನ ಆ ಮೂಲವ ಬಲ್ಲವರು ನೀವು ಕೇಳಿರಣ್ಣ.
ಬಸವ ಎಂಬ ಮೂರಕ್ಷರವೆ ಮೂಲಪ್ರಣವ.
ಅದೆಂತೆಂದಡೆ:ಬಯೆಂಬುದೆ ಚಿನ್ನಾದ ಆಕಾರವಾಯಿತ್ತು, ಸಯೆಂಬುದೆ ಚಿದ್ಬಿಂದುವಾಯಿತ್ತು,
ಮತ್ತಂ ಬಯೆಂಬುದೆ ಅಕಾರವಾಯಿತ್ತು, ಸ ಎಂಬುದೆ ಉಕಾರವಾಯಿತ್ತು.
ವಾ ಯೆಂಬುದೆ ಚಿತ್ಕಳೆಯಾಯಿತ್ತು.
ಮತ್ತಂ ಬಯೆಂಬುದೆ ಆಕಾರವಾಯಿತ್ತು, ಸ ಎಂಬುದೆ ಉಕಾರವಾಯಿತ್ತು.
ವಾಯೆಂಬುದೆ ಮಕರವಾಯಿತ್ತು.
ಮತ್ತೆ ಬಯೆಂಬುದೆ ನಾದವಾಯಿತ್ತು, ಸಯೆಂಬುದೆ ಬಿಂದುವಾಯಿತ್ತು, ವಾಯೆಂಬುದೆ ಕಳೆಯಾಯಿತ್ತು.
ಮತ್ತೆ ಬ ಎಂಬುದೆ ಗುರುವಾಯಿತ್ತು, ಸಯೆಂಬುದೆ ಅಂಗವಾಯಿತ್ತು,ವಾ ಎಂಬುದೆ ಜಂಗಮವಾಯಿತ್ತು.
ಬ ಎಂಬ ನಾದವೆತ್ತಲು, ಸ ಎಂಬ ಬಿಂದು ಕೂಡಲು, ವಾಯೆಂಬ ಕಳೆ ಬೆರೆಯಲು, ಗೋಳಕಾಕಾರವಾಗಿ ಆದಿಪ್ರಣಮವೆನಿಸಿತ್ತು.
ಆದಿಪ್ರಣಮ, ಅನಾದಿಪ್ರಣಮ, ಅಂತ್ಯಪ್ರಣಮವೆಂಬವು ನಮ್ಮ ಬಸವಣ್ಣನ ಸ್ಥೂಲ ಸೂಕ್ಷ್ಮ ಕಾರಣ ಕಾಣಿರೆ.
ಇಂತಪ್ಪ ಬಸವಣ್ಣ ಬಯಲಬ್ರಹ್ಮವನೆ ಮೆಯಿದು, ಮೆಲುಕಿರಿದು ಗೋಮಯವಿಕ್ಕಲು ಪೃಥ್ವಿಯಾಯಿತ್ತು.
ಇಂತಪ್ಪ ಬಸವಣ್ಣ ಜಲವ ಬಿಡಲು ಅಪ್ಪುಮಯವಾಯಿತ್ತು.
ಇಂತಪ್ಪ ಬಸವಣ್ಣನ ತೇಜವೆ ಅಗ್ನಿಯಾಯಿತ್ತು.
ಇಂತಪ್ಪ ಬಸವಣ್ಣನ ಉಚ್ಛ್ವಾಸ ನಿಶ್ವಾಸವೆ ವಾಯುವಾಯಿತ್ತು.
ಇಂತಪ್ಪ ಬಸವಣ್ಣನ ಶಬ್ದವೆ ಆಕಾಶವಾಯಿತ್ತು.
ಇಂತಪ್ಪ ಬಸವಣ್ಣನ ಕಂಗಳ ಬೆಳಗೆ ಚಂದ್ರ ಸೂರ್ಯರಾದರು.
ಇಂತಪ್ಪ ಬಸವಣ್ಣನ ಬುದ್ದಿಯೆ ಆತ್ಮವೆನಿಸಿ, ಅಷ್ಟತನುಮೂರ್ತಿಯೆ ತನುವೆನಿಸಿ, ಪಿಂಡ ಬ್ರಹ್ಮಾಂಡ ಕೋಟ್ಯಾನುಕೋಟಿ ಅಂಡಪಿಂಡಾಂಡಂಗಳಿಗೆ ಒಡಲಾಗಿ, ಅಡಿಮುಡಿಗೆ ತಾನೆ ಆದಿಯಾಗಿ, ಸರ್ವವೂ ನಮ್ಮ ಬಸವಣ್ಣನ ಒಡಲಲ್ಲಿ ಹುಟ್ಟುತ್ತ ಬೆಳೆಯುತ್ತ ಅಳಿವುತಿಪ್ಪವು ಕಾಣಿರೆ.

ಇಂತಪ್ಪ ಸಕಲಪ್ರಾಣಿಗಳಿಗೆ ನಮ್ಮ ಬಸವಣ್ಣನ ಗೋಮಯದಲ್ಲಿ ಹುಟ್ಟಿದ
ಪೃಥ್ವಿಯೆ ಪದಾರ್ಥವೆ ಆದಿಜಲದಿಂದ ಹುಟ್ಟಿದ ಉದಕವೆ ಸಾರ.
ತೇಜದಿಂದ ಹುಟ್ಟಿದ ಅಗ್ನಿಯೆ ಕಳೆ.
ಉಚ್ಛ್ವಾಸ ನಿಶ್ವಾಸದಿಂದ ಹುಟ್ಟಿದ ಚಂದ್ರಸೂರ್ಯರೇ ಅರಿವು ಮರವೆ.
ಬುದ್ಧಿಯಿಂದ ಹುಟ್ಟಿದ ಆತ್ಮನೆ ಚೈತನ್ಯಾತ್ಮ.
ಇಂತೀ ಸರ್ವಪ್ರಾಣಿಗಳಿಗೆ ನಮ್ಮ ಬಸವಣ್ಣನೆ ಆದಿ ಕಾಣಿರೇ.
ಆದಿಯಲ್ಲಿ ಹುಟ್ಟಿ, ಮಧ್ಯದಲ್ಲಿ ಬೆಳೆದು, ಅಂತ್ಯದಲ್ಲಿ ಲಯವನೆಯ್ದಿದರೆ,
ಮತ್ತೆ ನಿಲ್ಲುವದಕ್ಕೆ ನಮ್ಮ ಬಸವಣ್ಣನೆ ಆದಿ ಕಾಣಿರೆ.
ಇಂತೀ ಒಳ ಹೊರಗೆ ಕೈಕೊಂಬರೆ, ದೇವರು ಬೇರೊಬ್ಬರುಂಟಾದರೆ ಬಲ್ಲರೆ ನೀವು ಹೇಳಿ ತೋರಿರೆ.
ಅಲ್ಲದಿರ್ದರೆ ನಿಮ್ಮ ವೇದಾಗಮಶಾಸ್ತ್ರಪುರಾಣಗಳ ಕೈಯಲ್ಲಿ ಹೇಳಿಸಿರೆ.
ಇಂತೀ ಅನಾದಿಸಂಸಿದ್ಧ ಬಟ್ಟಬಯಲಬ್ರಹ್ಮವೆ ಬಸವನೆಂಬುದಂ
ಕಾಣುತಿದರ್ು ಕೇಳುತಿದರ್ು ಹೇಳುತಿದರ್ು ಅರಿದಿದರ್ು,
ಮತ್ತೆ ಕೀಳುದೈವಂಗಳನಾರಾಧಿಸಿ ಅರ್ಚನೆ ಪೂಜೆಯ ಹಲವು ಚಂದದಲ್ಲಿ
ಮಾಡಿ, ಹಲವು ಜಾತಿ ಹಲವುದರುಶನವೆನಿಸಿಕೊಂಡುಸ
ಹೊಲಬುದಪ್ಪಿದಿರಿ, ಹುಲುಮನುಜರಿರಾ.
ಇನ್ನಾದರೂ ಅರಿದು ನೆನದು ಬದುಕಿ, ನಮ್ಮ ಬಸವಪ್ರಿಯ
ಕೂಡಲ[ಚೆನ್ನ]ಸಂಗಮದೇವನ ಶ್ರೀಪಾದಪದ್ಮವ. / 18

ಸಂಗಮೇಶ್ವರದ ಅಪ್ಪಣ್ಣನವರು **ಘನಲಿಂಗ (Singularity)** ಯಾವಾಗ ರಚನೆಯಯಿತು ಎನ್ನುವದನ್ನು ವಿವರಿಸಿದ ರೀತಿ ಅಸಾಮಾನ್ಯ. ಇದು ಅವರಿಗಿದ್ದ ವಿಷಯ ಜ್ಞಾನ ಮತ್ತು ಅವರಿಗಿದ್ದ ಕಾವ್ಯ ಪ್ರತಿಭೆ ಅವರ್ಣನೀಯ.

1. **ಆದಿ ಅನಾದಿಯೆಂಬವು ನಾದಕ್ಕೆ ಬಾರದ ಮುನ್ನ,**
2. **ಶೂನ್ಯ ನಿಃಶೂನ್ಯ ಸುರಾಳವೆಂಬವು ಸುಳುಹುದೋರದ ಮುನ್ನ,**
3. **ಬೆಳಗು ಕತ್ತಲೆಯಿಲ್ಲದ ಮುನ್ನ,**
4. **ಅಳಿವು ಉಳಿವು ಸುಳುವು ಸೂತ್ರ ಜಂತ್ರ ಜಡ ಅಜಡವಿಲ್ಲದ ಮುನ್ನ,**
5. **ಕಡೆ ನಡು ಮೊದಲಿಲ್ಲದ ಅಡಿಯಲಾಧಾರ ಹಿಡಿವರೆ ರೂಹಿಲ್ಲದ ಮುನ್ನ,**
6. **ಒಡೆಯನಿಲ್ಲ ಬಂಟನಿಲ್ಲ ನಡೆಯಿಲ್ಲ ನುಡಿಯಿಲ್ಲ ಬೆಡಗಿಲ್ಲ ಒಡಲಿಲ್ಲದ ಮುನ್ನ,**
7. **ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯರು ತಲೆದೋರದ ಮುನ್ನ,**

8. **ದೇವನಿಲ್ಲ ಭಕ್ತನಿಲ್ಲದ ಮುನ್ನ,**
9. **ನೀನು ನಾನುಯಿಲ್ಲದ ಮುನ್ನ,**
10. **ಆಕಾರ ನಿರಾಕಾರವೇನೂಯಿಲ್ಲದ ಮುನ್ನ,**
11. **ತಾನು ತಾನೆಂಬ ತಲ್ಲಣವಿಲ್ಲದಂದು,**

**ಮುಂದೆ “ಆ ಬಟ್ಟಬಯಲ ಬ್ರಹ್ಮವೆ ಘಟ್ಟಿಯಾದ ಘನವೆಂತೆಂದಡೆ” ಎನ್ನುವಲ್ಲಿ ಅನೇಕ ವಿವರ ಕೊಟ್ಟಿದ್ದಾರೆ.**

<table>
<tr>
<td>
</td>
<td>ಕಾಲ ಸು.1800. 'ಝೇಂಕಾರ ನಿಜಲಿಂಗ ಪ್ರಭುವೆ' ಅಂಕಿತದಲ್ಲಿ 778 ವಚನಗಳು ದೊರೆತಿವೆ. ಇವುಗಳನ್ನು ೧೮ ಸ್ಥಲಗಳ ಅಡಿಯಲ್ಲಿ ಸಂಕಲಿಸಲಾಗಿದ್ದು, ಈ ಕೃತಿಗೆ 'ನಿರಾಳ ಮಂತ್ರಗೋಪ್ಯ' ಎಂದು ಕರೆಯಲಾಗಿದೆ. ಯೋಗ ರಹಸ್ಯವನ್ನು ಬೆಡಗಿನ ನುಡಿಗಳಲ್ಲಿ ಹೇಳುವುದು ಈ ವಚನಗಳ ಉದ್ದೇಶವಾಗಿದೆ. ವಚನಗಳಲ್ಲಿ ಬೆಡಗಿನ ಬಳಕೆ ಹೆಚ್ಚು.</td>
</tr>
</table>

**ಪೃಥ್ವಿ ಅಪ್ಪು, ತೇಜ, ವಾಯು, ಆಕಾಶ, ಆತ್ಮ, ರವಿ, ಶಶಿ, ನಾದ ಬಿಂದು ಕಲೆಗಳಿಲ್ಲದಂದು (ಸಕಲ ನಿಃಕಲಗಳು ಇಲ್ಲದಂದು, ಪರಾಪರಗಳಿಲ್ಲದಂದು ಎಂದು ಇನ್ನೊಂದು ವಚನದಲ್ಲಿ ಹೇಳಿದ್ದಾರೆ) ಘನಲಿಂಗ ರಚನೆಯಾಯಿತು ಎನ್ನುವದನ್ನು ವಿವರಿಸಿ ಘನಲಿಂಗ ನಿಃಶೂನ್ಯನಾಗಿರ್ದ ನೋಡಾ ಎನ್ನುವದನ್ನು ವಿವರಿಸಿದ್ದಾರೆ.**




**ವಚನ : ಅಲ್ಲಮಪ್ರಭುದೇವರು ವಚನ**

| | |
|---|---|
| <br> | ಅನುಭವ ಮಂಟಪದ ಅಧ್ಯಕ್ಷರಾಗಿ ಶರಣರಿಗೆ ಮಾರ್ಗದರ್ಶನ ಮಾಡಿದ್ದು ಅಷ್ಟೇ ಅಲ್ಲ ಅವರಿಗೆ ತತ್ವಗಳನ್ನು ವಿವರಿಸಿ ವಚನ ರಚಿಸಲು ಮಾರ್ಗದರ್ಶನ ಮಾಡಿದರು ಎನ್ನುವದಕ್ಕೆ ಈ ವಚನ ಒಂದು ಉದಾಹರಣೆ ಈ ವಚನ. |

**“ಅಯ್ಯ**

**1. ತತ್ತ್ವ ವಿತತ್ತ್ವಗಳಿಲ್ಲದಂದು,**
**2. ಪ್ರಕೃತಿ ಪುರುಷರಿಲ್ಲದಂದು,**
**3. ಜೀವ_ಪರಮರೆಂಬ ಭಾವ ತಲೆದೋರದಂದು,**
**4. ಏನೂ ಏನೂ ಇಲ್ಲದಂದು**
**ಬಯಲು ಬಲಿದು ಒಂದು ಬಿಂದುವಾಯಿತ್ತು ನೋಡಾ. " ಎನ್ನುವ ವಚನ ಭಾಗದಲ್ಲಿ ಎರಡು ಮುಖ್ಯವಾದ ತತ್ವಗಳನ್ನು ಪ್ರತಿಪಾದಿಸಿದ್ದಾರೆ.**

1. **ಘನಲಿಂಗ (**Singularity) ರಚನೆಯಾಗುವ ಮುನ್ನ ಇದ್ದ ವಿಶ್ವದ ಸ್ಥಿತಿಯ ವಿವರಣೆ.
2. **ಘನಲಿಂಗ (**Singularity) ಯು ರಚನೆ ಹೇಗೆ ರಚನೆಯಾಯಿತು ಎನ್ನುವದರ ವಿವರಣೆ

"**ಏನೂ ಏನೂ ಇಲ್ಲದಂದು ಬಯಲು ಬಲಿದು ಒಂದು ಬಿಂದುವಾಯಿತ್ತು ನೋಡಾ."**

**ಎನ್ನುವ ಮಾತಿನಲ್ಲಿ ವಿಜ್ಞಾನಿಗಳಿಗೂ ಮಾರ್ಗದರ್ಶನ ಮಾಡಿದ್ದಾರೆ. ಈ ದಿಶೆಯಲ್ಲಿಯೇ ಕಳೆದೆರಡು ಶತಮಾನದಲ್ಲಿ ಸಂಶೋಧನೆಗಳು ನಡೆದಿವೆ.**




How The Big Crunch Theory Works
Open Universe
Maximum Expansion
Closed Universe
EXPANSION
ಬಯಲು
ಬಲಿದು ಒಂದು ಬಿಂದುವಾ
ಶೂನ್ಯನಾಗಬಲ್ಲ
TIME ನಿಃಶೂನ್ಯನಾಗಬಲ್ಲ
, ಶೂನ್ಯನಿಃಶೂನ್ಯವೆರಡೊಂದಾಗಬಲ್ಲ
BIG BANG
BIG CRUNCH


Shrinking of Univer
According to the Big Crunch Theory, o
will come when Dark Energy will wee
and the gravitational force will win o
Dark Energy due to which the expansi
the universe will stop and the universe
start shrinking and the whole universe
be an infinitely dense point!

ವಿಜ್ಞಾನಿಗಳು ಈ ವಿಷಯವಾಗಿ ಅನೇಕ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ.

**The Big Crunch**
*by David Goodstein*
*NCAR 48 Symposium, Portland, OR September 19, 199*
According to modern cosmology, the universe began with a big bang about 10 billion years ago, and it has been expanding ever since. If the density of mass in the universe is great enough, its gravitational force will cause that expansion to slow down and reverse, causing the universe to fall back in on itself. Then the universe will end in a cataclysmic event known as "the Big Crunch."

**The Big Crunch**
*by David Goodstein*
*NCAR 48 Symposium, Portland, OR September 19, 199*
According to modern cosmology, the universe began with a big bang about 10 billion years ago, and it has been expanding ever since. If the density of mass in the universe is great enough, its gravitational force will cause that expansion to slow down and reverse, causing the universe to fall back in on itself. Then the universe will end in a cataclysmic event known as "the Big Crunch."




**ಅರುಣ :** ಇನ್ನೂ **Singularity** ಬಗ್ಗೆ ಸರಿಯಾದ ವಿವರ ಅರಿಯುವ ಪ್ರಯತ್ನ ವಿಜ್ಞಾನಿಗಳು ಪ್ರ ಯತ್ನಿಸುತ್ತಿದ್ದಾರೆ. **2020** ರ ನೊಬೆಲ್ ಪ್ರಶಸ್ತಿ **(Stephen Hawking** ರ ಜೊತೆಗೆ ಸಂಶೊಧನೆ **1995** ರಲ್ಲಿ ಪ್ರಸ್ತುತಪಡಿಸಿದ್ದ **Penrose–Hawking singularity theorems) Roger Penrose** ರವರಿಗೆ ದೊರಕಿರುವದು ಈ ವಿಷಯವಾಗಿ ಇನ್ನೂ ಬಹಳ ತಿಳಿಯಬೇಕಾಗಿದೆ ಎನ್ನುವದರ ಸೂಚಕ.

| | |
|---|---|
|  | **The Penrose–Hawking singularity theorems (after Roger Penrose and Stephen Hawking) are a set of results in general relativity that attempt to answer the question of when gravitation produces singularities.** |

**Penrose would go on to win the 2020 Nobel Prize in Physics "for the discovery that black hole formation is a robust prediction of the general theory of relativity," which he shared with Reinhard Genzel and Andrea Ghez.**

**ಗುರಣ್ಣ: ಘನ ಲಿಂಗ ಮತ್ತು singularity ಸಮಾನ ಪದಗಳೇ?**

**ಅರುಣ:** ಎನ್ನುವ ಪ್ರಶ್ನೆಗೆ ಉತ್ತರ ಪಡೆಯುವದಕ್ಕಿಂತ ಮೊದಲು ಶರಣರು ವಚನಗಳಲ್ಲಿ ಹೇಳಿದ ವಿಚಾರಗಳನ್ನು ಅರಿತು ಆಮೇಲೆ

ವಿಜ್ಞಾನಿಗಳು ಕೊಟ್ಟ ವಿವರಣೆಗಳ ಜೊತೆ ತುಲನಾತ್ಮಕ ವಿವರಣೆ ಅರಿಯೋಣ.

“ಘನ ಲಿಂಗ” ಎಂಬ ಪದವನ್ನು 56 ವಚನಕಾರರು 345 ವಚನಗಳಲ್ಲಿ 394 ಕಡೆಗಳಲ್ಲಿ ಉಪಯೋಗಿಸಿರುವದು ಕಂಡುಬರುತ್ತದೆ.

ಶರಣರು 12 ನೇಯ ಶತಮಾನ ದಿಂದ 18 ನೇಯ ಶತಮಾನದವರೆಗೆ ರಚಿಸಿದ ವಚನಗಳಲ್ಲಿ ಪ್ರತಿಪಾದಿಸಿದ ವಚನಗಳಲ್ಲಿ ಕಂಡುಬರುವ ಸಾಮ್ಯತೆಗಳೇನು? ಅಥವಾ ವಿರೋಧಾಭಾಸಗಳೇನು? ಎನ್ನುವ ಪ್ರಶ್ನೆಗಳು ಮೂಡುವದು ಸಹಜ.

ಈ ಪ್ರಶ್ನೆಗೆ ಉತ್ತರಿಸುವ ಮೊದಲು ಶರಣರ ವಚನಗಳನ್ನು ಒದಿ ಅರ್ಥಮಾಡಿಕೊಳ್ಳೋಣ. ಆಮೇಲೆ ಈ ವಿಷಯಯವಾಗಿ ವೈಜ್ಞಾನಿಕ ಅರ್ಥವಿದೆಯಾ ಎನ್ನುವದನ್ನು ವಿಚಾರಿಸೋಣ.

ಶರಣರ ಕೆಲವು ವಚನಗಳು ಇಲ್ಲಿವೆ







**ವಚನ 4:**




ಈತ ತೋಂಟದ ಸಿದ್ಧಲಿಂಗರ ಶಿಷ್ಯ. ಸುತ್ತೂರು ಮಠಾಧೀಶ ಕಾಲ ೧೬ನೇಯ ಶತಮಾನ ಕಗ್ಗೆರೆಯಲ್ಲಿ ಐಕ್ಯ. 'ಘನಲಿಂಗಿಯ ಮೋಹದ ಮಲ್ಲಿಕಾರ್ಜುನ" ಅಂಕಿತದಲ್ಲಿ ೬೬

<table>
<tr><td></td><td>ವಚನಗಳು ದೊರೆತಿವೆ. ಈತನ ವೃತ್ತಿ ಪ್ರತಿಭಾಸ್ಪರ್ಶದಿಂದ ತನಗೆ ತಾನೇ ಕಾವ್ಯತ್ವವನ್ನು ಪಡೆದುಕೊಳ್ಳುತ್ತದೆ. ಶರಣಸತಿ ಲಿಂಗಪತಿ ಭಾವದಲ್ಲಿ ಶೃಂಗಾರ ಪ್ರಧಾನವಾಗಿ ಮೂಡಿಬಂದಿದೆ.</td></tr>
<tr><td>
</td><td>ಗುರು ಅಖಂಡೇಶ್ವರ. ಜೀವಿತ ಕಾಲಾವಧಿ ೧೬೩೯ ರಿಂದ ೧೭೧೧.. ಷಣ್ಮುಖಸ್ವಾಮಿಗಳು ೭೧೭ ವಚನ, 'ಅಖಂಡೇಶ್ವರ ಜೋಗುಳ ಪದ' (೪೧ ಚೌಪದಿ), 'ಪಂಚ ಸಂಜ್ಞೆಗಳಪದ' (೭ ಪರಿವರ್ಧಿನಿ ಷಟ್ಪದಿ), 'ನಿರಾಳ ಸದ್ಗುರು ಸ್ತೋತ್ರ' (ಭಾಮಿನಿ ಷಟ್ಪದಿ)- ಎಂಬ ಕೃತಿಗಳನ್ನು ರಚಿಸಿದ್ದಾರೆ.</td></tr>
</table>

| **ವಚನ 6:** ಬಾಲಸಂಗಯ್ಯ ಅಪ್ರಮಾಣದೇವನ ವಚನ | |
| --- | --- |
| **ಆದಿ ಅನಾದಿಯಿಲ್ಲದಂದು ತಾನೆ ಪ್ರಣವಸ್ವರೂಪನು.<br>ಅನಂತ ಬ್ರಹ್ಮಾಂಡವಿಲ್ಲದಂದು ತಾನೆ ನಾದಬಿಂದುಕಲಾತೀತನು.<br>ಜೀವಪರಮರಿಲ್ಲದಂದು ತಾನೆ ನಾಮ ಸ್ವರೂಪ ಕ್ರಿಯಾತೀತನು.<br>ಸಚರಾಚರಂಗಳೆಲ್ಲಾ ರಚನೆಗೆ ಬಾರದಂದು ತಾನೆ ಅಖಂಡಪರಿಪೂರ್ಣ ಅಪ್ರಮೇಯ ಅಗೋಚರ ಅಪ್ರಮಾಣ ಅನಂತ ತೇಜೋಮಯವಾಗಿಹ ಮಹಾಘನಲಿಂಗ ನೋಡಾ,<br>ಅಪ್ರಮಾಣಕೂಡಲಸಂಗಮದೇವಾ.<br>/ 380** | ಈತ ಬಸವೋತ್ತರಯುಗದ ಮಹತ್ವದ ವಚನಕಾರ, ತೋಂಟದ ಸಿದ್ದಲಿಂಗರಿಗಿಂತ ಪೂರ್ವದವನಾಗಿರಬಹುದಾದ ಈತನ ಬದುಕಿಗೆ ಸಂಬಂಧಿಸಿದ ವಿವರಗಳು ದೊರೆತಿಲ್ಲ. ಈತನ ನಿಜನಾಮ 'ಅಪ್ರಮಾಣದೇವ'. 'ಸಕಲಾಗಮ ಶಿಖಾಮಣಿ' ಅಪ್ರಮಾಣದೇವನ ಕೃತಿಯ ಹೆಸರು, ಇದರಲ್ಲಿ 'ಅಪ್ರಮಾಣ ಕೂಡಲ ಸಂಗಮದೇವ' ಅಂಕಿತದ ಒಟ್ಟು ೯೨೦ ವಚನಗಳು ಸಂಕಲನಗೊಂಡಿವೆ. |




ಈ ವಚನಗಳಲ್ಲಿರುವ ಸಾಮ್ಯತೆಗಳನ್ನು ಮತ್ತು ಅವುಗಳ ವಿವರಣೆ ಅರಿಯೋಣ




**ಅರುಣ** : ಕೆಲವು ವಚನಗಳನ್ನು ಮತ್ತು ವೈಜ್ಞಾನಿಕ ಸಂಶೋಧನೆಗಳನ್ನು ಅಧ್ಯಯನ ಮಾಡಿದಾಗ ಮನದಲ್ಲಿ ಮೂಡುವ ಚಿತ್ರ ಇಲ್ಲಿದೆ.

**ವಿಜ್ಞಾನಿಗಳ ಅಭಿಮತ:**

1. **The singularity, a point smaller than an atom, is thought of by many scientists as having infinite density and mass.**
2. **At the moment of the Big Bang, it rapidly expanded, creating all the space, time, matter, and energy of our physical universe.**
3. **The initial singularity is a singularity predicted by some models of the Big Bang theory to have existed before the Big Bang and thought to have contained all the energy and spacetime of the Universe.**
4. **Alternative theoretical formulations for the beginning of the Universe have been proposed, including a string theory-based model in which two branes, enormous membranes much larger than the Universe, collided, creating mass and energy.**
5. **Although there is no direct evidence for a singularity of infinite density, the cosmic microwave background is evidence that the universe expanded from a very hot, dense state.**

6. **Various new models of what preceded and caused the Big Bang have been proposed as a result of the problems created by quantum mechanics. One model, using <u>loop quantum gravity</u>, aims to explain the beginnings of the Universe through a series of <u>Big Bounces</u>, in which quantum fluctuations cause the Universe to expand.**
7. **This procreation also predicts a <u>cyclic model</u> of universes, with a new universe being created after an old one is destroyed, each with different <u>physical constants</u>.**
8. **Another procreation based on <u>M-theory</u> and observations of the <u>cosmic microwave background</u> (CMB), states that the Universe is but one of many in a <u>multiverse</u>, and has budded off from another universe as a result of <u>quantum fluctuations</u>, as opposed to our Universe being all that exists.**

**ಈ ಎಲ್ಲ ವಿಷಯಗಳ ಬಗ್ಗೆ ಶರಣರು ತಮ್ಮ ವಚನಗಳಲ್ಲಿ ಅಭಿಪ್ರಾಯ ಕೊಟ್ಟಿದ್ದಾರೆಯೇ?**

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಶರಣರ 12 ನೇಯ ಶತಮಾನದಿಂದ 18 ನೇಯ ಶತಮಾನದವರೆಗೆ ರಚನೆಯಾದ ಎಲ್ಲ ವಚನಗಳಲ್ಲಿ 'ನಾದ, ಬಿಂದು ಮತ್ತು ಕಳಾಯುಕ್ತವಾದ" ದ್ರವ್ಯದ ಬಗ್ಗೆ ಬಹಳಷ್ಟು ವಿವರಗಳಿದ್ದು ಅವುಗಳೇ ವಿಶ್ವದ ರಚನೆಯಲ್ಲಿ ಪಾತ್ರವಹಿಸಿದೆ ಎನ್ನುವ ವಿವರವಿದೆ.
ಆ ವೈಜ್ಞಾನಿಕ ವಿವರ ಅರಿಯುವ ಪ್ರಯತ್ನ ಮಾಡಬೇಕಾಗಿದೆ.

**ಗುರಣ್ಣ:** ಈ ಪ್ರಶ್ನೆಗೆ ಉತ್ತರ ಕೊಡಲು ಇನ್ನೂ ಕೆಲವು ವಚನಗಳನ್ನು ನೋಡೋಣ.

**12** ನೇಯ ಶತಮಾನದಿಂದ **18** ನೇಯ ಶತಮಾನದವರೆಗೆ ವಚನಗಳಲ್ಲಿ ದೊರೆಯುವ ವಿಶ್ವ ರಚನೆಯ ವಿವರಗಳನ್ನು ಅರಿಯಲು ಅನುಕೂಲವಾಗುತ್ತದೆ.
ವಿಜ್ಞಾನಿಗಳ ಮತ್ತು ಶರಣರ ವಿಚಾರಗಳಲ್ಲಿಯ ಸಾಮ್ಯತೆ ಗೊತ್ತಾಗುತ್ತದೆ.

**ವಚನ 7: ಜಕ್ಕಣ್ಣಯ್ಯ ವಚನ (18 ನೇಯ ಶತಮಾನ)**

ಕಾಲ ಸು.1800. 'ಝೇಂಕಾರ ನಿಜಲಿಂಗ ಪ್ರಭುವೆ' ಅಂಕಿತದಲ್ಲಿ 778 ವಚನಗಳು ದೊರೆತಿವೆ. ಅವರ ಕೃತಿಗೆ 'ನಿರಾಳ ಮಂತ್ರಗೋಪ್ಯ' ಎಂದು ಕರೆಯಲಾಗಿದೆ. ಯೋಗ ರಹಸ್ಯವನ್ನು ಬೆಡಗಿನ ನುಡಿಗಳಲ್ಲಿ ಹೇಳುವುದು ಈ ವಚನಗಳ ಉದ್ದೇಶವಾಗಿದೆ.







**ವಚನ 9: ದೇಶಿಕೇಂದ್ರ ಸಂಗನಬಸವಯ್ಯ ವಚನ (17 ನೇಯ ಶತಮಾನ)**




ಸೊಲ್ಲಾಪುರದ ಸಮೀಪದ ಕರಜಿಗೆ ಈತನ ಸ್ಥಳವಾಗಿರಬೇಕು. ಕಾಲ ಸು.17 ನೇ ಶತಮಾನ. ಅಂಕಿತ- 'ನಿರಂಜನ ಚೆನ್ನ ಬಸವಲಿಂಗ' ಸದ್ಯ 1242 ವಚನಗಳು ದೊರೆತಿವೆ. 'ಷಟ್ ಸ್ಥಲ ವಚನಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಅವುಗಳನ್ನು ಸಂಕಲಿಸಲಾಗಿದೆ.

**ವಚನ 10: 'ಕಡಕೊಳದ ಮಡಿವಾಳಪ್ಪ' ವಚನ (18 ನೇಯ ಶತಮಾನ)**

ಈತ 18 ನೆಯ ಶತಮಾನದ ಸುಪ್ರಸಿದ್ಧ ಅನುಭಾವಿ. ಸ್ಥಳ-ಗುಲಬರ್ಗಾ ಜಿಲ್ಲೆಯ ಅಫಜಲ್ಪುರ ತಾಲೂಕಿನ ಬಿದನೂರು. ಮಡಿವಾಳಪ್ಪ ರಚಿಸಿದ ಸಾಹಿತ್ಯ ಸ್ವರವಚನ (ತತ್ವಪದ) ಮತ್ತು ವಚನ ಎಂಬ ಎರಡು ರೂಪದಲ್ಲಿ ದೊರೆಯುತ್ತದೆ. ಸುಮಾರು 500 ಕ್ಕೂ ಹೆಚ್ಚು ಸ್ವರವಚನ ಮತ್ತು 23 ವಚನಗಳು ದೊರೆತಿವೆ. ಸ್ವರವಚನಗಳಲ್ಲಿ 'ಗುರುಮಹಾಂತ' ಎಂಬ ಅಂಕಿತವಿದ್ದರೆ ವಚನಗಳಲ್ಲಿ ಅದು 'ನಿರುಪಮನಿರಾಳ ಮತ್ಪ್ರಭು ಮಹಾಂತಯೋಗಿ' ಎಂದಿದೆ. ಸ್ವರವಚನಗಳು (ಹಾಡುಗಳು-ತತ್ವಪದಗಳು) ಬಿಡಿಬಿಡಿಯಾಗಿ ದೊರೆತರೆ, ವಚನಗಳು 'ನಿಜಲೀಲಾಮೃತ ವಚನ' ಎಂಬ ಶೀರ್ಷಿಕೆಯ ಕೃತಿರೂಪದಲ್ಲಿ ದೊರೆಯುತ್ತವೆ. ತತ್ತ್ವ ನಿರೂಪಣೆಯ ಜೊತೆಗೆ ಸಾಮಾಜಿಕ ವಿಡಂಬನೆಯೂ ಅಲ್ಲಲ್ಲಿ ಕಂಡುಬರುತ್ತದೆ. ದೇಶಿಭಾಷೆಯನ್ನು ಸೊಗಸಾಗಿ ಮಡಿವಾಳಪ್ಪ ಬಳಸಿಕೊಂಡಿರುವುದು ಒಂದು ವಿಶೇಷ. ಅವನ ಲೋಕಾನುಭವ ವಚನಗಳಲ್ಲಿ ಸ್ಫುಟವಾಗಿಮೂಡಿದೆ. ತನ್ನನ್ನು ತಾನೇ ವಿಡಂಬಿಸಿಕೊಂಡಿರುವುದು ಇನ್ನೊಂದು ವಿಶೇಷ.




**ವಚನ 11: ಶ್ರೀ ತೋಂಟದ ಸಿದ್ದಲಿಂಗ ವಚನ (16 ನೇಯ ಶತಮಾನ)**

ಶ್ರೀ ತೋಂಟದ ಸಿದ್ದಲಿಂಗೇಶ್ವರ ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿ ಇದ್ದ ಒಬ್ಬ ವಚನಕಾರ

**ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನ ಭಾಗ**

ನಾಮರೂಪು ಕ್ರೀಗಳೇನುಯೇನೂ ಇಲ್ಲದ ನಿತ್ಯನಿರಂಜನ ಪರವಸ್ತು ತಾನೆ ನಿರಂಜನಪ್ರಣವ ನೋಡಾ. [ಆ] ನಿರಂಜನ ಪರವಸ್ತುವಿನಲ್ಲಿ ಪರಮ ಚಿತ್ಕಲೆ ಉದಯವಾಗಿ, ಆ ಚಿದ್ರೂಪ ಕಲೆಯ ಶುದ್ಧಪ್ರಣವವೆನಿಸಿತ್ತು ನೋಡಾ.

ಆ ಶುದ್ಧ ಪ್ರಣವದಲ್ಲಿ ಚಿತ್ತು; ಆ ಚಿತ್ತೇ ಸಚ್ಚಿದಾನಂದಸ್ವರೂಪವನುಳ್ಳುದಾಗಿ, ಚಿತ್‌ಪ್ರಣವವೆನಿಸಿತ್ತು ನೋಡಾ.

ಆ ಚಿತ್ ಪ್ರಣವಸ್ವರೂಪವಪ್ಪ ಪರತತ್ವದಲ್ಲಿ ಪರಶಕ್ತಿ ಉದಯವಾಯಿತ್ತು.

ಆ ಪರಶಕ್ತಿಯಿಂದ ನಾದ ಬಿಂದು ಕಳೆಗಳಾದವಯ್ಯ.

ಆಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ;

ಇಂತೀ ಮೂರಕ್ಕೆ ಪರಶಕ್ತಿಯೇ ತಾಯಿ.

ಇಂತೀ ನಾಲ್ಕು ಒಂದಾದಲ್ಲಿ ಪ್ರಣವವಾಯಿತ್ತಯ್ಯ. ------

**ವಚನ 12: ಗುಮ್ಮಳಾಪುರದ ಸಿದ್ದಲಿಂಗೇಶ್ವರ ವಚನ (16 ನೇಯ ಶತಮಾನ)**
ಗುಮ್ಮಳಾಪುರದ ಸಿದ್ದಲಿಂಗೇಶ್ವರ ಎಂಬ ವಚನಕಾರ ಶ್ರೀ ತೋಂಟದ ಸಿದ್ದಲಿಂಗೇಶ್ವರ ಶಿಷ್ಯವರ್ಗಕ್ಕೆ ಸೇರಿದವರು.

**ಗುಮ್ಮಳಾಪುರದ ಸಿದ್ಧಲಿಂಗ ಅವರ ವಚನ ಭಾಗ**

ಪ್ರಥಮದಲ್ಲಿ ನಾಮ ರೂಪು ಕ್ರೀ ಏನೂ ಏನೂ ಇಲ್ಲದ ಮಹಾಘನ ಶೂನ್ಯಬ್ರಹ್ಮವು.

ಆ ಶೂನ್ಯಬ್ರಹ್ಮದಿಂದ ಶುದ್ಧ ಪ್ರಣವ. ಆ ಶುದ್ಧ ಪ್ರಣವಧಿಂದ ಚಿತ್ತು ಭಾವದಕ್ಷರ.

ಆ ಚಿತ್ತು ಭಾವದಕ್ಷರದಿಂದ ಪರಶಕ್ತಿ. ಆ ಪರಾಶಕ್ತಿಯಿಂದ ಅಕ್ಷರತ್ರಯಂಗಳು.

ಆ ಅಕ್ಷರತ್ರಯಂಗಳಿಂದ ಓಂಕಾರ. ಆ ಓಂಕಾರವೆ ಬಸವಣ್ಣನು.---

ಎನ್ನ ನಾದಕ್ಕೆ ಆಕಾರವಾಗಿ ಬಂದನಯ್ಯ ಬಸವಣ್ಣ.

ಎನ್ನ ಬಿಂದುವಿಂಗೆ ಉಕಾರವಾಗಿ ಬಂದನಯ್ಯ ಬಸವಣ್ಣ.

ಎನ್ನ ಕಳೆಗೆ ಮಕಾರವಾಗಿ ಬಂದನಯ್ಯ ಬಸವಣ್ಣ ----

ಎನ್ನ ಕ್ರಿಯಾಶಕ್ತಿಗೆ ನಕಾರವಾಗಿ ಬಂದನಯ್ಯ ಬಸವಣ್ಣ. ಎನ್ನ ಜ್ಞಾನಶಕ್ತಿಗೆ ಮಃಕಾರವಾಗಿ ಬಂದನಯ್ಯ ಬಸವಣ್ಣ. ಎನ್ನ ಇಚ್ಛಾಶಕ್ತಿಗೆ ಶಿಕಾರವಾಗಿ ಬಂದನಯ್ಯ ಬಸವಣ್ಣ. ಎನ್ನ ಆದಿಶಕ್ತಿಗೆ ವಕಾರವಾಗಿ ಬಂದನಯ್ಯ ಬಸವಣ್ಣ. ಎನ್ನ ಪರಶಕ್ತಿಗೆ ಯಕಾರವಾಗಿ ಬಂದನಯ್ಯ ಬಸವಣ್ಣ. ಎನ್ನ ಚಿತ್ಶಕ್ತಿಗೆ ಓಂಕಾರವಾಗಿ ಬಂದನಯ್ಯ ಬಸವಣ್ಣ.-----

**ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಶರಣ**
**ನಾದ, ಬಿಂದು ಮತ್ತು ಕಳಾಯುಕ್ತವಾದ ದ್ರವ್ಯದ ಬಗ್ಗೆ ಬಹಳಷ್ಟು ವಿವರಗಳಿದ್ದು**

**ಅವುಗ ವೈಜ್ಞಾನಿಕ ವಿವರ ಅರಿಯುವ ಪ್ರಯತ್ನ ಮಾಡಬೇಕಾಗಿದೆ.**




**ಅರುಣ** : 12 ನೇಯ ಶತಮಾನ ದಿಂದ 18 ನೇಯ ಶತಮಾನದ ವರೆಗೆ ರಚಿತವಾದ ವಚನಗಳ ಅಧ್ಯಯನ ಮಾಡಿದಾಗ ಆ ವಚನಗಳಲ್ಲಿ ಸಮನ್ವಯತೆ **(Consistancy)** ಇರುವದು ಗೊತ್ತಾಗುತ್ತದೆ. ವಚನಗಳಲ್ಲಿ ಪ್ರಸ್ತುತಪಡಿಸಿದ ವಿಚಾರಗಳು ಸ್ಪಷ್ಟವಾಗಿವೆ ಮತ್ತು ಅಂದಿನಿಂದ ಇಂದಿನವರೆಗೆ ಯಾವ ಪರಿವರ್ತನೆಯನ್ನಾಗಲೀ ಅಥವಾ ವಿರೋಧಾಭಾಸವನ್ನಾಗಲೀ ಮೂಡಿಸಿಲ್ಲ. **800 ವರ್ಷಗಳ ಕಾಲಯಾನದ ಪರೀಕ್ಷೆಗೆ ಒಳಪಟ್ಟು ಸರಿ ಎನಿಸಿ ಭವಿತವ್ಯದಲ್ಲಿ ಮಾನವ ಕುಲಕ್ಕೆ ಮಾರ್ಗದರ್ಶಕ ತತ್ವಗಳು ಎನ್ನುವ ಆಶಾಭಾವನೆ ಎಲ್ಲರಲ್ಲಿ ಮೂಡಿಸುತ್ತಿವೆ.**

ಆದರೂ ಮನದಲ್ಲಿ ಮೂಡಿದ ವಿಚಾರಗಳು ಮತ್ತು ಪ್ರಶ್ನೆಗಳು ಇಲ್ಲಿವೆ

1. ಈ ವಚನಕಾರರು ಧಾರ್ಮಿಕ ವಿಚಾರಗಳನ್ನಷ್ಟೇ ಈ ವಚನಗಳಲ್ಲಿ ಅಳವಡಿಸಿಕೊಂಡಿಲ್ಲ ಆದರೆ **ವಿಶ್ವದ ರಚನೆ ಹೇಗಾಯಿತು?**
2. ಸಾವಿರಾರು ವರ್ಷಗಳಿಂದ ಜನರ ಮನದಲ್ಲಿ ಮೂಡಿದ್ದ ಪ್ರಶ್ನೆಗೆ ಉತ್ತರ ಕೊಡುವ ಮತ್ತು ಹೊಸ ವಿವರ ಕೊಡುವ ಪ್ರಯತ್ನ ಮಾಡಿದ್ದಾರೆ ಎನಿಸುತ್ತಿದೆ.
3. ಕಳೆದ ಎಂಟು ಶತಮಾನಗ ಳಿಂದ ಇವೆಲ್ಲ ಧಾರ್ಮಿಕ ವಿಚಾರಗಳು ಎಂದು ನಂಬಿ ಆ ದಿಶೆಯಲ್ಲಿಯೇ ಅರ್ಥ ಕಲ್ಪಿಸಿ ಅಧ್ಯಯನ ಮತ್ತು ಪ್ರಚಾರ ಮಾಡಿದ ಪರಿಣಿತರು ಈ ವಚನಗಳನ್ನು ಬೇರೆ ಆಯಾಮದಲ್ಲಿ ಅರ್ಥ ಮಾಡಿಕೊಳ್ಳುವದನ್ನು ಒಪ್ಪಿಕೊಳ್ಳುವದು ದೂರದ ಮಾತು. ವೈಜ್ಞಾನಿಕ ನೆಲೆಯಲ್ಲಿ ವಿವರಿಸಿ ಕೆಲವು ಜನರನ್ನು

ಒಪ್ಪಿಸಬಹುದು ಆದರೆ ಸಾವಿರಾರು ಜನರ ಮನ ಒಪ್ಪುವ ಹಾಗೆ ವಿವರಿಸುವದು ಕಷ್ಟದ ಕೆಲಸ.

4. ವಿಜ್ಞಾನ ಅಧ್ಯಯನ ಮಾಡಿದ ಎಲ್ಲರ ಮನದಲ್ಲಿ ಕಳೆದೆರಡು ಶತಮಾನಗಳಲ್ಲಿಯೇ ವಿಜ್ಞಾನ ಪಾಶ್ಚಿಮಾತ್ಯ ದೇಶಗಳಲ್ಲಿ ಬೆಳವಣಿಗೆಯಾಯಿತು ಅತ್ಯಾಧುನಿಕ ಪ್ರಯೋಗಾಲಯಗಳಿಲ್ಲದೆ ಸಂಶೊಧನೆ ಅಸಾಧ್ಯ ಎನ್ನುವ ಭ್ರಮೆಯಲ್ಲಿದ್ದಾರೆ.
5. ಪೂರ್ವ ದೇಶದ ಪರಿಣಿತರ ಹೇಳಿಕೆಗಳೆಲ್ಲ ಕಂದಾಚಾರ ಮತ್ತು ಧರ್ಮದ ಪ್ರಚಾರಕ್ಕಾಗಿ ರಚಿಸಿದ ಕೃತಿಗಳು ಎನ್ನುವ ತಪ್ಪು ಕಲ್ಪನೆಯಲ್ಲಿದ್ದಾರೆ.

ಈ ಯಾವ ಪೂರ್ವ ಮಾನಸಿಕ ಕಲ್ಪನೆಗಳಿಲ್ಲದೆ ವಚನಗಳ ಅಧ್ಯಯನ ಮಾಡುವ ಅವಶ್ಯಕತೆ ಇದೆ. ಆ ನೆಲೆಯಲ್ಲಿ ವಿಚಾರಿಸಿದಾಗ ಮನದಲ್ಲಿ ಮೂಡುವ ಅನೇಕ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಡುವ ಪ್ರಯತ್ನ ಮಾಡಬೇಕಾಗುತ್ತದೆ. ಆ ರೀತಿಯ ಕೆಲವು ಪ್ರಶ್ನೆಗಳು ಮತ್ತು ಉತ್ತರಗಳು ಇಲ್ಲಿವೆ.

**ಗುರಣ್ಣ :** ನನ್ನ ಮನದಲ್ಲಿ ಮೂಡಿದ ಮೊದಲ ಪ್ರಶ್ನೆ.

**ಈ ವಚನಗಳನ್ನು ವಿಶ್ವ ರಚನೆ ಹೇಗಾಯಿತು ಎನ್ನುವ ವಿವರ ಒದಗಿಸಲು ರಚಿಸಲಾಯಿತೆ?**

**ಅರುಣ :**ಈ ಪ್ರಶ್ನೆಗೆ ಉತ್ತರ ಕೊಡಲು ಶರಣ ಕಾಡಸಿದ್ದೇಸ್ವರ ಈ ಒಂದು ವಚನ ಸಾಕು.

ಅವರು ವಚನದ ಪ್ರಾರಂಭದಲ್ಲಿಯೇ ನಿಮ್ಮ ಪ್ರಶ್ನೆಗೆ ಉತ್ತರ ಇಲ್ಲಿದೆ ಎಂದು ಹೇಳುತ್ತಾರೆ

**"ಬ್ರಹ್ಮಾಂಡವು ಹೇಗೆ ಪುಟ್ಟಿತ್ತು ಪೇಳ್ವೆ ಕೇಳಿರಯ್ಯಾ."**

ಅವರು ಒದಗಿಸಿದ ಕೆಲವು ವಿವರಗಳು

1. ಆದಿ, ಅನಾದಿಯಿಂದತ್ತತ್ತಲಾದ ನಿರಾಕಾರ ಪರವಸ್ತು ಚಿತ್ತೆನಿಸಿತ್ತು.

**The origin of the Universe also involves the question of creatio ex nihilo, creation out of nothing. Modern physics is perfectly happy with creatio ex nihilo meaning that things began as a zero-energy Universe, negative energy will become dark energy and positive energy will becomes matter, the sum equals zero.**

**ಪಂಚಭೂತಂಗಳುತ್ಪತ್ತಿ ಇಲ್ಲದಂದು, ಅಂಡಜವಳಯ ರಚಿಸದಂದು, ಚತುರ್ದಶಭುವನಂಗಳಿಲ್ಲದಂದು, ಪಂಚಾಶತಕೋಟಿ ವಿಸ್ತೀರ್ಣದ ಅನಂತಕೋಟಿ ಬ್ರಹ್ಮಾಂಡಾದಿ ಲೋಕಾದಿಲೋಕಂಗಳೇನುಯೇನೂಯಿಲ್ಲದಂದು, ನಾನು ನೀನೆಂಬ ವಾಕುಹುಟ್ಟದಂದು, (quantum vacuum ) ಅನಿರ್ವಾಚ್ಯ**

**ಮಹಾಶೂನ್ಯನಾಗಿರ್ದೆಯಲ್ಲಾ ನೀನು, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.**

----- ತೋಂಟದ ಸಿದ್ದಲಿಂಗ ಶಿವಯೋಗಿಗಳು

**The properties of the Universe come from `nothing', where nothing is the quantum vacuum, which is a very different kind of nothing. If we examine a piece of `empty' space we see it is not truly empty, it is filled with spacetime, for example. Spacetime has curvature and structure, and obeys the laws of quantum physics.**

2. **ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು.**

**String theory maintains that the Universe had 10 dimensions during the**
**Planck era, which collapses into 4 at the end of the Planck era**

**ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಶರಣ ನಾದ, ಬಿಂದು ಮತ್ತು ಕಳಾಯುಕ್ತವಾದ ದ್ರವ್ಯದ (Strings) ಬಗ್ಗೆ ವಿವರಣೆ**




**ವಿಜ್ಞಾನಿಗಳ ವಿವರಣೆ**

"Alternative theoretical formulations for the beginning of the Universe have been proposed, including a string theory-based model in which two branes, enormous membranes much larger than the Universe, collided, creating mass and energy."

Initially, cosmic strings and superstrings were regarded as two completely separate classes.

**Cosmic strings, if they exist, stretch across cosmological distances and though exceedingly thin are sufficiently massive to have noticeable gravitational effects.**
**On the other hand superstrings were seen as minute objects, even on the scale of particle physics, far too small to have any directly observable effects.**
**But in the last few years it has emerged that under certain circumstances they too can grow to macroscopic size and play the same role as cosmic strings.**
**Indeed, it is now very possible that observations of a cosmic superstring might provide the first real direct evidence for M-theory.**
ಎನ್ನುವದು ಗಮನಾರ್ಹ.

1.

**ಆ ಚಿತ್ತು ತ್ರಿವಿಧಮಲ ಸಹವಾಗಿ ಚತುರ್ವಿಧವು ಘಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.**

ಆ ಮಹಾಲಿಂಗದಿಂದ -----ಚತುರ್ದಶಭುವನಂಗಳು ಪುಟ್ಟಿದವು.
ಆ ಚತುರ್ದಶಭುವನದ ಮಧ್ಯದಲ್ಲಿ ಇರುವ ಮೊದಲು ಆನೆ ಕಡೆಯಾಗಿ ಎಂಬತ್ತುನಾಲ್ಕುಲಕ್ಷ ಜೀವರಾಶಿಯೊಳಗೆ ದೇವ-ದಾನವ-ಮಾನವರು ಮೊದಲಾದ ಹೆಣ್ಣು-ಗಂಡು, ಸಚರಾಚರಂಗಳೆಲ್ಲವು ಉತ್ಪತ್ತಿಯಾದವು.



ಆ ಮಹಾಲಿಂಗದಿಂದ ಆತ್ಮ ಜನನ ; ಆತ್ಮದಿಂದ ಭಾವ ಪುಟ್ಟಿತ್ತು. ಆ ಭಾವದಿಂದ ಮೋಹ ಪುಟ್ಟಿತ್ತು. ಆ ಮೋಹವೆಂದಡೆ, ಮಾಯವೆಂದಡೆ, ಆಶೆಯೆಂದಡೆ, ಮನವೆಂದಡೆ ಏಕಪರ್ಯಾಯಾರ್ಥ. ಇಂತಪ್ಪ ಮೋಹದಿಂದ ತ್ರೈಲೋಕ ಮೊದಲಾಗಿ ಚತುರ್ದಶಭುವನಂಗಳು ಪುಟ್ಟಿದವು.
ಆ ಚತುರ್ದಶಭುವನದ ಮಧ್ಯದಲ್ಲಿ ಇರುವೆ ಮೊದಲು ಆನೆ ಕಡೆಯಾಗಿ ಎಂಬತ್ತುನಾಲ್ಕುಲಕ್ಷ ಜೀವರಾಶಿಯೊಳಗೆ ದೇವ-ದಾನವ-ಮಾನವರು ಮೊದಲಾದ ಹೆಣ್ಣು-ಗಂಡು, ಸಚರಾಚರಂಗಳೆಲ್ಲವು ಉತ್ಪತ್ತಿಯಾದವು.

ಇಂತೀ ಎಲ್ಲವು ಪರಶಿವನ ನೆನವುಮಾತ್ರದಿಂದ ಮರೀಚಿಕಾಜಲದಂತೆ, ಸುರಚಾಪದಂತೆ, ತೋರಿ ತೋರಿ ಅಡಗುವವಲ್ಲದೆ ನಿಜವಲ್ಲ ಮಿಥ್ಯವೆಂದು ತಿಳಿದು ವಿಸರ್ಜಿಸಿ ಬಿಡುವಾತ ತಾನೇ ಪರಶಿವನೆಂದು ತಿಳಿವುದಯ್ಯ, ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ.

**ಕಾಡಸಿದ್ಧೇಶ್ವರ 2:**
ಈತನ ಕಾಲದೇಶಾದಿ ವಿಷಯಗಳು ತಿಳಿದಿಲ್ಲ. ವಚನಕಾರ ಕಾಡಸಿದ್ಧೇಶ ತನ್ನ ಗುರುಪರಂಪರೆಯನ್ನು ಮೊದಲ ವಚನದಲ್ಲಿ ಹೇಳಿಕೊಂಡಿದ್ದಾನೆ. ಅಲ್ಲಿನ ಇಪ್ಪತೆರಡು ಮಂದಿ ಗುರುವರ್ಯರಲ್ಲಿ ಕಡೆಯವನಾದ ಸಂಗಮೇಶ್ವರ ದೇವರೇ ಕಾಡಿಸಿದ್ಧೇಶನ ಗುರು. ವಚನಗಳ ಸಂಖ್ಯೆ 561. ಇವುಗಳಲ್ಲಿ 77 ಬೆಡಗಿನ ವಚನಗಳಿವೆ.

**ಅಜಕೋಟಿ ಬ್ರಹ್ಮಾಂಡಗಳಿವೆ ಎನ್ನುವದನ್ನು 12 ನೇಯ ಶತಮಾನದಲ್ಲಿಯೇ ಶರಣರು ತಮ್ಮ ವಚನದಲ್ಲಿ ಪ್ರಸ್ತುತಪಡಿಸಿದ್ದರು. ಮತ್ತು ಅದನ್ನೇ 16 ಮತ್ತು 18 ನೇಯ ಶತಮಾನದಲ್ಲಿ ದೃಡಪಡಿಸಿದ್ದರು.**

## ವಿಸ್ತಾರವಾಗುತ್ತಿರುವ ವಿಶ್ವ




**ಆದರೆ ವಿಜ್ಞಾನಿಗಳು ಮಾತ್ರ 1925 ರಲ್ಲಿ Edvin Hubble ಅವರ ತತ್ವವನ್ನು ಪ್ರಸ್ತುತ ಪಡೆಸಿದ ನಂತರ ಒಂದಕ್ಕಿಂತ ಹೆಚ್ಚು ಬ್ರಹ್ಮಾಂಡಗಳಿವೆ ಎನ್ನುವದನ್ನು ಒಪ್ಪಿ ವಿಶ್ವ ವಿಶಾಲವಾಗುತ್ತಿದೆ ಎನ್ನುವ ತತ್ವ ಒಪ್ಪಿ ಸಂಶೊಧನೆ ನಡೆಸಿದ್ದಾರೆ.**
**12 ಶತಮಾನದಲ್ಲಿ ಶರಣರು ವಿಶ್ವ ವಿಶಾಲವಾಗುವದನ್ನು ಮತ್ತು ಅದು ಹೇಗೆ ವಿಶಾಲವಗುತ್ತದೆ ಎನ್ನುವದನ್ನು ವಿವರಿಸಿದ್ದಾರೆ.**
**ಘನಲಿಂಗಿದೇವ ವಚನ:**

<table>
<tr>
<td>
</td>
<td>ಘನಲಿಂಗಿದೇವ :<br><br>ಈತ ತೋಂಟದ ಸಿದ್ದಲಿಂಗರ ಶಿಷ್ಯ. ಸುತ್ತೂರು ಮಠಾಧೀಶ ಕಾಲ 16 ನೇಯ ಶತಮಾನ ಕಗ್ಗೆರೆಯಲ್ಲಿ ಐಕ್ಯ. 'ಘನಲಿಂಗಿಯ ಮೋಹದ</td>
</tr>
</table>

| | |
|---|---|
| | ಮಲ್ಲಿಕಾರ್ಜುನ" ಅಂಕಿತದಲ್ಲಿ 66 ವಚನಗಳು ದೊರೆತಿವೆ. ಸರಳವೂ ಕಾವ್ಯಮಯವೂ ಆಗಿದೆ. |

ಮಹಾಲಿಂಗ ಎಂದರೇನು?
ಎನ್ನುವ ಪ್ರಶ್ನೆಗೆ ಉತ್ತರ ಹುಡುಕಲು ಹೋದ ನನಗೆ ಘನಲಿಂಗಿದೇವ ಅವರ ಘನಲಿಂಗದ ವಿವರದ ಜೊತೆಗೆ ಮತ್ತೆ
**ಮಹಾಲಿಂಗ ->ಪ್ರಸಾದಲಿಂಗ-> ಜಂಗಮಲಿಂಗ, -> ಶಿವಲಿಂಗ ->ಗುರುಲಿಂಗ-> ಆಚಾರಲಿಂಗ**
->ಎಂಬ ಪಂಚಲಿಂಗ ರಚನೆಯಾದ ವಿರುವ ತಿಳಿಸಿ ಇನ್ನಷ್ಟು ವಿಚಾರಿಸಲು ಸೂಚಿಸಿದರು.
ಇಲ್ಲಿ ವಿಶ್ವದ ಕ್ರಮಾಗತವಾದ ಬೆಳವಣಿಗೆ ಇದೆ, ವಿಶ್ವ ಒಂದು ಸ್ಥಿತಿ ಯಿಂದ ಇನ್ನೊಂದು ಸ್ಥಿತಿಗೆ ಪರಿವರ್ತನೆಯಾಗುತ್ತಾ ವಿಶಾಲವಾಗುತ್ತ ಸಾಗಿದೆ ಎನ್ನುವ ವಿವರ ಕೊಟ್ಟಿದ್ದಾರೆ.
**ಅರುಣ :**
The American astronomer Edwin Hubble made the observations in 1925 and was the first to prove that the universe is expanding. He proved that there is a direct relationship between the speeds of distant galaxies and their distances from Earth. This is now known as Hubble's Law.
Hubble helped astronomers see that we live in an expanding universe, one in which every galaxy is moving away from every other. In its simplest form, it states that, *the more distant the galaxy, the faster it is moving away from us*.
This concept lies at the heart of our modern cosmology, in which the entire universe – space, time and matter – is thought to have been born in a Big Bang.
In 2018, the International Astronomical Union, or IAU, voted to rename Hubble’s law as the Hubble-Lemaître law.
ಅಂತೂ ಲಿಂಗದ ವಿವರಣೆ ಸುಲಭದ ವಿಷಯವಲ್ಲ ಎನ್ನುವದು ಮನದಟ್ಟಾಯಿತು.

**ಅರುಣ :**ಅಂತೂ ಕಾಡಸಿದ್ದೇಸ್ವರ ಶರಣರ ವಚನದ ವಿವರಣೆ ನೋಡಿದ ಮೇಲಾದರೂ ಇದುವರೆಗೆ ಓದಿದ ವಚನಗಳನ್ನು ಶರಣರು ವಿಶ್ವದ ರಚನೆಯನ್ನು ವಿವರಿಸುವ ಸಲುವಾಗಿಯೇ ರಚಿಸಿದರು ಎನ್ನುವ ವಿಷಯ ನಿನಗೆ ಮನದಟ್ಟಾಯಿತಲ್ಲವೇ?
**ಗುರಣ್ಣ:** ಅದು ಸರಿ. ನಾನು ಇನ್ನೂ ಕೆಲವು ಪ್ರಶ್ನೆ ಕೇಳಬೇಕು ಎನ್ನುವಾಗ ತೋಂಟದ ಸಿದ್ದಲಿಂಗ ಶಿವಯೋಗಿಗಳೇ ತಮ್ಮ ಈ ವಚನದಲ್ಲಿ ಅನೇಕ ಪ್ರಶ್ನೆ ಕೇಳಿ ಅದರಲ್ಲಿಯೇ ಉತ್ತರ ಅಳವಡಿಸಿ ನಮ್ಮ ಮನದಲ್ಲಿಯ ಸಂದೇಹ ನಿವಾರಿಸುವ ಅವರ ಈ ರೀತಿ ಅಪರೂಪದ್ದಾಗಿದೆ.
**ಅರುಣ :**ಅಲ್ಲಿರುವ ಪ್ರಶ್ನೆ ಮತ್ತು ಉತ್ತರ ತಿಳಿಯುವ ಕುತೂಹಲ ನನಗೂ ಇದೆ. ಅಲ್ಲಿರುವ ತತ್ವಗಳಿಗೆ ವಿಜ್ಞಾನಿಗಳ ವಿವರಣೆಗಳು ಅರ್ಥ ಕೊಟ್ಟಿದ್ದಾರೆಯೇ? ಎನ್ನುವದನ್ನು  ಕಂಡುಕೊಳ್ಳೋಣ.
ಗುರಣ್ಣ:




ಪ್ರಥಮದಲ್ಲಿ **ನಿರಾಕಾರ ಪರವಸ್ತು** ತಾನೊಂದೆ.
ಆ ನಿರಾಕಾರ ಪರವಸ್ತುವಿನಲ್ಲಿ **ಮಹಾಜ್ಞಾನ** ಉದಯವಾಗಿ, ಆ ಮಹಾಜ್ಞಾನವೇ ಅನಾದಿ ಶರಣರೂಪಾಗಿ, ಆ ನಿರಾಕಾರ **ಪರವಸ್ತುವಿಗೆ** ಆಧಾರವಾಗಿ, **ಚಿನ್ನ ಬಣ್ಣದ ಹಾಂಗೆ** ಭಿನ್ನವಿಲ್ಲದಿಪ್ಪುದ  ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳು?.
**ಅರುಣ :**ವಿಜ್ಞಾನದ ವಿವರಗಳನ್ನು ಕೊಡುವ
Timeline of epochs in cosmology (From Wikipedia, the free encyclopedia) (https://en.wikipedia.org/wiki/Timeline_of_epochs_in_cosmology)

ಆಯ್ದ ಕೆಲವು ಭಾಗಗಳನ್ನು ಇಲ್ಲಿ ಉದಾಹರಿಸುತ್ತಿರುವೆ.
ವಚನಭಾಗದಲ್ಲಿರುವ ವಿಷಯವನ್ನು ಕೆಳಗಿನ ವೈಜ್ಞಾನಿಕ ವಿವರಣೆ ಸಮರ್ಥಿಸುತ್ತದೆ.
(ಕನ್ನಡದಲ್ಲಿ ನನಗೆ ಭಾಷಾಂತರ ಮಾಡಲಾಗುತ್ತಿಲ್ಲ ಕ್ಷಮಿಸಿ, ಆ ಕೆಲಸವನ್ನು ಬರುವ ದಿನಗಳಲ್ಲಿ ಯಾರೋ ಒಬ್ಬರು ಮಾಡಬಹುದು ಅಲ್ಲಿಯವರೆಗೆ ಕಾಯೋಣ. ಅದುವರೆಗೆ ಮನದ ಭಾವನೆಗಳು ಅರ್ಥವಾದರೆ ಸಾಕು)

**A (ನಿರಾಕಾರ ಪರವಸ್ತು) singularity is a region of space where the curvature of spacetime becomes infinite (ಮಹಾಜ್ಞಾನ ಪರವಸ್ತುವಿಗೆ ಆಧಾರ).**

**Singularities** are regions of **space** where the density of matter, or the curvature of spacetime, becomes infinite. ... In such locales, the standard concepts of **space** and time cease to have any meaning.

In the center of a black hole is a gravitational **singularity**, a one-dimensional point which contains a huge mass in an infinitely small space, where density and gravity become infinite and space-time curves infinitely, and where the laws of physics as we know them cease to operate.

ಈ ಭಾಗ ಒದುತ್ತಿದ್ದ ಹಾಗೆ ಜಕ್ಕಣ್ಣಯ್ಯನವರ ವಚಾನಭಾಗ ನೆನಪಾಗುತ್ತದೆ

**ಸಕಲ ನಿಃಕಲಗಳು ಇಲ್ಲದಂದು, ಪರಾಪರಗಳಿಲ್ಲದಂದು,**
**ಇವೇನೇನೂ ಇಲ್ಲದಂದು ಅತ್ತತ್ತಲೇ.**
**ಅಪರಂಪರ ಮಹಾಮಹಿಮ ನಿಷ್ಕಲಶಿವತತ್ವ ತಾನೊಂದೆ ನೋಡಾ.**
**ಆ ನಿಷ್ಕಲಶಿವತತ್ವದಿಂದ ಜ್ಞಾನಚಿತ್ತು ಉದಯಿಸಿತ್ತು ನೋಡಾ. – ಜಕ್ಕಣ್ಣಯ್ಯ**

**The initial singularity is a <u>singularity</u> predicted by some models of the <u>Big Bang theory</u> to have existed before the Big Bang and thought to have contained all the energy and <u>spacetime</u> of the <u>Universe</u>.**

(ಅಪ್ರಮೇಯ ಅಗೋಚರ ಅಪ್ರಮಾಣ ಅನಂತ ತೇಜೋಮಯವಾಗಿಹ)

**ಶರಣ ಬಾಲಸಂಗಯ್ಯ ಅಪ್ರಮಾಣದೇವನ ವಚನ**

> ಆದಿ ಅನಾದಿಯಿಲ್ಲದಂದು ತಾನೆ ಪ್ರಣವಸ್ವರೂಪನು. ಅನಂತ
> ಬ್ರಹ್ಮಾಂಡವಿಲ್ಲದಂದು ತಾನೆ ನಾದಬಿಂದುಕಲಾತೀತನು.
> ಜೀವಪರಮರಿಲ್ಲದಂದು ತಾನೆ ನಾಮ ಸ್ವರೂಪ ಕ್ರಿಯಾತೀತನು.
> ಸಚರಾಚರಂಗಳೆಲ್ಲಾ ರಚನೆಗೆ ಬಾರದಂದು ತಾನೆ ಅಖಂಡಪರಿಪೂರ್ಣ
> ಅಪ್ರಮೇಯ ಅಗೋಚರ ಅಪ್ರಮಾಣ ಅನಂತ ತೇಜೋಮಯವಾಗಿಹ
> ಮಹಾಘನಲಿಂಗ ನೋಡಾ, ಅಪ್ರಮಾಣಕೂಡಲಸಂಗಮದೇವಾ

ಈ ಎಲ್ಲ ವಿಷಯ ವಿವರಿಸುತ್ತದೆ.

**The instant immediately following the initial singularity is part of the Planck epoch, the earliest period of time in the history of the universe.**
ಇಲ್ಲಿ ಅವರು ಬಂಗಾರ ಹಾಗೂ ಅದರ ಬಣ್ಣದ ಹೋಲಿಕೆಯನ್ನು ನಿರಾಕಾರ ವಸ್ತು singularity ಮತ್ತು ಅದು ಒಳ ಗೊಂಡಿರುವ all the energy and spacetime of the Universe ಯ ಜೊತೆ ಮಾಡಿದ್ದಾರೆ ಎನ್ನುವದು ಗೊತ್ತಾಗುತ್ತದೆ.
2. ಆ ನಿರಾಕಾರ ಪರವಸ್ತುವೆ ನಿಃಕಲಲಿಂಗವಾದಲ್ಲಿ, ಆ ನಿಃಕಲಲಿಂಗದಿಂದ ಜ್ಞಾನಚಿತ್ತುದಯವಾಗಿ, ಆ ಜ್ಞಾನಚಿತ್ತುವೆ ಶರಣರೂಪಾಗಿ, ಆ ನಿಃಕಲಲಿಂಗಕ್ಕಾಶ್ರಯವಾಗಿ, ಚಿದಂಗಸ್ವರೂಪನಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳು?.
**The instant immediately following the initial singularity is part of the Planck epoch, the earliest period of time in the history of the universe. Singularity: Also known as the Planck Epoch (or Planck Era), this was the earliest known period of the Universe. ... During this period, it is believed that the quantum effects of gravity dominated physical interactions and that no other physical forces were of equal strength to gravitation.**
ಆ ನಿಃಕಲಜ್ಞಾನಚಿತ್ತುವೆ ಬಲಿದು ಚಿಚ್ಛಕ್ತಿಯಾದಲ್ಲಿ, ಆ ಚಿಚ್ಛಕ್ತಿಯ ಸಂಗದಿಂದ ನೀನು ಮಹಾಲಿಂಗವಾದಲ್ಲಿ, ಆ ಶಾಂತ್ಯತೀತೋತ್ತರೆಯೆಂಬ ಕಲೆಯಿಂದ ನಾನುದಯವಾಗಿ, ಆ ಮಹಾಲಿಂಗಕ್ಕಾಶ್ರಯವಾಗಿ, ಐಕ್ಯನಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳು?
**Planck Epoch begins: earliest meaningful time. The Big Bang occurs in which ordinary space and time develop out of a primeval state (possibly a virtual particle or false vacuum) described by a quantum theory of gravity or "Theory of Everything".**
**All matter and energy of the entire visible universe is contained in a hot, dense point (gravitational singularity), a billionth the size of a nuclear particle.**
**This state has been described as a particle desert. Other than a few scant details, conjecture dominates discussion about the earliest moments of the universe's history since no effective means of testing this far back in space-time is presently available. WIMPS (weakly interacting massive particles) or dark matter and dark energy may have appeared and been the catalyst for the expansion of the singularity.**

**The infant universe cools as it begins expanding outward. It is almost completely smooth, with quantum variations beginning to cause slight variations in density.**

**ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು.**

**ಆ ಚಿತ್ತು ತ್ರಿವಿಧಮಲ ಸಹವಾಗಿ ಚತುರ್ವಿಧವು ಘಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.--- ಕಾಡಸಿದ್ದೇಶ್ವರ**

**ಆ ಚಿನ್ನಾದ ಚಿದ್ಬಿಂದು ಚಿತ್ಕಳೆ ಆ ಮೂಲಚಿತ್ತು ಸಹವಾಗಿ ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು. ----- ಷಣ್ಮುಖಸ್ವಾಮಿ**

**ಆ ಚಿತ್ತಿನಿಂದೆ ಚಿನ್ನಾದ ಚಿದ್ಬಿಂದು ಚಿತ್ಕಳೆಯುದಯವಾಗಿ,**
**ಆ ಮೂಲ ಚಿತ್ತುಗೂಡಿ, ಗಟ್ಟಿಗೊಂಡು**
**ಗೋಲಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.**
**----- ದೇಶಿಕೇಂದ್ರ ಸಂಗನಬಸವಯ್ಯ**

**ಅನಂತಕೋಟಿ ಬ್ರಹ್ಮಾಂಡಗಳನೊಳಕೊಂಡ ಮಹಾಘನಲಿಂಗ-- ಷಣ್ಮುಖಸ್ವಾಮಿ**

**ಶೂನ್ಯ ನಿಶೂನ್ಯ ನಾಮ ನಿರ್ನಾಮ ಇವೇನೂ ಇಲ್ಲದೆ, ಬಚ್ಚಬರಿಯ ಬಯಲೆ ಸಹಜದಿಂದ ಗಟ್ಟಿಗೊಂಡು, ಘನಲಿಂಗವೆಂಬ ಪುರುಷತತ್ತ್ವವಾಯಿತ್ತಯ್ಯ --- ತೋಂಟದ ಸಿದ್ದಲಿಂಗ ಶಿವಯೋಗಿಗಳು**

**ನಿಷ್ಕಳ ಪರಂಜೋತಿ ತಾನೊಂದೆ ನೋಡಾ. ಅದು ತನ್ನ ಚಿತ್ಕಾಂತೆಯ ಸಂಗಸಮರಸದಿಂದ ಮಹಾಲಿಂಗವೆನಿಸಿತು.**
**----- ಘನ ಲಿಂಗದೇವ**






ತೋಂಟದ ಸಿದ್ದಲಿಂಗ ಶಿವಯೋಗಿಗಳ ಈ ವಚನಭಾಗದಲ್ಲಿ
**1. ಚಿಚ್ಚಕ್ತಿ ಮತ್ತು ಪರಶಕ್ತಿ ಎರಡು ಶಕ್ತಿಗಳ ಅಸ್ತಿತ್ವ.**
**2. ಚಿಚ್ಚಕ್ತಿ ಯಿಂದ ಪರಶಕ್ತಿ ಉದಯವಾಯಿತು**
**3. ಪರಶಕ್ತಿಯ ಸಂಗದಿಂದ ನೀನು (ಮಹಾಲಿಂಗ) ಪ್ರಸಾದಲಿಂಗವಾಯಿತು**
ಎನ್ನುವ ಮೂರು ತತ್ವಗಳನ್ನು ಮತ್ತು
4. **ಆ ಶಾಂತ್ಯತೀತೆಯೆಂಬ ಕಲೆಯಲ್ಲಿ ನಾನುದಯವಾಗಿ, ಆ ಪ್ರಸಾದಲಿಂಗಕ್ಕಾಶ್ರಯವಾಗಿ, ಶರಣರೂಪಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರುಬಲ್ಲರು ಹೇಳು?**
ಎನ್ನುವ ಒಂದು ಪ್ರಶ್ನೆಯನ್ನು ಒಳಗೊಂಡಿದೆ.
ಮೊದಲಿನ ಮೂರು ತತ್ವಗಳ ವಿವರ ಕೊಡುವ ಪ್ರಯತ್ನ ಇಲ್ಲಿದೆ.
ಆದರೆ ಇಲ್ಲಿರುವ ಪ್ರಶ್ನೆಗೆ ಉತ್ತರ ಕೊಡುವದನ್ನು ಭವಿತವ್ಯದಲ್ಲಿ ಪರಿಣಿತರು ಮಾಡಬೇಕಾಗಿದೆ.
ಶರಣರು ಚಿಚ್ಚಕ್ತಿ ಮತ್ತು ಪರಶಕ್ತಿ ಪದವನ್ನು ಅನೇಕ ಶರಣರು ತಮ್ಮ ವಚನಗಳಲ್ಲಿ ಉಪಯೋಗಿಸಿದ್ದಾರೆ ಮತ್ತು ಚಿಚ್ಚಕ್ತಿ ಯಿಂದ ಪರಶಕ್ತಿ ಉದಯವಾಯಿತು ಎನ್ನುವದನ್ನು ಪ್ರಸ್ತುತಪಡಿಸುತ್ತಿದ್ದಾರೆ.




ನಾನು ಅಯ್ದ ಕೆಲವು ವಚನಗಳನ್ನು ಉಪಯೋಗಿಸಿ ವಿವರಣೆ ಕೊಡುತ್ತಿಲ್ಲ. ಕಳೆದ ಅನೇಕ ಶತಮಾನಗಳ ಕಾಲ ಚರ್ಚಿಸಿ ಸರಿ ಎನಿಸಿದ ತತ್ವಗಳನ್ನು ತಮ್ಮ ವಚನದಲ್ಲಿ ವಿವರಿಸಿದ್ದಾರೆ.

ಅವೆಲ್ಲವುಗಳನ್ನು vachana.sanchaya.com ನಲ್ಲಿ ನೋಡಬಹುದು.

**1. ಚಿಚ್ಛಕ್ತಿ ಪದ ಉಪಯೋಗಿಸಿರುವ ವಚನಗಳು.**
**(20 ವಚನಕಾರರು 37 ವಚನಗಳಲ್ಲಿ 49 ಕಡೆ ಉಪಯೋಗಿಸಿದ್ದಾರೆ)**
**https://vachana.sanchaya.net/vachanas?utf8=%E2%9C%93&vachana=%E0%B2%9A%E0%B2%BF%E0%B2%9A%E0%B3%8D%E0%B2%9B%E0%B2%95%E0%B3%8D%E0%B2%A4%E0%B2%BF&search_type=like_search&vachanakaara=&commit=%E0%B2%B9%E0%B3%81%E0%B2%A1%E0%B3%81%E0%B2%95%E0%B3%81**

**2. ಶರಣರು ಪರಶಕ್ತಿ ಪದ ಉಪಯೋಗಿಸಿರುವ ವಚನಗಳು**
**(13 ವಚನಕಾರರು 37 ವಚನಗಳಲ್ಲಿ 49 ಕಡೆ ಉಪಯೋಗಿಸಿದ್ದಾರೆ)**
**https://vachana.sanchaya.net/vachanas?utf8=%E2%9C%93&vachana=%E0%B2%AA%E0%B2%B0%E0%B2%BE%E0%B2%B6%E0%B2%95%E0%B3%8D%E0%B2%A4%E0%B2%BF&search_type=like_search&vachanakaara=&commit=%E0%B2%B9%E0%B3%81%E0%B2%A1%E0%B3%81%E0%B2%95%E0%B3%81**

**3. ಪ್ರಸಾದಲಿಂಗ ಪದವನ್ನು 38 ವಚನಕಾರರು ತಮ್ಮ 236 ವಚನಗಳಲ್ಲಿ ಸುಮಾರು 369 ಕಡೆಗಳಲ್ಲಿ ಉಪಯೋಗಿಸಿದ್ದಾರೆ.**

**https://vachana.sanchaya.net/vachanas?utf8=%E2%9C%93&vachana=%E0%B2%AA%E0%B3%8D%E0%B2%B0%E0%B2%B8%E0%B2%BE%E0%B2%A6%E0%B2%B2%E0%B2%BF%E0%B2%82%E0%B2%97&search type=like search&vachanakaara=&commit=%E0%B2%B9%E0%B3%81%E0%B2%A1%E0%B3%81%E0%B2%95%E0%B3%81**

**ಚಿಚ್ಛಕ್ತಿ, ಪರಶಕ್ತಿ, ಮತ್ತು ಚಿಚ್ಛಕ್ತಿ ಯಿಂದ ಪರಶಕ್ತಿ ಉದಯವಾಯಿತು ಎನ್ನುವ ಬಗ್ಗೆ ಸಾಕಷ್ಟು ವಿವರಗಳನ್ನು ಒದಗಿಸಿದ್ದೇನೆ.**

**ಇಲ್ಲಿ ಇನ್ನೂ ಸ್ವಲ್ಪ ವಿವರಣೆ ಒದಗಿಸುವೆ.**

ಈ ಚಿತ್ರ ಶರಣರ ವಚನಗಳಲ್ಲಿ ವ್ಯಕ್ತವಾದ ವಿಚಾರಗಳಲ್ಲಿ ಇರುವ ಸಾಮ್ಯತೆಯನ್ನು ತೋರಿಸುತ್ತದೆ.

**ವಚನ 1 : ಚನ್ನಬಸವಣ್ಣ (12 ನೇಯ ಶತಮಾನ)**

ಹನ್ನೆರಡನೆ ಶತಮಾನದಲ್ಲಿ ಕಲ್ಯಾಣದ ಶರಣರಲ್ಲಿ ಅಗ್ರಗಣ್ಯನಾಗಿ ಆಚಾರ್ಯ ಪುರುಷನಾಗಿ ಬೆಳಗಿದ ಚೆನ್ನಬಸವಣ್ಣನು, ಭಕ್ತಿ, ಜ್ಞಾನ ವೈರಾಗ್ಯ ಮೂರ್ತಿಯಾಗಿ ಕಂಗೊಳಿಸಿದ್ದಾನೆ. ಚೆನ್ನಬಸವಣ್ಣನು ಅವಿರಳಜ್ಞಾನಿ, ಸದಮಲಜ್ಞಾನಿ, ಷಟುಸ್ಥಲ ಸ್ಥಾಪನಾಚಾರ್ಯ, ದಿವ್ಯಗುಣ ಸಂಪನ್ನನೆಂದು ಪ್ರಸಿದ್ಧನಾಗಿದ್ದಾನೆ. ಅನುಭವ ಮಂಟಪದ ಎಲ್ಲಾಕಾರ್ಯಗಳು ಚೆನ್ನಬಸವಣ್ಣನವರ ನೇತೃತ್ವದಲ್ಲಿ ನಡೆಯುತ್ತಿದ್ದವು. ಚೆನ್ನಬಸವಣ್ಣ ಶಿವಪಥದಲ್ಲಿ ಆಚಾರ್ಯರಾಗಿದ್ದಂತೆಯೇ ರಾಜನೀತಿಶಾಸ್ತ್ರಜ್ಞರಾಗಿದ್ದರು, ಶೂನ್ಯಪೀಠದ ಅಧ್ಯಕ್ಷರಾದರು. ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ ಮುಂತಾದ ಮತ ಪ್ರಕ್ರಿಯೆಗಳನ್ನು ರೂಪಿಸಿದರು. ಅವರು ೧೭೦೦ ಕ್ಕೂ ಹೆಚ್ಚು ವಚನಗಳನ್ನು ರಚಿಸಿರುವರು. ಕಲ್ಯಾಣ ಕ್ರಾಂತಿಯ ನಂತರ ಶರಣರನ್ನು ಮತ್ತು ವಚನ ಸಂಪತ್ತನ್ನು ರಕ್ಷಿಸುವ ಹೊಣೆಹೊತ್ತು ಹೋರಾಡಿದರು. ಕೊನೆಗೆ ಅವರು ಉಳವಿಯಲ್ಲಿ ಲಿಂಗೈಕ್ಯರಾದರು. ಅವರ ವಚನವೊಂದರಲ್ಲಿ ದೇವರ ನಿಲುವನ್ನು ಈ ರೀತಿ ಹೇಳಿದ್ದಾರೆ.




## ವಚನ 2: ಆದಯ್ಯ (12 ನೇಯ ಶತಮಾನ)




ಕಾಲ ಕ್ರಿ, ಶ. **೧೧೬೫**. 'ಸೌರಾಷ್ಟ್ರ ಸೋಮೇಶ್ವರ' ಅಂಕಿತದಲ್ಲಿ ವಚನ ಮತ್ತು ಸ್ವರವಚನಗಳನ್ನು ರಚಿಸಿದ್ದಾನೆ. 403 ವಚನಗಳು ದೊರೆತಿವೆ. ಶರಣ ಚಳುವಳಿಯ ಪ್ರಮುಖರಲ್ಲಿ ಆದಯ್ಯ ಒಬ್ಬ

## ವಚನ 3: ಬಾಲ ಸಂಗಯ್ಯ (15 ನೇಯ ಶತಮಾನ?)




**ವಚನ 4: ತೋಂಟದ ಸಿದ್ದಲಿಂಗ ಶಿವಯೋಗಿ (16 ನೇಯ ಶತಮಾನ)**

ಸಿದ್ದಲಿಂಗ ಶಿವಯೋಗಿಗಳು ಬಾಳಿದುದು ೧೬ನೇಯ ಶತಮಾನದಲ್ಲಿ. ಬಸವಾದಿ ಶರಣರ ವಚನ ಸಾಹಿತ್ಯವನ್ನು ಸಂಗ್ರಹಿಸುವ-ಸಂಕಲಿಸುವ-ಸಂಪಾದಿಸುವ ಕಾರ್ಯವನ್ನು ತಮ್ಮ ಶಿಷ್ಯರು ಕೈಕೊಳ್ಳುವಂತೆ ಮಾಡಿದ್ದು, ತಾವು ಸ್ವತ: ವಚನಗಳನ್ನು ರಚಿಸಿ ವಚನಸಾಹಿತ್ಯ ಪರಂಪರೆಯನ್ನು ಮುಂದುವರಿಸಿದ್ದು ಇವರ ಮುಖ್ಯ ಕೊಡುಗೆಗಳೆನಿಸಿವೆ. ಸಿದ್ದಲಿಂಗರು 701 ವಚನಗಳನ್ನು ರಚಿಸಿದ್ದಾರೆ. 'ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೆ' ಎಂಬ ಅಂಕಿತದ ಅವು 'ಷಟ್ ಸ್ಥಲ ಜ್ಞಾನಸಾರಾಮೃತ'




**ವಚನ 5: ಜಕ್ಕಣ್ಣಯ್ಯ (18 ಶತಮಾನ)**




ಕಾಲ ಸು.1800. 'ಝೇಂಕಾರ ನಿಜಲಿಂಗ ಪ್ರಭುವೆ' ಅಂಕಿತದಲ್ಲಿ 778 ವಚನಗಳು ದೊರೆತಿವೆ. ಇವರ ಕೃತಿಗೆ 'ನಿರಾಳ ಮಂತ್ರಗೋಪ್ಯ' ಎಂದು ಕರೆಯಲಾಗಿದೆ.

12 ನೆಯ ಶತಮಾನ ದಿಂದ 18 ನೇಯ ಶತಮಾನದವರೆಗೆ ಶರಣರು ತಮ್ಮ ವಚನಗಳಲ್ಲಿ ಚಿಚ್ಚಕ್ತಿ ವಿಶ್ವದಲ್ಲಿ ಉದಯವಾಯಿತು ಎನ್ನುವದನ್ನು ಪ್ರಸ್ತುತಪಡಿಸಿದ್ದಾರೆ.

ಅವರೆಲ್ಲರ ಪ್ರಕಾರ ವಿಶ್ವದ (ಇಲ್ಲಿ ವಿಶ್ವ ಅನಂತ ವಿಶ್ವಗಳ ಒಟ್ಟು ಸಮೂಹ) ಸಾವಿರದಲ್ಲಿ 999 ಭಾಗ ಈ ಚಿಚ್ಚಕ್ತಿ ಇದೆ. ಉಳಿದ ಸಾವಿರದ ಒಂದು ಭಾಗ ಚಿಚ್ಚಕ್ತಿ ಮಾತ್ರ ನಮಗೆ ಗೊತ್ತಿರುವ ವಿಶ್ವ ನಿರ್ಮಾಣವಾಗಿದೆ.




ಈಗ ವಿಜ್ಞಾನಿಗಳು ಶರಣರು ಹೇಳಿದ ವಿಶ್ವವನ್ನು ಕೆಲವು ಭಾಗಗಳಲ್ಲಿ ವಿಭಾಗಿಸಿಸ ಅಧ್ಯಯನ ಮಾಡುತ್ತಿದ್ದಾರೆ

**(1) ನಮಗೆ ಗೋಚರವಾಗುವ ವಿಶ್ವ. (ಇಲ್ಲಿ ಅನೇಕ ಕೋಟಿ ಬ್ರಾಹ್ಮಂಡಗಳಿವೆ) ಇದರ ಕೆಲವು ವಿವರಗಳು ಗೊತ್ತಾಗುತ್ತವೆ. 1998 ರಿಂದೀಚೆಗೆ Hubble telescope ^ಕಂದುಹಿಡಿದ ಮೇಲೆ ಬಹಳಷ್ಟು ವಿವರಗಳು ಗೊತ್ತಾಗುತ್ತಿವೆ.**

**(2) ನಮಗೆ ಗೋಚರವಾಗದ ವಿಶ್ವ.**

**(3) ಈಗಷ್ಟೇ ಪರಿಚಯವಾಗುತ್ತಿರುವ ಅನಂತ ವಿಶ್ವಗಳು.**

ವಿಜ್ಞಾನಿಗಳು ಕ್ರಿ ಶ 1998 ರಿಂದೀಚೆಗೆ ವಿಶ್ವದ (ಇಲ್ಲಿ ವಿಶ್ವ ಶಬ್ದ ನಮಗೆ ಗೋಚರವಾಗುವ ವಿಶ್ವವನ್ನು ಸೂಚಿಸುತ್ತದೆ.) 96% ದ ಭಾಗ ಯಾವುದೋ ಒಂದು ಅವ್ಯಕ್ತ ಶಕ್ತಿ (**Dark Energy**) ಮತ್ತು ಅವ್ಯಕ್ತ ಕಣಗಳಿಂದ (Dark Matter) ನಿರ್ಮಾಣ ಆಗಿದೆ ಎನ್ನುವ ವಿವರ ಕೊಡುತ್ತಿದ್ದಾರೆ.

**ಶರಣರು ಅನಂತ ವಿಶ್ವಗಳ ಅಸ್ತಿತ್ವನ್ನು ಒಪ್ಪಿ ಅದರಲ್ಲಿವ ಚಿಚ್ಛಕ್ತಿ ಪ್ರಮಾಣವನ್ನು ನಿರ್ಧರಿಸಿದ್ದಾರೆ.**

ಅದರೆ ವಿಜ್ಞಾನಿಗಳು ಇನ್ನೂ ಪ್ರಥಮ ಹಂತದಲ್ಲಿದ್ದು ಅವರು ನಮಗೆ ವಿಶ್ವದ ಅಲ್ಪ ಭಾಗದ ಗೋಚರವಾಗುವ ವಿಶ್ವದಲ್ಲಿರುವ (ಚಿಚ್ಛಕ್ತಿ) **Dark Energy ಪ್ರಮಾಣ ನಿರ್ಧರಿಸಿದ್ದಾರೆ.**




ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ವಿಜ್ಞಾನಿಗಳು ಇದುವರೆಗೆ ಅಧ್ಯಯನ ಮಾಡಿದ್ದು ನಮಗೆ ಗೋಚರವಾಗುವ 4% ವಿಶ್ವದ ಬಗ್ಗೆ ಮಾತ್ರ. ಇದೀಗ ಅನಂತ ವಿಶ್ವದ ಬಗ್ಗೆ ಅರಿಯಲು ಪ್ರಯತ್ನಿಸುತ್ತಿದ್ದಾರೆ.
ಈಗ ಶರಣರು ಪ್ರಸ್ತುತಪಡಿಸಿದ ಚಿಚ್ಛಕ್ತಿ ಮತ್ತು ವಿಜ್ಞಾನಿಗಳು ಸಾದರಪಡಿಸಿದ **Dark Energy** ವಿವರಣೆಗಳಲ್ಲಿರುವ ಸಾಮ್ಯತೆ ಮತ್ತು ವಿವಿಧತೆ ಅರಿಯುವಾ.
ಶರಣರು ಇಲ್ಲಿ ಅನಂತ ವಿಶ್ವಗಳನ್ನು ಗಮನದಲ್ಲಿಟ್ಟುಕೊಂಡು ತತ್ವ ಪ್ರತಿಪಾದನೆ ಮಾಡಿದ್ದಾರೆ, ಅದರೆ ವಿಜ್ಞಾನಿಗಳು ನಮ್ಮ ಗೋಚರವಾಗುವ ವಿಶ್ವಕ್ಕಷ್ಟೇ ಗಮನಹರಿಸಿದ್ದಾರೆ.




ಈ ವಚನದಲ್ಲಿ ಮಹಾಘನಲಿಂಗವು ಅಪ್ರಮೇಯ, ಅಗೋಚರ, ಅಪ್ರಮಾಣ, ಅನಂತ ವಾದ **ಚಿಚ್ಛಕ್ತಿ ಯ ಆಗರ ಎನ್ನುವದನ್ನು ಎಲ್ಲ ಶರಣರು ವಿವರಿಸಿದ್ದಾರೆ.**

**ಶರಣರ ವಚನದಲ್ಲಿ ಚಿಚ್ಛಕ್ತಿ ಬಗ್ಗೆ ಕೊಟ್ಟ ವಿವರಣೆ:**

1. ನಿಃಶಬ್ದವೆಂಬ ಪರಬ್ರಹ್ಮದ ಚಿಂತಾಶಕ್ತಿಯ **ಸಹಸ್ರಾಂಶದಲ್ಲಿ ಚಿಚ್ಛಕ್ತಿ ಹುಟ್ಟಿದಳು**
   --- ಬಾಲಸಂಗಯ್ಯ ಅಪ್ರಮಾಣ ದೇವ
2. ಹಜ್ಜೆ ಇಲ್ಲದ ಪುರುಷ, ಆ ಸಜ್ಜನಸ್ತ್ರೀ, ಷಡುಪಂಚಮರುದ್ರ, ಕಾಳಾಂಧರ, ವಾರಿದ್ಧಿ, ಆತ್ಮಾನಾತ್ಮ ಇಂತಿವೇನೂ ಇಲ್ಲದಂದು, **ಅತ್ತತ್ತಲಿರ್ದ ಬೆಳಗಿನ ಚಿನ್ಮೂರ್ತಿಯಲ್ಲಿ ಚಿದ್ವಿಭೂತಿ ಇದ್ದಿತ್ತು.** ಆ ಚಿದ್ವಿಭೂತಿ ಚಿದ್ಘನಾತ್ಮಕ ರತ್ನವಾಯಿತ್ತು. ಆ ಚಿದ್ಘನಾತ್ಮಕ ರತ್ನವೆ ಚಿಚ್ಛಕ್ತಿಯಾಯಿತ್ತು.
   --- ಸಂಗಮೇಶ್ವರದ ಅಪ್ಪಣ್ಣ
3. ಪರಶಿವನಿಂದ ಚಿಚ್ಛಕ್ತಿ. ಆ ಚಿಚ್ಛಕ್ತಿಯಿಂದ, ಪರಾ ಆದಿ ಇಚ್ಛಾ ಜ್ಞಾನ ಕ್ರಿಯೆಯೆಂಬ ಪಂಚಕಲಾಶಕ್ತಿಯರುದಯವಾದರು ನೋಡಾ
   --- ತೋಂಟದ ಸಿದ್ಧಲಿಂಗ ಶಿವಯೋಗಿಗಳು

1. ಆಕಾರ ನಿರಾಕಾರವಿಲ್ಲದಂದು, ಹಮ್ಮುಬಿಮ್ಮುಗಳಿಲ್ಲದಂದು, ಜೀವ ಪರಮರಿಲ್ಲದಂದು, ಮನ ಮನನ ಮನುನೀಯವಿಲ್ಲದಂದು, ಶೂನ್ಯ ನಿಶೂನ್ಯ ನಾಮ ನಿರ್ನಾಮ ಇವೇನೂ ಇಲ್ಲದೆ, **ಬಚ್ಚಬರಿಯ ಬಯಲೆ ಸಹಜದಿಂದ ಗಟ್ಟಿಗೊಂಡು, ಘನಲಿಂಗವೆಂಬ**

**ಪುರುಷತತ್ತ್ವವಾಯಿತ್ತಯ್ಯ. ಆ ಘನಲಿಂಗದಿಂದ ಚಿಚ್ಛಕ್ತಿ ಜನಿಸಿದಳು**. -------- ತೋಂಟದ ಸಿದ್ಧಲಿಂಗ ಶಿವಯೋಗಿಗಳು

2. **ಮಹಾಘನ ಪರಶಿವತ್ತ್ವದಲ್ಲಿ ಚಿತ್ತು ಉದಯಿಸಿತ್ತು.** ಆ ಚಿಚ್ಛಕ್ತಿಯಿಂದ ಶಿವಶರಣನುದಯಿಸಿದನು. .
   ----- ತೋಂಟದ ಸಿದ್ಧಲಿಂಗ ಶಿವಯೋಗಿಗಳು
4. ನಿಃಕಲ ಶಿವನ ಮಧ್ಯದಲ್ಲಿ ಚಚ್ಛಕ್ತಿ ಉದಯಿಸಿದಳು. ಆ ಚಿಚ್ಛಕ್ತಿಯ ಮಧ್ಯದಲ್ಲಿ ಶಾಂತ್ಯತೀತೋತ್ತರೆಯೆಂಬ ಕಲೆ. ಆ ಶಾಂತ್ಯತೀತೋತ್ತರೆಯೆಂಬ ಕಲೆಯ ಮಧ್ಯದಲ್ಲಿ ಮಹಾಲಿಂಗ.
   ----- ತೋಂಟದ ಸಿದ್ಧಲಿಂಗ ಶಿವಯೋಗಿಗಳು
6. ನಿರಾಕಾರ ಬಯಲು ಮೂರ್ತಿಗೊಂಡು ಮಹಾಜ್ಞಾನವೇ ಚಿತ್‌ಸ್ವರೂಪವಾಯಿತ್ತು. ಆ ಚಿಚ್ಛಕ್ತಿಸ್ವರೂಪವೇ ಶರಣನಾಗಿ ಮೂರ್ತಿಗೊಂಡನು ನೋಡಾ. ಆ ಶರಣನ ಸಹಸ್ರಾಂಶದಲ್ಲಿ ಸದಾಶಿವನಾದನು.
   ----- ತೋಂಟದ ಸಿದ್ಧಲಿಂಗ ಶಿವಯೋಗಿಗಳು
7. ಐಕ್ಯಂಗೆ ಆತ್ಮನೆ ಅಂಗ, ಆ ಅಂಗಕ್ಕೆ ಸದ್ಭಾವವೇ ಹಸ್ತ; ಆ ಹಸ್ತಕ್ಕೆ ಮಹಾಸಾದಾಖ್ಯ, ಆ ಸಾದಾಖ್ಯಕ್ಕೆ ಚಿಚ್ಛಕ್ತಿ. ಆ ಶಕ್ತಿಗೆ ಮಹಾಲಿಂಗ, ಆ ಲಿಂಗಕ್ಕೆ ಶಾಂತತೀತೋತ್ತರವೆ ಕಲೆ; ಆ ಕಲೆಗೆ ಹೃದಯೇಂದ್ರಿಯವೆ ಮುಖ, ಆ ಮುಖಕ್ಕೆ ಸುಪರಿಣಾಮದ್ರವ್ಯಂಗಳನು ರೂಪು ರುಚಿ ತೃಪ್ತಿಯನರಿದು ಸಮರಸಭಕ್ತಿಯಿಂದರ್ಪಿಸಿ, ಆ ಸುಪರಿಣಾಮಪ್ರಸಾದವ ಭೋಗಿಸಿ ಸುಖಿಸುತ್ತಿಹನು, ಕೂಡಲಚೆನ್ನಸಂಗಾ, ನಿಮ್ಮ ಲಿಂಗೈಕ್ಯನು.
   ---- ಚನ್ನಬಸವಣ್ಣ

ತೋಂಟದ ಸಿದ್ಧಲಿಂಗ ಶಿವಯೋಗಿಗಳು ಹೇಳಿದ
**“ಬಚ್ಚಬರಿಯ ಬಯಲೆ ಸಹಜದಿಂದ ಗಟ್ಟಿಗೊಂಡು, ಘನಲಿಂಗವೆಂಬ ಪುರುಷತತ್ತ್ವವಾಯಿತ್ತಯ್ಯ”**
ಎನ್ನುವ ಮಾತು ವಿಶ್ವದ ರಚನೆಯಾಗುವ ಮೊದಲು ವಿಶ್ವವೆಲ್ಲ ಬಯಲಾಯಿತ್ತು ಎನ್ನುವ ಈ ವಿವರ ಈಗ ವಿಜ್ಞಾನಿಗಳ ವಿವರಣೆ ಒಂದೇ ಆಗಿದೆ ಎನ್ನುವದು ತುಂಬಾ ಮಹತ್ವದ ಸಂಶೋಧನೆ. ಚಿತ್ರ ಗಮನಿಸಿದರೆ ಈ ವಿಷಯ ಗೊತ್ತಾಗುತ್ತದೆ.




**ಚಿಚ್ಛಕ್ತಿ ಬಗ್ಗೆ ಕೊಟ್ಟ ವಿಜ್ಞಾನಿಗಳ ವಿವರಣೆ**:

1998 ರಿಂದ ಈ ವರೆಗೆ ಅನೇಕ ವಿಜ್ಞಾನಿಗಳು ಈ ವಿಷಯವಾಗಿ ಅನೇಕ ಪ್ರಭಂಧಗಳನ್ನು ಮಂಡಿಸಿದ್ದಾರೆ ಕೆಳಗಿನ ಚಿತ್ರಗಳು ಆ ವಿವರ ಕೊಡುತ್ತವೆ. ಶರಣರು ಹೇಳಿದ ವಿಚಾರಗಳನ್ನು ಸಮರ್ಥಿಸುವದು ಸಾಧ್ಯವಾಗಿಲ್ಲ. ಇಲ್ಲಿರುವ ವೈಜ್ಞಾನಿಕ ವಿವರಗಳನ್ನು ವಿವರಿಸುವ ಅವಶ್ಯಕತೆಯಿಲ್ಲ ಎನಿಸುತ್ತಿದೆ ಚಿತ್ರ ನೋಡಿದರೆ ಸಾಕು.









**12 ನೇಯ ಶತಮಾನದಲ್ಲಿ ರಚನೆಯಾದ ವಚನಗಳಿಂದ ವಿಜ್ಞಾನಿಗಳಿಗೆ ಮಾರ್ಗದರ್ಶನ ಸಾಧ್ಯವೇ?**

ಎನ್ನುವ ಪ್ರಶ್ನೆ ನಿಮ್ಮ ಮನದಲ್ಲಿ ಮೂಡುವದು ಸಹಜ.

**ಅದರಲ್ಲೂ ವಚನಗಳು ತಾತ್ವಿಕ ಮತ್ತು ಧಾರ್ಮಿಕ ತತ್ವಗಳ ವಿವರಣೆಗಾಗಿ ರಚಿತವಾಗಿವೆ ಎನ್ನುವದನ್ನು ಒಪ್ಪಿಕೊಂಡರೂ ಅವುಗಳು ವೈಜ್ಞಾನಿಕ ತತ್ವಗಳನ್ನೂ ವಿವರಿಸುತ್ತವೆ ಎನ್ನುವದೂ ಸತ್ಯ.**
**ಈ ವೈಜ್ಞಾನಿಕ ಲೇಖನದಲ್ಲಿರುವ ವಿಷಯಗಳನ್ನು ವಚನಗಳು ವಿವರಿಸುತ್ತವೆ.**
**IOSR Journal of Applied Physics (IOSR-JAP) e-ISSN: 2278-4861.Volume 7, Issue 3 Ver. I**
**(May. - Jun. 2015), PP 01-07 www.iosrjournals.org**
**The Impact of Four Forces in Our Daily Life and the Approach of Uniting Them**
**Mu'ALLIM YAKUBU**
**(Physics Department, College Of Education Azare, Bauchi State Nigeria)**
**Abstract: This review is the impact of four forces in our daily life (gravity, electromagnetic, weak and strong force) and the approach of uniting them. It was shown that all the forces of nature are identical when the Universe was young. They are not different rather than the vibrating of the tiny string which split and give four forces and the kaluza Klein approach of uniting (Einstein and Maxwell Field) i.e. gravity and electromagnetic waves at fifth dimension. Keywords: Four forces, Daily life, Approach of uniting them (Gravity, Electromagnetic Weak and Strong force) I**
**https://iosrjournals.org/iosr-jap/papers/Vol7-issue3/Version-1/A07310107.pdf**
ಈಗ ವಚನಗಳಲ್ಲಿರುವ ತತ್ವಗಳು ವಿಶ್ವದ ರಚನೆ ಅರಿಯದೆ ದಿಕ್ಕುತೋಚದ ಸ್ಥಿತಿಯಲ್ಲಿರುವ ವಿಜ್ಞಾನಿಗಳಿಗೆ ದಾರಿದೀಪಗಳಾಗುತ್ತವೆ ಎನ್ನುವ ವಿವರಣೆ ಕೊಡುವ ಪ್ರಯತ್ನ ಇಲ್ಲಿದೆ.
ಈ ಚಿತ್ರವನ್ನು ಗಮನಿಸಿ




ಶರಣರು ಪರಾ, ಆದಿ, ಇಚ್ಛಾ, ಜ್ಞಾನ, ಕ್ರಿಯೆಯೆಂಬ ಐದು ಮೂಲಭೂತ ಶಕ್ತಿಗಳಿವೆ ಎನ್ನುವದನ್ನು ಆಧರಿಸಿ ವಿಶ್ವದ ಅರಿವು ಮಾಡಿಕೊಂಡಿದ್ದಾರೆ. ಆದರೆ ವಿಜ್ಞಾನಿಗಳು ನಾಲ್ಕು ಮೂಲಭೂತ ಶಕ್ತಿಗಳಿವೆ ಎನ್ನುವ ಆಧಾರದಲ್ಲಿ ಮುಂದುವರೆದು ದಾರಿಕಾಣದೆ (ತಾವು ಅಧ್ಯಯನ ಮಾಡದ ಶಕ್ತಿ ಯಾವದು?) ಮರಳಿ ಶರಣರ ಹಾದಿಯಲ್ಲಿ ಸಂಶೋಧನೆ ನಡೆಸಿದ್ದಾರೆ.

ವಿವರ ಭಾಗ 1:

**ತೋಂಟದ ಸಿದ್ದಲಿಂಗ ಶಿವಯೋಗಿಗಳು ತಮ್ಮ ವಚನದಲ್ಲಿ 16 ನೇಯ ಶತಮಾನದಲ್ಲಿ ಪ್ರಸ್ತುತಪಡಿಸಿದ್ದ ಮೂರು ನಿಖರವಾದ ತತ್ವಗಳು**

1. **ಆಕಾರ ನಿರಾಕಾರವಿಲ್ಲದಂದು, ಹಮ್ಮುಬಿಮ್ಮುಗಳಿಲ್ಲದಂದು, ಜೀವ ಪರಮರಿಲ್ಲದಂದು, ಮನ ಮನನ ಮನುನೀಯವಿಲ್ಲದಂದು, ಶೂನ್ಯ ನಿಶೂನ್ಯ ನಾಮ ನಿರ್ನಾಮ ಇವೇನೂ ಇಲ್ಲದೆ,**
2. **ಬಚ್ಚಬರಿಯ ಬಯಲೆ ಸಹಜದಿಂದ ಗಟ್ಟಿಗೊಂಡು, ಘನಲಿಂಗವೆಂಬ ಪುರುಷತತ್ತ್ವವಾಯಿತ್ತಯ್ಯ.**
3. **ಆ ಘನಲಿಂಗದಿಂದ ಚಿಚ್ಛಕ್ತಿ ಜನಿಸಿದಳು.**

**ವಿಜ್ಞಾನಿಗಳು 21 ನೇಯ ಶತಮಾನದಲ್ಲಿ ಈ ಮೂರು ವಿಚಾರಗಳನ್ನು ಒಪ್ಪಿಕೊಳ್ಳುವ ಹಂತದಲ್ಲಿದ್ದಾರೆ.**



## ವಚನಾಮೃತ ಬಿಂದು – 9
## ಶರಣರು ಪ್ರಾಥಮಿಕ ಅಧ್ಯಯನ ಮಾಡದ ಪ್ರತಿಭಾವಂತ ವಿಜ್ಞಾನಿಗಳು

12 ನೇಯ ಶತಮಾನದಲ್ಲಿ ಶರಣರು ರಚಿಸಿದ ವಚನಗಳೆಷ್ಟು ಎನ್ನುವ ವಿಚಾರ ಮನಕ್ಕೆ ಹೊಳೆದಾಗ ನೆನಪಾಗುವ ಶಿವಯೋಗಿ ಸಿದ್ದರಾಮೆಶ್ವರ ಅವರ ವಚನ

**ಅಲ್ಲಯ್ಯಗಳ ವಚನ ಎರಡೆಂಬತ್ತು ಕೋಟಿ.**
**ಅಪ್ಪಯ್ಯಗಳ ವಚನ ನಾಲ್ಕು ಲಕ್ಷದ ಮೂವತ್ತಾರು ಸಾಸಿರ.**
**ಎಮ್ಮಯ್ಯಗಳ ವಚನ ವಚನಕ್ಕೊಂದು.**
**ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ.**
**ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾಸಿರ.**
**ಎಮ್ಮಕ್ಕ ನಾಗಾಯಿಯ ವಚನ ಮೂರುಲಕ್ಷದ ತೊಂಬತ್ತಾರು ಸಾಸಿರ.**
**ಮಡಿವಾಳಣ್ಣನ ವಚನ ಮೂರು ಕೋಟಿಮುನ್ನೂರು.**
**ಹಡಪದಯ್ಯಗಳ ವಚನ ಹನ್ನೊಂದು ಸಾಸಿರ.**
**ಮರುಳಸಿದ್ದನ ವಚನ ಅರುವತ್ತೆಂಟು ಸಾಸಿರ.**
**ಇಂತಪ್ಪ ವಚನದ ರಚನೆಯ ಬಿಟ್ಟು,**
**ಹುಡಿಮಣ್ಣ ಹೊಯ್ಯದೆ ಮಾಬನೆ,**
**ಕುತ್ಸಿ ಕಾವ್ಯಾಲಂಕಾರ ನೋಡುವರ ನೋಡಿ,**
**ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನಾ.** / 200
(https://lingayatreligion.com/K/Vachanagalu/SiddharameshwaraVachana.htm
ನಾನು ಉಪಯೊಗಿಸಿರುವ ವಚನಗಳ ಮುಂದೆ ಇರುವ ಅಂಕಿಗಳು lingayatreligion.com ದಲ್ಲಿಯ ಸಂಖ್ಯೆಗಳು)

ಅನಂತ ವಚನಗಳನ್ನು ರಚಿಸಿದ ಶರಣರಲ್ಲಿ ಕೆಲವರನ್ನು ಹೊರತುಪಡಿಸಿದರೆ ಉಳಿದವರೆಲ್ಲ ಕಾಯಕಯೋಗಿಗಳು. ಅವರು ಯಾವ ಪ್ರಾಥಮಿಕ ವಿದ್ಯಾಭ್ಯಾಸಮಾಡಿರಲಿಲ್ಲ. ಆದರೂ ಅವರು ಈ ರೀತಿಯ ವಿಶ್ವಕ್ಕೆ ಮಾರ್ಗದರ್ಶನ ಮಾಅಡಬಲ್ಲ ಜ್ಞಾನಭರಿತ ವಚನಗಳನ್ನು ಅದು ಹೇಗೆ ರಚಿಸಲು ಸಾಧ್ಯವಾಯಿತು?

**ಪ್ರಾಥಮಿಕ ವಿದ್ಯಾಭ್ಯಾಸ ಇಲ್ಲದೇ ಬರಿ ಅನುಭವದ ಆಧಾರ ಮತ್ತು ಚಿಂತನೆಯ ನೆರವಿನಿಂದ ಶರಣರು ಆಧ್ಯಾತ್ಮಿಕ ಮತ್ತು ವೈಜ್ಞಾನಿಕ ತತ್ವಗಳನ್ನು ಪ್ರತಿಪಾದಿಸುವ ಈ ವಚನಗಳನ್ನು ರಚಿಸಲು ಸಾಧ್ಯವೇ?** ಎನ್ನುವ ಪ್ರಶ್ನೆ ಮನದಲ್ಲಿ ಮೂಡುವದು ಸಹಜ.

ಆ ಪ್ರಶ್ನೆಗೆ ಉತ್ತರ ನಾವು ಕೆಲವು ಮಹನೀಯರ ಸಾಧನೆ ಗಮನಿಸಿದರೆ ಸಿಗುತ್ತದೆ. ಉದಾಹರಣೆಗಾಗಿ ಸಾಹಿತ್ಯದಲ್ಲಾದರೆ **ಕಾಳಿದಾಸ** ಮತ್ತು **ವಿಲಿಯಂ ಷೇಕ್ಸ್‌ಪಿಯರ್** ಅವರ ಉದಾಹರಣೆ ಸಾಕು.







**ಕಾಳಿದಾಸ:** (5ನೇಯ ಶತಮಾನ)
ಮಹಾಕವಿ. ಸಂಸ್ಕೃತ ಭಾಷೆಯಲ್ಲಿ ಕಾವ್ಯಗಳ ನ್ನೂ, ನಾಟಕಗಳನ್ನೂ ರಚಿಸಿದ್ದಾರೆ. "ಕವಿಕುಲಗುರು" ಎಂದು ಪ್ರಖ್ಯಾತನಾದವನು. ಕುರುಬರ ವಂಶದಲ್ಲಿ ಹುಟ್ಟಿ, ಕುರಿ ಮೇಯಿಸುತ್ತಾ ಇದ್ದ ಸುಂದರಾಂಗನಾಗಿದ್ದನೆಂದು ಪ್ರತೀತಿ. ಯಾವ ರೀತಿಯ ವಿದ್ಯೆಯನ್ನೂ ಕಲಿಯದವನಾಗಿದ್ದು ಮುಗ್ಧನೂ ಮೂಢನೂ ಆಗಿದ್ದನಂತೆ. ಕಾಳಿಕಾದೇವಿಯ ವರದಿಂದ ವರಕವಿಯಾದನೆಂದು ಪ್ರತೀತಿ.

*ಮಹಾಕಾವ್ಯಗಳು:* *ರಘುವಂಶಮಂ,ಕುಮಾರಸಂಭವಮಂ*

*ಖಂಡಕಾವ್ಯಗಳು:* *ಮೇಘದೂತಮ್, ಋತುಸಂಹಾರಮ್*

*ನಾಟಕಗಳು:* *ಅಭಿಜ್ಞಾನ ಶಾಕುಂತಲಮ್, ಮಾಲವಿಕಾಗ್ನಿಮಿತ್ರಮ್ ವಿಕ್ರಮೋರ್ವಶೀಯಮ್*




ವಿಲಿಯಂ ಷೇಕ್ಸ್‌ಪಿಯರ್: (1564-1616)
ಇಂಗ್ಲಿಷ್ ಭಾಷೆಯ ಅತಿ ಶ್ರೇಷ್ಠ ಕವಿ-ಬರಹಗಾರ ಎಂದೂ ಜಗತ್ತಿನ ಸರ್ವಶ್ರೇಷ್ಠ ನಾಟಕಕಾರರಲ್ಲಿ ಒಬ್ಬರು. ಅವನನ್ನು ಇಂಗ್ಲೆಂಡಿನ ರಾಷ್ಟ್ರೀಯ ಕವಿ ಎಂದು ಕರೆಯುತ್ತಾರೆ.
ಹ್ಯಾಮ್ಲೆಟ್ (Hamlet), ಒಥೆಲೋ (Othello), ಕಿಂಗ್ ಲಿಯರ್ (King Lear), ಮ್ಯಾಕ್‌ಬೆಥ್ (Macbeth), ಆಂಟೊನಿ ಆಂಡ್ ಕ್ಲಿಯೋಪಾತ್ರ (Antony and Cleopatra)----- ಮುಂತಾದವುಗಳು ಇವರ ಪ್ರಸಿದ್ಧ ನಾಟಕಗಳು. ಮನೆಯಲ್ಲಿಯೇ ಶಿಕ್ಷಣ ಯಾವ ಪ್ರಾಥಮಿಕ ಅದ್ಯಯನ ಮಾಡಿದ ವಿವರಗಳು ಲಭ್ಯವಿಲ್ಲ.

ಇತ್ತೀಚೆಗಿನ ವರ್ಷಗಳಲ್ಲಿ ಗಣಿತದಲ್ಲಿ ಪವಾಡಸದೃಶ ಸಿದ್ಧಾಂತಗಳನ್ನು ಮಂಡಿಸಿದ ಗಣಿತಜ್ಞ ರಾಮಾನುಜನ್ ಅವರ ಉದಾಹರಣೆ ಇಲ್ಲಿ ಕೊಡುತ್ತಿರುವೆ.

**ಶ್ರೀನಿವಾಸ ರಾಮಾನುಜನ ಅಯ್ಯಂಗಾರ್ ರಾಮಾನುಜನ್**

(ಡಿಸಂಬರ್ 22, 1887 - ಏಪ್ರಿಲ್ 26, 1920)

ಯಾವುದೇ ಪ್ರಾಥಮಿಕ ಅಭ್ಯಾಸವಿಲ್ಲದ ಗಣಿತಜ್ಞ ರಾಮಾನುಜನ್ ಅವರೂ ಸಹ ತಮ್ಮ ಮನದಲ್ಲಿ ಎಲ್ಲಾ ಲೆಕ್ಕಾಚಾರ ಮಾಡಿ ಕೊನೆಗೆ ಬಂದ ಸಿದ್ಧಾಂತವನ್ನು ಒಂದು ಹಾಳೆಯಲ್ಲೋ ಅಥವಾ notebook ಹಳೆಯ ಪೇಪರದಲ್ಲಿದ್ದ ಖಾಲಿ ಜಾಗದಲ್ಲಿ, ಹಳೆಯ ನೋಟುಬುಕ್ಕಗಳಲ್ಲಿ ಬರೆಯುತ್ತಿದ್ದರು. ಅವರು ಬಿಟ್ಟುಹೋದ ಟ್ರಂಕಿನಲ್ಲಿದ್ದ ನಾಲ್ಕು ನೋಟಬುಕ್ಕಗಳು
George Andrews ( 1976) ಅವರಿಗೆ ಸಿಕ್ಕವು. ಅವುಗಳಲ್ಲಿದ್ದ ಸೂತ್ರಗಳನ್ನು ಹೊಸ ಹೊಸ ಸಿದ್ಧಾಂತಗಳ ಮೂಲಕ ಜಗತ್ತಿನಾದ್ಯಂತ ಸಿದ್ಧಮಾಡುತ್ತಿದ್ದಾರೆ ಮತ್ತು ಅನೇಕರು ಡಾಕ್ಟರೇಟ ಪದವಿ ಪಡೆಯುತ್ತಿದ್ದಾರೆ.
ಇದು ಹೇಗೆ ಸಾಧ್ಯವಾಯಿತು ಎನ್ನುವ ಪ್ರಶ್ನೆಗೆ ರಾಮಾನುಜನ್ ಕೊಟ್ಟ ಉತ್ತರ "ನಾನು ಗಾಢ ನಿದ್ರೆಯಲ್ಲಿದ್ದಾಗ ಕಾಣದ ಕೈಯೊಂದು ಕೆಂಪು ಬಣ್ಣದ ಪರದೆಯ ಮೇಲೆ ಬರೆದ ಸೂತ್ರಗಳು ನನ್ನ ಮನದಲ್ಲಿ ಅಚ್ಚಳಿಯದೇ ಉಳಿಯುತ್ತಿದ್ದವು ಅವುಗಳನ್ನು ಮುಂಜಾನೆ ನಾನು ಸಿಕ್ಕ ಕಾಗದದ ಮೇಲೆ ಗೀಜುತ್ತಿರುವೆ". ಇದು ಕಾಳಿದೇವಿ ಕಾಳಿದಾಸ ನಾಲಿಗೆಯ ಮೇಲೆ ತನ್ನ ತ್ರಿಶೂಲದಿಂದ ಮಹಾಕಾವ್ಯಗಳನ್ನು ಕೆತ್ತಿದಳು ಮತ್ತು ಕಾಳಿದಾಸ ಅವುಗಳನ್ನು ಬರೆದ ಎನ್ನುವ ಕಾಲ್ಪನಿಕ ಕಥೆಯನ್ನು ನೆನಪಿಸುತ್ತದೆ.
**"ಸಂಖ್ಯೆಗಳ ವೈಲಕ್ಷಣಗಳನ್ನು ನಂಬಲಸಾಧ್ಯವಾದಂಥ ರೀತಿಯಲ್ಲಿ ನೆನಪಿಡುವ'** ಅಪೂರ್ವ ಸಾಮರ್ಥ್ಯವಿತ್ತು.
ಜೇಮ್ಸ್ ಆರ್. ನ್ಯೂಮನರ **"ದಿ ವರ್ಲ್ಡ್ ಆಫ್ ಮ್ಯಾಥಮೆಟಿಕ್ಸ್"** ಎಂಬ ನಾಲ್ಕು ಸಂಪುಟಗಳ ಚಿರಸ್ಥಾಯಿ ಉದ್ಗ್ರಂಥದಲ್ಲಿ ರಾಮಾನುಜನ್ ಕುರಿತು ಈ ಉಲ್ಲೇಖವಿದೆ.
**"ಈ ಎಲ್ಲ ಪರಿಕರಗಳ ನೆರವಿಲ್ಲದೆಯೇ ಹೊಸ ವಿಚಾರಗಳನ್ನು ಮಂಡಿಸಬಲ್ಲ ಒಬ್ಬ ಜೀನಿಯಸ್ ಉದಯಿಸಿದರು"**. ನ್ಯೂಮನರು ಮುಂದುವರಿಸಿ, **"ಶ್ರೀನಿವಾಸ ರಾಮಾನುಜನ್ನರ ಜೀವನ ಒಂದು ಯುಗಾರಂಭವನ್ನು ಸೂಚಿಸುತ್ತದೆ. ಭಾರತದಲ್ಲಿ ವಿವಿಧ ಕಾಲ ಘಟ್ಟಗಳಲ್ಲಿ ಉನ್ನತ ಪ್ರತಿಭೆಯ ಗಣಿತಜ್ಞರಿದ್ದರು. ಕಾಲಾನುಕ್ರಮದಲ್ಲಿ ಅಂಥವರನ್ನು ಕೊನೆಯ ಗ್ರೀಕ್ ಕಾಲದವರೆಗೆ ಗುರುತಿಸಬಹುದು. ಆದರೆ ಉತ್ತುಂಗತೆಯ ನಿರಪೇಕ್ಷಮಾನದಿಂದ ಅಳೆದಾಗ ಪೌರ್ವಾತ್ಯ ಗಣಿತಜ್ಞರಲ್ಲೆಲ್ಲಾ, ರಾಮಾನುಜನ್ ಜೀನಿಯಸ್ ಅತ್ಯುಚ್ಚವೆಂದೆನಿಸುತ್ತದೆ"** ಎಂದು ಹೇಳಿದ್ದಾರೆ.


I have not trodden through a conventional university course, but I am striking out a new path for myself. I have made a special investigation of divergent series in general and the results I get are termed by the local mathematicians as 'startling.'
Srinivasa Ramanujan
Ramanujan (1887-1
A reference is made to Nam
the Goddess, whom Raman
worshiped. She used to app
his dreams, he claimed, and
him insights into mathemat
Ramanujan's knowledge of mathematics (most of which he had worked out for himsel
startling. Although he was almost completely unaware of
modern developments in mathematics, his mastery of con
fractions was unequaled by any living mathematician. He
worked out the Riemann series, the elliptic integrals,
hypergeometric series, the functional equations of the zeta
function, and his own theory of divergent series.


RAMANUJAN'S NOTEBOOK
Rananujan recorded his results in 4 notebooks. The most of his theorem are unproven
1 st notebook : 351 pages , 16 organised chapters
2 nd notebook : 256 pages , 21 chapters
3 rd notebook : 33 unorganised pages
4 th notebook called Ramanujan's lost notebook contain 87 organised pages
INDIA POSTAGE
"While asleep, I had an unusual experience. Ther
red screen formed by flowing blood, as it were. I
observing it. Suddenly a hand began to write on t
screen. I became all attention. That hand wrote a
number of elliptic integrals. They stuck to my mi
soon as I woke up, I committed them to writing."




ಆತನ ಗಣೀತೀಯ ವಿವರಗಳಿಂದ, ಸೂತ್ರಗಳಿಂದ ಪ್ರಭಾವಿತರಾಗಿ ಇಂಗ್ಲೆಂಡಿಗೆ ಕರೆಸಿಕೊಂಡ ಜಿ. ಎಚ್. ಹಾರ್ಡಿಯ ಸಹಚರರಲ್ಲಿ ಪ್ರಮುಖನಾದ ಮತ್ತೋರ್ವ ಗಣಿತಜ್ಞ ಜಾನ್ ಲಿಟಲ್‌ವುಡ್ ಪ್ರಕಾರ ಪ್ರತಿಯೊಂದು ಸಂಖ್ಯೆಯೂ ರಾಮಾನುಜನ್ನನ ವೈಯಕ್ತಿಕ ಗೆಳೆಯ. ಜಗತ್ತಿಗೆಲ್ಲಾ ಆತ ಸಂಖ್ಯಾ ಗಣಿತದ ಸೂತ್ರಗಳಿಂದ ಪರಿಚಿತನಾದ ರಾಮಾನುಜನ್, ನಿಜಕ್ಕೂ ಅರ್ಥವಾಗಲು ಆತನ ಸಾವಿನ ನಂತರ ಕನಿಷ್ಠ ಐದಾರು ದಶಕಗಳೇ ಬೇಕಾಯಿತು.

**ಭೌತವಿಜ್ಞಾನಿ ತಮ್ಮ ಈಗಿನ ತಮ್ಮ ಇತ್ತೀಚೆಗಿನ ಪುಸ್ತಕದಲ್ಲಿ ರಾಮಾನುಜನ್ ಅವರ ಸೂತ್ರಗಳನ್ನು ಉಪಯೋಗಿಸಿ ಅವರನ್ನು ಕೊಂಡಾಡಿದ್ದಾರೆ.**




ಈ ದಶಕದಲ್ಲಿ ನಡೆದ **String theory** ಸಂಶೋಧನೆಯಲ್ಲಿ ರಾಮಾನುಇಉನ್ ಅವರ ಸೂತ್ರಗಳು ಉಪಯುಕ್ತವಾಗಿವೆ.
ಈಗ ವಚನವನ್ನು ಅರ್ಥಮಾಡಿಕೊಳ್ಳಲು **String theory** ಉಪಯೋಗಿಸುವದು ಅನಿವಾರ್ಯ.
ಅಂದರೆ ರಾಮಾನುಜನ್ ಅವರ ಸೂತ್ರಗಳನ್ನು ವಚನಗಳ ಅರ್ಥ ಮಾಡಿಕೊಳ್ಳುವದರಲ್ಲಿ ಉಪಯೋಗಿಸುತ್ತಿರುವದು ಸಂತಸದ ವಿಷಯ.
**As physicists add two more dimensions to this 'miraculous' number 24, the counting the total number of vibrations appearing in relativistic theory yields a 26-dimensional space-time.**
**When, on the other hand, the Ramanujan function is generalised, the number 24 is replaced by the number 8. So, 26 becomes 10. In superstring theory, the string vibrates in 10 dimensions.**
ಆದರೆ **Dr Michio Kaku** ಅಂತಹ ಮಹಾನ್ ವಿಜ್ಞಾನಿಗಳಿಗೆ ವಚನಗಳಲ್ಲಿ ಅವರು ಸಿದ್ದಪಡಿಸುತ್ತಿರುವ ತತ್ವಗಳು ವಚನಗಳಲ್ಲಿ ಅಡಗಿವೆ ಎಂಬ ವಿಷಯ ಗೊತ್ತಾಗುವಂತೆ ಮಾಡುವ ಅವಶ್ಯಕತೆ ಇದೆ.
ಇತಿಹಾಸ ಪುಟ ತಿರುವಿದಾಗ ಪ್ರಾಥಮಿಕ ಶಿಕ್ಷಣವಿಲ್ಲದೇ ಅವರ ಪ್ರತಿಭೆಯ ಮತ್ತು ಪರಿಶ್ರಮ ದಿಂದ ಸಂಶೊಧನೆ ಮಾಡಿದವರು ವಿಶ್ವದ ಎಲ್ಲ ಕಡೆಗೆ ಸಿಗುತ್ತಾರೆ. ಇಲ್ಲಿ ಕೆಲವು ಪ್ರತಿಭಾವಂತರ ಪಟ್ಟಿ ಇದೆ.

Thomas Edison . . . (1847 – 1931),



inventor, holder of electrical, mechanical, and chemical patents, the "Greatest Inventor of All Time." Can Edison also be considered a research and development scientist (R&D scientist)? In support, both his New Jersey and Florida workplaces are referred to as "laboratories" and in 2014, the American Chemical Society, of which Edison was a member, designated his laboratories in New Jersey and Florida "National Historic Chemical Landmarks" because of his research and use of existing and new chemicals in his inventions and his efforts to find a new plant source for rubber.

**Famous Scientists Throughout History Who I**
**Degree**

Leonardo da Vinci . . . (1452 – 1519), mathe
anatomist, geologist, botanist, inventor, artis
Antonie van Leeuwenhoek . . . (1632 – 172
microbiologist, the "Father of Microbiology."
Benjamin Franklin . . . (1706 – 1790), physi
"America's First Scientist."
William Herschel . . . (1738 – 1822), astron
the planet Uranus.
Caroline Herschel . . . (1750 – 1848), astron
Mary Somerville . . . (1780 – 1872), mathem
science writer, "Queen of nineteenth centur

Mary Anning . . . (1799 – 1847), palaeontol
Charles Goodyear . . . (1800 – 1860), chem
the process of vulcanizing rubber.
William Darwin Fox . . . (1805 – 1880), natu
(insect researcher).
Charles Darwin . . . (1809 – 1882), naturali
theorist, geologist.
William Fox . . . (1813 – 1881), palaeontol
the William Darwin Fox above).
Henry David Thoreau . . . (1817 – 1862), na
famous author.
Thomas Henry Huxley (T.H. Huxley) . . . (18
biologist, anatomist, coined the term "agno







ಇದುವರೆಗೆ ಪ್ರಾಥಮಿಕ ವಿದ್ಯಾಭ್ಯಾಸವಿಲ್ಲದೇ ವೈಜ್ಞಾನಿಕ ಸಂಶೊಧನೆ ಮಾಡಿದ ಅನೇಕ ಪರಿಣಿತರ ಬಗ್ಗೆ ವಿವರ ಅರಿತಿದ್ದೇವೆ.

ಶರಣರೂ ಸಹ ಇದೇ ರೀತಿಯ ಪ್ರತಿಭವಂತರು ಅವರು ತಮ್ಮ ಅನುಭಾವದ ಆಧಾರದಲ್ಲಿ ವಚನಗಳನ್ನು ರಚಿಸಿದರು.

ದೇಹದ ಬಲಹೀನತೆಯನ್ನು ಅಂಗವಿಕಲತೆಯನ್ನೂ ಮೀರಿ ಏಕಾಗ್ರತೆಯಿಂದ ಯಾವ ಪರಿಕರದ ಸಹಾಯವಿಲ್ಲದೇ ಸಂಶೋಧನೆಗಳನ್ನು ಮಾಡಿದವರು ಹಲವರಿದ್ದಾರೆ. ಅವರಲ್ಲಿ **Stephen Hawking** ಒಬ್ಬರು.

**Stephen Hawking :**







ಅಲ್ಬರ್ಟ್ ಐನ್‌ಸ್ಟೀನ್ ನಂತರ ಜಗತ್ತು ಕಂಡ ಅತ್ಯಂತ ಅಸಾಮಾನ್ಯ ವಿಜ್ಞಾನಿ ಸ್ಟೀಫನ್ ಹಾಕಿಂಗ್. ದೈಹಿಕ ನ್ಯೂನತೆಯ ನಡುವೆಯೂ ತನ್ನ ಅಸಾಮಾನ್ಯ ಜ್ಞಾನದಿಂದ ಜಗದ್ವಿಖ್ಯಾತರಾಗಿದ್ದ ಖಭೌತವಿಜ್ಞಾನಿ ಸ್ಟೀಫನ್ ಹಾಕಿಂಗ್ ಅವರು ತಮ್ಮ 76 ವಯಸ್ಸಿನಲ್ಲಿ ಜಗತ್ತಿಗೆ ವಿದಾಯ ಹೇಳಿದರು.

1988ರ ಹೊತ್ತಿಗೆ ಮಾತನಾಡಲು ಮಾತ್ರ ಹಾಕಿಂಗ್ ಗೆ ಸಾಧ್ಯವಿತ್ತು. ಇದರ ನಡುವೆಯೇ ಅವರು ತಮ್ಮ ಜನಪ್ರಿಯ

**'ಎ ಬ್ರೀಫ್ ಹಿಸ್ಟರಿ ಆಫ್ ಟೈಮ್'** ಬರೆದು ಮುಗಿಸಿದರು. ಆಗ ಈ ಪುಸ್ತಕದ ಒಂದು ಕೋಟಿಗೂ ಹೆಚ್ಚು ಪ್ರತಿಗಳು ಮಾರಾಟವಾದವು.

ಆದರೆ, ಕೊನೆಯವರೆಗೂ ಬ್ರಹ್ಮಾಂಡ ಏಕೆ ಮತ್ತು ಹೇಗೆ ಉಗಮವಾಗಿದೆ ಎಂಬ ಪ್ರಶ್ನೆ ಶರಣರಂತೆ ಅವರನ್ನೂ ಕಾಡಿತ್ತು.

ಹೀಗೆ ಕುಂತಲ್ಲೇ ಕೂತು ಅವರು ವಿಜ್ಞಾನದ ಆಳಕ್ಕೆ ಇಳಿಯುತ್ತಿದ್ದ, ವಿಜ್ಞಾನದ ಒಗಟುಗಳಿಗೆ ಲೆಕ್ಕಾಚಾರಗಳನ್ನು ಹಾಕದೆ, ಪ್ರಯೋಗಗಳನ್ನು ಮಾಡದೆ ಉತ್ತರ ನೀಡುವ ವಿಶಿಷ್ಟ ಶಕ್ತಿ ಒಲಿದಿದ್ದ ಸ್ಟೀಫನ್ ಹಾಕಿಂಗ್ ಇಂದು ಅವರ ವಿಚಾರಧಾರೆಗಳಿಂದಲೇ ನಮ್ಮ ನೆನಪಿನಲ್ಲಿ ಉಳಿದಿದ್ದಾರೆ..

ಜಗತ್ತು ಸೃಷ್ಟಿಯಾಗಿದ್ದು ಹೇಗೆ, ಜಗತ್ತಿನ ರಚನೆ ಹೇಗಿದೆ. ಹೀಗೆ ಹತ್ತು ಹಲವು ಭೌತ ವಿಜ್ಞಾನದ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ ವಿಖ್ಯಾತ ವಿಜ್ಞಾನಿ ಸ್ಟೀಫನ್ ವಿಲಿಯಂ ಹಾಕಿಂಗ್ ಅವರು ನಮ್ಮಿಂದ ದೂರವಾಗಿರಬಹುದು. ಆದರೆ, ಅವರು ಹತ್ತು ಹಲವು ಭೌತ ವಿಜ್ಞಾನದ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ ಅವರ ಸಂಶೋಧನೆಗಳು, ಅವರ ವಿಚಾರಧಾರೆಗಳು ನಮ್ಮನ್ನು ಈಗಲೂ ಅವರನ್ನು ನೆನಪಿಸಿಕೊಳ್ಳುವಂತೆ ಮಾಡುತ್ತಿವೆ.

ಸ್ನಾತಕೋತ್ತರ ಅಧ್ಯಯನಕ್ಕೆ ಕಾಸ್ಮಾಲಜಿ ವಿಷಯವನ್ನು ಆಯ್ಕೆ ಮಾಡಿಕೊಂಡು ಕೇಂಬ್ರಿಡ್ಜ್ ವಿವಿಯಲ್ಲಿ ಅಭ್ಯಾಸ ಮಾಡಿದರು.

ಇದೇ ವೇಳೆಯಲ್ಲಿ 'ಮೋಟರ್ ನ್ಯೂರಾನ್' ಎಂಬುದು ಕೋಟಿಯಲ್ಲಿ ಒಬ್ಬರಿಗೆ ಅಪರೂಪಕ್ಕೆ ಬರುವ ವಿಚಿತ್ರ ರೋಗಕ್ಕೆ ತುತ್ತಾದರು! ಖಾಯಿಲೆ ಎಂದರೆ ಅದು ಎಂತಹ ಖಾಯಿಲೆ ಎಂದು ನೀವು ಊಹೆ ಮಾಡಬಹುದು. ಮಾನವನ ನರನಾಡಿಗಳನ್ನು ನಿಯಂತ್ರಿಸುವ ಕೇಂದ್ರ ನರಮಂಡಲ ಕೊಂಚ ಕೊಂಚವಾಗಿಯೇ ತನ್ನ ವ್ಯಾಪ್ತಿಯ ಕಾರ್ಯವನ್ನು ಸ್ಥಗಿತಗೊಳಿಸುತ್ತಾ ಸಾಗುವ ರೋಗವೇ ಈ ನ್ಯೂರಾನ್ ಖಾಯಿಲೆ.!

ಆಯ್ದ ಪ್ರಸಿದ್ಧ ಹೇಳಿಕೆಗಳು ಇಲ್ಲಿವೆ.

1) ಈ ಭೂಮಿ ಮತ್ತು ಮನಕುಲ ಸದಾ ಜಾಗತಿಕ ತಾಪಮಾನ, ಅಣ್ವಸ್ತ್ರಗಳು, ಕೃತಕ ಬುದ್ಧಿಮತ್ತೆ, ಅಪಾಯಕಾರಿ ರೋಗಾಣುವಿನಂತಹ ಆತಂಕಗಳನ್ನು ಎದುರಿಸುತ್ತಲೇ ಬದುಕುತ್ತಿವೆ.
2) ನಾನು ಸಾವಿನ ಬಗ್ಗೆ ಹೆದರುವುದಿಲ್ಲ, ಆದರೆ ನಾನು ಸಾಯುವದಕ್ಕೂ ಸಹ ಇಚ್ಛಿಸುವುದಿಲ್ಲ. ಅದಕ್ಕೂ ಮೊದಲು ನಾನು ಮಾಡಲು ಬಯಸುತ್ತೇನೆ.
3) ನನ್ನ ಗುರಿ ತುಂಬಾ ಸರಳ. ನಾನು ಬ್ರಹ್ಮಾಂಡವನ್ನು ಸಂಪೂರ್ಣವಾಗಿ ಅರಿತುಕೊಳ್ಳಬೇಕು ಅಷ್ಟೇ. ಬ್ರಹ್ಮಾಂಡ ಏಕೆ ಮತ್ತು ಹೇಗೆ ಉಗಮವಾಗಿದೆ ಎಂದು ನಾನು ತಿಳಿದುಕೊಳ್ಳಬೇಕಿದೆ.

4) ಪುರಾತನ ಕಾಲದ ಕೃತಕ ಬುದ್ದಿಮತ್ತೆಯಿಂದಲೇ ನಾವು ಅಸ್ತಿತ್ವ ಕಂಡುಕೊಂಡಿದ್ದೇವೆ. ಆದರೆ, ಹೊಸ ಕೃತಕ ಬುದ್ದಿಮತ್ತೆಯು ಮಾನವ ಜನಾಂಗದ ವಿನಾಶಕ್ಕೆ ಕಾರಣವಾಗಲಿದೆ
5) 21ನೇ ವರ್ಷದಲ್ಲಿ ರೋಗ ಕಾಡಲು ಆರಂಭಿಸಿದಾಗ ನನ್ನ ಎಲ್ಲ ನಿರೀಕ್ಷೆಗಳು ಪಾತಾಳಕ್ಕೆ ಕುಸಿದವು. ಅಲ್ಲಿಂದ ಮುಂದೆ ದೊರೆತಿದ್ದೆಲ್ಲ ಬೋನಸ್
6) ಬಾಹ್ಯಾಕಾಶ ಪ್ರವೇಶಿಸದಿದ್ದರೆ ಮಾನವ ಕುಲಕ್ಕೆ ಭವಿಷ್ಯ ಇಲ್ಲ. ಕೃಷ್ಣ ರಂಧ್ರ(ಬ್ಲ್ಯಾಕ್ ಹೋಲ್) ದ ಬಗ್ಗೆ ಅಭ್ಯಸಿಸಿ, ಮಿತಿಯನ್ನು ದಾಟಿದವರು ಅವರು.

**Stephen Hawking** ಅವರು ತಮ್ಮ ಜೀವಮಾನದುದ್ದಕ್ಕೂ ವಿಶ್ವದ ರಚನೆಯ ಬಗ್ಗೆ ಚಿಂತಿಸಿ ಅನೇಕ ಸಂಶೋಧನಾ ಪ್ರಭಂಧಗಳನ್ನು ಪ್ರಕಟಿಸಿದ್ದಾರೆ. ಅವರ ಕೊನೆಯ ಪ್ರಭಂಧ ಕೂಡ ವಿಶ್ವ ರಚನೆಗೆ ಕುರಿತಾದ ವಿಷಯಗಳನ್ನು ವಿವರಿಸುತ್ತದೆ.

12 ನೇಯ ಶತಮಾನ ದಿಂದ 18 ನೇಯ ಶತಮಾನದವರೆಗೆ ರಚನೆಯಾದ ಅನೇಕ ವಚನಗಳಲ್ಲಿರುವ ವಿಶ್ವರಚನೆಯ ವಿವರಗಳನ್ನೇ **Stephen Hawking** ಅವರು ಪ್ರತಿಪಾದಿಸುತ್ತಿದ್ದಾರೆ ಎನಿಸುತ್ತದೆ.

**ಈ ಲೇಖನದಲ್ಲಿ Stephen Hawking ಅವರ ವಿಚಾರಗಳು ಮತ್ತು ಶರಣರ ವಚನಗಳಲ್ಲಿರುವ ವಿವರಗಳಲ್ಲಿರುವ ಸಾಮ್ಯತೆ ಮತ್ತು ವಿಭಿನ್ನತೆ ವಿವರ ಕೊಡುವ ಪ್ರಯತ್ನವಿಲ್ಲಿದೆ.**

ವಿಶ್ವ ವಿಕಾಸವನ್ನು ಮೂರು ಹಂತಗಳಲ್ಲಿ ಅಧ್ಯಯನಮಾಡಬಹುದು, ಇಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ಪ್ರಯತ್ನಮಾಡಲಾಗುತ್ತದೆ.

1. ಮಾಹಾಸ್ಫೋಟಕ್ಕೂ ಮೊದಲು ಏನಿತ್ತು?
2. ಮಹಾಸ್ಫೋಟವಾಗುವಾಗ ಏನಿತ್ತು?
3. ಮಹಾಸ್ಫೋಟದ ನಂತರ ಏನಾಯಿತು?

ನಾವಿಲ್ಲಿ ಈ ಮೂರು ಪ್ರಶ್ನೆಗೆ ಶರಣರು ಮತ್ತು ವಿಜ್ಞಾನಿಗಳು ಕೊಟ್ಟ ಉತ್ತರಗಳ ಸಾಮ್ಯತೆ ಅಥವಾ ವಿಭಿನ್ನತೆ ವಿವರಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವ ಪ್ರಯತ್ನ ಮಾಡುವೆ.




**Stephen Hawking** ಅವರು ತಮ್ಮ ಸಂಶೋಧನೆಗಳಲ್ಲಿ ವಚನಕಾರರು ಪ್ರತಿಪಾದಿಸಿದ ಅನೇಕ ತತ್ವಗಳನ್ನು ಒಪ್ಪಿಕೊಂಡು ಅವುಗಳನ್ನು ವೈಜ್ಞಾನಿಕವಾಗಿ ಸಿದ್ಧಗೊಳಿಸಿದ್ದಾರೆ. ನಾನು ಅನೇಕ ಉದಾಹರಣೆಗಳನ್ನು ಮುಂದೆ ಕೊಡುವೆ. ಅದರಲ್ಲಿಯೂ ಅವರು ಪ್ರತಿಪಾದಿಸಿದ ತತ್ವಗಳು "ಕೂಡಲಸಂಗಮದೇವ"ನನ್ನು ಅರಿಯಲು ತುಂಬಾ ಸಹಕಾರಿ. ಒಟ್ಟಾರೆಯಾಗಿ ಹೇಳುವದಾದರೆ 'ದೇಹವನ್ನು ನಿಶ್ಚಲಗೊಳಿಸಿ ಮನಸ್ಸನ್ನು ಏಕಾಗ್ರತೆಗೊಳಿಸಿದಾಗ ಮನದಲ್ಲಿ ಅನೇಕ ಹೊಸ ವಿಚಾರಗಳು ಮೂರ್ತರೂಪಪಡೆಯುತ್ತವೆ" ಎಂದು ಹೇಳಬಹುದು. ಇಷ್ಟಲಿಂಗ ಪೂಜಾ ವಿಧಾನದಿಂದ ದೇಹವನ್ನು ನಿಶ್ಚಲಗೊಳಿಸಿ ಮನವನ್ನು ಜಾಗ್ರುತಗೊಳಿಸಿ ಅಜ್ಞಾನದಿಂದ ಜ್ಞಾನದ ಕಡೆಗೆ ಸಾಗಬಹುದೇನೋ?

ಹಾಕಿಂಗ್ಸ್ ವೈದ್ಯರಲ್ಲಿ ಕೇಳುವ ಪ್ರಶ್ನೆ,

**‘ಸರಿ, ಇಡೀ ದೇಹ ನಿಷ್ಕ್ರಿಯಗೊಂಡರೂ ಮೆದುಳು ನಿಷ್ಕ್ರಿಯಗೊಳ್ಳುತ್ತದೆಯೇ?’** ಎಂಬುದು.
ವೈದ್ಯರು ಮೆದುಳಿಗೆ ಯಾವ ಸಮಸ್ಯೆಯೂ ಇರದು ಎಂದಾಗ ಹಾಕಿಂಗ್ಸ್ ಗೆ ಮತ್ತೊಂದು ಬದುಕು ಸಿಕ್ಕಂತಾಗುತ್ತದೆ.
ಬಳಿಕ ಆವರು 76 ವರ್ಷ ಬದುಕಿದ್ದು **(08 Jan 1942 - 14 Mar 2018)** ಮೆದುಳು ಹಾಗೂ ಆತ್ಮಸ್ಥೈರ್ಯದ ಮೂಲಕ. ತನ್ನ ಬದುಕಿನ ಸೀಮಿತತೆಯನ್ನು ಅರ್ಥ ಮಾಡಿಕೊಂಡ ಮೇಲೂ ಅವರು ಕಂಡಿದ್ದು ಅನಂತವನ್ನೇ..
ಕೆಲ ವರ್ಷಗಳ ಬಳಿಕ ಪುರಸ್ಕಾರವೊಂದನ್ನು ಸ್ವೀಕರಿಸಿ ನೀಡಿದ ಉಪನ್ಯಾಸದಲ್ಲಿ ಹೇಳಿದ ಮಾತು-
**“ಮನುಷ್ಯನ ಗುರಿ ಸಾಧನೆಗೆ ಯಾವುದೇ ಅಡ್ಡಿಗಳಿಲ್ಲ. ನಾವೆಲ್ಲರೂ ವಿಭಿನ್ನವೇ. ಎಷ್ಟೇ ಕೆಟ್ಟದಾದ, ಕಷ್ಟವಾದ ಬದುಕನ್ನು ನೀವು ಕಂಡಿದ್ದರೂ ಅದರಲ್ಲಿ ಏನಾದರೂ ಮಾಡಲಿಕ್ಕೆ, ಸಾಧಿಸಲಿಕ್ಕೆ ಅವಕಾಶವಿದ್ದೇ ಇದೆ. ಎಲ್ಲಿ ಬದುಕಿದೆಯೋ, ಅಲ್ಲಿ ಭರವಸೆ ಖಂಡಿತಾ ಇದೆ’.**
ಇನ್ನೊಂದು ಉತ್ತಮ ಉದಾಹರಣೆ 300 ಕ್ರ ಪೂ ದಲ್ಲಿದ್ದ ಮಹಾನ ಗಣಿತಜ್ಞ ಯೂಕ್ಲಿಡ್.

**Euclid**, Greek **Eukleides**, (flourished c. 300 BCE, Alexandria, Egypt) ಅಂದು ಅವನು ಕ್ರಮಬದ್ಧವಾಗಿ **definitions, postulates, propositions (theorems and constructions** ಉಪಯೋಗಿಸಿ ಬರೆದ ಪುಸ್ತಕ **"The Elements”** ಇಂದಿಗೂ ಮತ್ತು ಎಂದೆಂದಿಗೂ ಅಪೂರ್ವವಾದ ಮಾರ್ಗದರ್ಶಕ ಪುಸ್ತಕ.




**(“The Elements” cover plane and solid Euclidean geometry. It is a collection of definitions, postulates, propositions (theorems and constructions), and mathematical proofs of the propositions. Geometry, elementary number**

**theory, and incommensurable lines. Elements is the oldest extant large-scale deductive treatment of mathematics**

ವಚನಗಳು ಸಹ ಇದೇ ರೀತಿಯಲ್ಲಿ ರಚಿತವಾದ ಪ್ರಮೇಯಗಳು. ಅನುಭವದ ಆಧಾರ ಮತ್ತು ಚಿಂತನೆಯ ನೆರವಿನಿಂದ ವೈಜ್ಞಾನಿಕ ತತ್ವಗಳನ್ನು ತಮ್ಮ ವಚನಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಅವುಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ.

**ಅರಿವಿನಲ್ಲಿ ಉದಯಿಸಿ ಮರಹು ನಷ್ಟವಾಗಿರ್ದ**
**ಶರಣನ ಪರಿಯನರಸಲುಂಟೆ ? ಗತಿಯ ಹೇಳಲುಂಟೆ ?**
**ಶಿಶು ಕಂಡ ಕನಸಿನಂತಿಪ್ಪರು ಗುಹೇಶ್ವರಾ ನಿಮ್ಮ ಶರಣರು** ! / 217---ಅಲ್ಲಮಪ್ರಭು

ಮೇಲಿನ ವಿವರಣೆ ಓದಿದ ಮೇಲೆ ಮನದಲ್ಲಿ ಸಹಜವಾಗಿ ಹುಟ್ಟುವ **ಓದದೇ, ಬರೆಯದೇ ಮತ್ತು ಪ್ರಯೋಗ ಮಾಡದೇ ಕ್ಲಿಷ್ಟ ವೈಜ್ಞಾನಿಕ ತತ್ವಗಳನ್ನು ಬರಿ ಮನಸ್ಸನ್ನು ಏಕಾಗ್ರತೆಗೊಳಿಸಿ ಅರ್ಥಮಾಡಿಕೊಂಡು ಸಂಶೋಧನೆ ಮಾಡಿ ಹೊಸ ಹೊಸ ತತ್ವಗಳ ಆವಿಷ್ಕಾರ ಮಾಡಲು ಸಾಧ್ಯವೇ ?**

**ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕಿತು ಅಲ್ಲವೇ/**

ಈ ಪ್ರಶ್ನೆಗೆ ಉತ್ತರವನ್ನು ಸೋಮೇಶ್ವರ ಶತಕದಲ್ಲಿ ನಾವು ಕಾಣಬಹುದು.

**"ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ |**
**ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ||**
**ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ |**
**ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ."**

ಮನಸ್ಸನ್ನು ಏಕಾಗ್ರಗೊಳಿಸಿ ಅನೇಕ ವೈಜ್ಞಾನಿಕ ತತ್ವಗಳನ್ನು ತಾರ್ಕಿಕವಾಗಿ ಸಂಶೋಧಿಸಬಹುದು ಎಂದು 12 ನೇಯ ಶತಮಾನದಲ್ಲಿ ಶರಣರು ಸಾಧಿಸಿ ತೋರಿಸಿದ್ದಾರೆ.

ಕಾಯಕಯೋಗಿಗಳೆಲ್ಲ ಕಲ್ಯಾಣಕ್ಕೆ ಬಂದು ನೆಲೆಸಿದ ಮೇಲೆ ಅನುಭವಮಂತಪದಲ್ಲಿ ಅವರಿಗೆ ಆಧ್ಯಾತ್ಮಿಕ ವಿಷಯಗಳ ಜ್ಞಾನ

ಪ್ರಾಪ್ತವಾಗುತ್ತಿದ್ದರೂ ಅವರಿಗೆ ಅಕ್ಷರ ಜ್ಞಾನ, ವಿಷಯ ಜ್ಞಾನ ಮತ್ತು ಕಾಯಕಗಳಲ್ಲಿ ತರಬೇತಿ ಕೊಡುವ ವ್ಯವಸ್ಥೆ ಕಲ್ಯಾಣದಲ್ಲಿತ್ತೇ?
ಈ ಪ್ರಶ್ನೆಗೆ ಉತ್ತರ ಹುಡುಕಲು ಹೊರಟಾಗ ಸಿಕ್ಕ ಉತ್ತರ ನಮಗೆ ಚನ್ನಬಸವಣ್ಣನವರ ವಚನದಲ್ಲಿ ಸಿಗುತ್ತದೆ.

**ಚನ್ನಬಸವಣ್ಣನವರ ವಚನ**

**ಸ್ವಸ್ತಿ ಸಮಸ್ತಪ್ರಶಸ್ತಿ ಸಹಿತಂ ಶ್ರೀಮತ್ ಕಲ್ಯಾಣಪುರದ ಮಹಾತ್ಮ್ಯ ಎಂತೆಂದಡೆ:**

**------------**

**ಇನ್ನು ಬಸವರಾಜದೇವರು ಮುಖ್ಯವಾದ ಅಸಂಖ್ಯಾತರ ಮಠಂಗಳು ಆ ಕಲ್ಯಾಣದೊಳಗೆ**

**ಎಷ್ಟು ಎಂದಡೆ:**

**ಹನ್ನೆರಡು ಸಾವಿರ ಕಟ್ಟಳೆಯ ನೇಮದ ಭಕ್ತರ ಮಠಂಗಳು 12,000**

**ಇಪ್ಪತ್ತೆಂಟು ಸಾವಿರ ಮಹಾಮನೆಗಳು; 28,000**

**ಹತ್ತು ಸಾವಿರ ನಿತ್ಯನೇಮಿಗಳ ಮಠಂಗಳು; 10,000**

**ಹದಿನೈದು ಸಾವಿರ ಚಿಲುಮೆಯಗ್ಗವಣಿಯ ವ್ರತಸ್ಥರ ಮಠಂಗಳು; 15,000**

**ಐದು ಸಾವಿರ ವೀರವ್ರತನೇಮಿಗಳ ಕಟ್ಟಳೆಯ ಮಠಂಗಳು; 5,000**

**ಹನ್ನೆರಡು ಸಾವಿರ ಅಚ್ಚಪ್ರಸಾದಿಗಳ ಮಠಂಗಳು, 12,000**

**ಒಂದು ಸಾವಿರ ಅರವತ್ತು ನಾಲ್ಕು ಶೀಲಸಂಪನ್ನರ ಮಠಂಗಳು;**
**(ಇವನ್ನು ಪರಿಗಣಿಸಿಲ್ಲ ) 1064??**
**(ಕಾಯಕ ತರಬೇತಿ ಮತ್ತು ಶಿಕ್ಷಣಕ್ಕೆ ಮೀಸಲಾದ ಮಠಗಳು)**

**ನಿತ್ಯ ಸಾವಿರ ಜಂಗಮಕ್ಕೆ ಆರೋಗಣೆಯ ಮಾಡಿಸುವ ದಾಸೋಹಿಗಳ ಮಠಂಗಳು ಮೂವತ್ತೆರಡು ಸಾವಿರ; 32000**

**ನಿತ್ಯ ಐನೂರು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ಸತ್ಯಸದಾಚಾರಿಗಳ ಮಠಂಗಳು ಐವತ್ತೆಂಟು ಸಾವಿರ;**

**58,000**

**ನಿತ್ಯ ಸಾವಿರದೈನೂರು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ದಾಸೋಹಿಗಳ ಮಠಂಗಳು ಹನ್ನೊಂದು ಸಾವಿರ; 11,000**
**ನಿತ್ಯ ಅವಾರಿಯಿಂದ ಮಾಡುವ ಮಾಟಕೂಟದ ಸದ್ಭಕ್ತರ ಮಠಂಗಳು ಒಂದು ಲಕ್ಷ; 1,00,000**
**ಜಂಗಮಸಹಿತ ಸಮಯಾಚಾರದಿಂದ ಲಿಂಗಾರ್ಚನೆಯ ಮಾಡುವ ಜಂಗಮಭಕ್ತರ ಮಠಂಗಳು ಎರಡು 2,770 ಸಾವಿರದೇಳ್ನೂರೆಪ್ಪತ್ತು;**
**(ಒಟ್ಟು 2,85,770)**
**ಅಂತು ಎರಡು ಲಕ್ಷವು ಎಂಬತ್ತೈದು ಸಾವಿರದ ಏಳುನೂರೆಪ್ಪತ್ತು.**
**-------------**
**ಕೂಡಲಚೆನ್ನಸಂಗಮದೇವಾ, ನಿಮ್ಮ ಭಕ್ತ ಬಸವಣ್ಣನಿದgರ್ಶ್ನವೆ ಮಹಾಕಲ್ಯಾಣವೆಂದರಿದು ದಿವ್ಯಶಾಸನವ ಬರೆದು ಪರಿಸಿದ ಕಾರಣ, ಎನ್ನ ಭವಂ ನಾಸ್ತಿಯಾಯಿತ್ತಯ್ಯಾ.**

ಇಷ್ಟೊಂದು ವ್ಯವಸ್ಥಿತವಾದ ಶಿಕ್ಷಣ ವ್ಯವಸ್ಥೆ ಇರುವ ದೇಶ ಮತ್ತೆಲ್ಲಿಯೂ ಇದ್ದ ಬಗ್ಗೆ ಮಾಹಿತಿ ಇಲ್ಲ. ಕಲ್ಯಾಣಕ್ಕೆ ಬಂದ ಅನಕ್ಷರಸ್ಥ ಕಾಯಕಯೋಗಿಗಳು ಅಲ್ಪ ಸಮಯದಲ್ಲಿ ಅಕ್ಷರಜ್ಞಾನ ಪಡೆದು ವಚನ ರಚಿಸಲು ಸಾಧ್ಯವಾದದ್ದು ಕಾರಣವೇ ಈ ಶಿಕ್ಷಣ ಪದ್ಧತಿ. ಹೆಣ್ಣುಮಕ್ಕಳಿಗೆ ಸಮಾನ ಅಧಿಕಾರ ನೀಡಿ ಅವರರಿಗೆ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟಿದ್ದು ಈ ದಾಸೋಹ ಮಠಗಳು. ಕಾಯಕ ಜೊತೆಜೊತೆಗೆ ವಿಧ್ಯಾಭ್ಯಾಸ ಮಾಡಿಸುವ ಈ ಪದ್ಧತಿ ಇಂದಿನ ಅವಶ್ಯಕತೆ. ಆ ಎಲ್ಲ ದಾಸೋಹಮಠಕ್ಕೆ ತಮ್ಮ ಕಾಯಕದಿಂದ ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಕಾಯಕಯೋಗಿಗಳು ನೀಡುತ್ತಿದುದರಿಂದ ದಾಸೋಹ ಮಠಗಳು ಯಾರ ಹಂಗಿಲ್ಲದೇ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದವು.
12 ನೇಯ ಶತಮಾನದಲ್ಲಿ ಅಣ್ಣ ಬಸವಣ್ಣನವರು ಸ್ಥಾಪನೆ ಮಾಡಿದ “ದಾಸೋಹ ಮಠ” ಗಳು ಇಂದಿಗೂ ಕಾರ್ಯನಿರ್ವಹಿಸಿ ಸಮಾಜದ ಏಳಿಗೆಯಲ್ಲಿ ಮಹತ್ವದ ಪಾತ್ರವಹಿಸುತ್ತಿವೆ.
ಅನೇಕ ಪರಿವರ್ತನೆಯನ್ನು ಕಂಡ ದಾಸೋಹ ಮಠಗಳು ಶರಣ ಸಾಹಿತ್ಯ ಜನಮನದಲ್ಲಿ ಉಳಿದು ಜಗತ್ತಿನಾದ್ಯಂತ ಪ್ರಚಲಿತವಾಗಲು ಕಾರಣವಾಗಿವೆ. ಕಾಲಕ್ರಮೇಣ “ದಾಸೋಹ ಮಠಗಳು” ಧಾರ್ಮಿಕ ಕೇಂದ್ರಗಳಾಗಿ ವಚನ ಸಾಹಿತ್ಯ ಉಳಿಸುವಲ್ಲಿ ಮತ್ತು ಬೆಳೆಸುವದರಲ್ಲಿ ಮಹತ್ವದ ಪಾತ್ರ ವಹಿಸಿದವು, ಅವುಗಳಿಗೆ ಆರ್ಥಿಕ ಸಹಾಯ ಸಿಕ್ಕಿದ್ದು

ಕಾಯಕಯೋಗಿಗ ಳಿಂದ. ಕಾಯಕಯೋಗಿಗಳ ಮತ್ತು ಮಠಗಳ ಸಂಬಂಧ ಇನ್ನೂ ಉಳಿದುಕೊಂಡು ಬಂದಿದೆ. ಪ್ರತಿದಿನ ಅಥವಾ ಹಬ್ಬದ ದಿನ ಮಠಗಳಿಗೆ ಎಡೆ ಕೊಡುವ ಸಂಪ್ರದಾಯ ಇನ್ನೂ ಹಳ್ಳಿಗಳಲ್ಲಿದೆ.
ಇಪ್ಪತ್ತನೇಯ ಶತಮಾನದಲ್ಲಿ ಮಠಗಳು ವಿದ್ಯಾರ್ಥಿಗಳಿಗಾಗಿ ಪ್ರಸಾದ ವ್ಯವಸ್ಥೆ ಮಾಡಿ ಬಡ ಮಕ್ಕಳು ತಮ್ಮ ಜೀವನ ರೂಪಿಸಿಕೊಳ್ಳಲು ನೆರವಾದರು.
ಆದರೆ ಕಾಯಕ, ಶಿಕ್ಷಣ ಮತ್ತು ಜೀವನ ಮಾರ್ಗ ಒಟ್ಟಾರೆಯಾಗಿ ರೂಪಿಸಬಲ್ಲ ವ್ಯವಸ್ಥೆ ಇನ್ನೂ ಪ್ರಾರಂಭ ಆಗಬೇಕಾಗಿದೆ.
--------

**ಅರುಣ :** ಮೊದಲಿಗೆ ಕಾಂತಶಕ್ತಿ ಮತ್ತು ವಿದ್ಯುತ್ ಶಕ್ತಿ ಬೇರೆ ಬೇರೆ ಎಂದು ಪರಿಗಣಿಸಿದ್ದರು. ಆದರೆ **1820** ರಲ್ಲಿ **Ampere and Faraday** ಎಂಬ ಸಂಶೋಧಕರು “ಚಲನೆಯಲ್ಲಿರುವ ವಿದ್ಯುತ್ ಚಾರ್ಜಗಳು ಕಾ0ತೀಯ ಕ್ಷೇತ್ರ ನಿರ್ಮಾಣಮಾಡುತ್ತವೆ ಮತ್ತು ಚಲಿಸುವ ಕಾ0ತಗಳು ವಿದ್ಯುತ್ ಶಕ್ತಿ ಉತ್ಪಾದಿಸುತ್ತವೆ” ಎಂದು ಸಾಧಿಸಿ ತೋರಿಸಿದರು.
**Maxwell and Lorentz** ಅವರು ಕಾಂತೀಯ ಶಕ್ತಿ ಮತ್ತು ವಿದ್ಯುತ್ ಶಕ್ತಿ ಒಂದನ್ನೊಂದು ಅವಲಂಬಿಸಿವೆ ಎಂದು ಸಾಧಿಸಿ ಇವೆರಡನ್ನು ಒಂದಾಗಿಸುವ ವಿದ್ಯುತ್ಕಾಂತಿಯ ಶಕ್ತಿ ಇದೆ ಎಂದು ಸಾಧಿಸಿದರು.
ವಿದ್ಯುತ್ಕಾಂತಿಯ ಶಕ್ತಿ ವಿಶ್ವದಲ್ಲಿರುವ ನಾಲ್ಕು ಮೂಲಭೂತ ಶಕ್ತಿಗಳಲ್ಲಿ ಒಂದು.
**Most of the phenomena occurring around us can be described under electromagnetism. Virtually every force that we can think of have its origin in electromagnetic force i.e. the forces like friction, chemical force between atoms holding the matter together, and even the forces describing processes occurring in cells of living organisms have its origin in electromagnetic force.**